# ಪ್ರಸಾದ

ದ್ವೈಮಾಸಿಕ

ಸಂಪುಟ ೩೭ ಸಂಚಿಕೆ ೫

ಸೆಪ್ಟೆಂಬರ್–ಅಕ್ಟೋಬರ್ ೨೦೨೨




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಗೆ ಪರಮಪೂಜ್ಯ ಜಗದ್ಗುರುಗಳವರು ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ಎಸ್.ಪಿ.ಯವರಾದ ಶ್ರೀ ಎನ್. ಯತೀಶ್, ಸಚಿವರಾದ ಶ್ರೀ ಕೆ. ಗೋಪಾಲಯ್ಯ, ಡಾ. ಕೆ.ಸಿ. ನಾರಾಯಣಗೌಡ, ಶಾಸಕರಾದ ಶ್ರೀ ರವಿಂದ್ರ ಶ್ರೀಕಂಠಯ್ಯ, ಜಿಲ್ಲಾಧಿಕಾರಿಗಳಾದ ಶ್ರೀಮತಿ ಎಸ್. ಅಶ್ವಥಿ ಮೊದಲಾದವರುಗಳಿದ್ದಾರೆ (28 ಸೆಪ್ಟೆಂಬರ್ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ವಿಜಯದಶಮಿಯಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿವರು ಧರ್ಮಪತ್ನಿ ಶ್ರೀಮತಿ ಚೆನ್ನಮ್ಮ ಬೊಮ್ಮಾಯಿಯವರೊಂದಿಗೆ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು. ಶಾಸಕರುಗಳಾದ ಶ್ರೀ ಎನ್. ಮಹೇಶ್, ಶ್ರೀ ಎಲ್. ನಾಗೇಂದ್ರ, ಶ್ರೀ ಜಿ.ಟಿ. ದೇವೇಗೌಡ, ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಮತ್ತು ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ ಮೊದಲಾದವರುಗಳಿದ್ದಾರೆ (5 ಅಕ್ಟೋಬರ್ 2022)

# ಪ್ರಸಾದ

**ಸಂಪುಟ 37 : ಸಂಚಿಕೆ 5** **ಸೆಪ್ಟೆಂಬರ್–ಅಕ್ಟೋಬರ್ 2022**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

---

ಮುಖಪುಟ ಚಿತ್ರ

ಕೊಯಮತ್ತೂರಿನ ಜೆಎಸ್‌ಎಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನಗಳ ಸಂಸ್ಥೆಯ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ತಮಿಳುನಾಡು ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಆರ್.ಎನ್. ರವಿಯವರು ಉದ್ಘಾಟಿಸಿದರು. ಶ್ರೀ ಎಸ್.ಪಿ. ಮಂಜುನಾಥ್, ಕುಲಪತಿಗಳಾದ ಡಾ. ಸುಧಾ ಶೇಷಯ್ಯನ್, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಆರ್. ಮಹೇಶ್ ಹಾಗೂ ಡಾ. ಬಿ. ಸುರೇಶ್‌ರವರುಗಳಿದ್ದಾರೆ (28 ಅಕ್ಟೋಬರ್ 2022)


**ದಶ ವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಗುಪ್ತ ಕಾಯಕದ ಶರಣ ಮರುಳಶಂಕರದೇವರು 11
**ಡಾ. ರಾಜಶೇಖರ ಜಮದಂಡಿ**

ಲಿಂಗಾಯತ ಅಧ್ಯಯನಗಳು 23
**ಪ್ರಕಾಶ ಗಿರಿಮಲ್ಲನವರ**

ಸೂಕ್ತ ಜಾತಿಸೂಚಕ ಯಾವುದು 29
**ಡಾ. ಬಸವರಾಜ ಎ. ಕಾಗಲಿ**

ಶರಣ ಮಾದಾರ ಧೂಳಯ್ಯನವರ ವೈಚಾರಿಕತೆ 33
**ನಗರ್ಲೆ ಶಿವಕುಮಾರ**

ವಾರ್ತಾವಿಹಾರ 39
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 59

## ಮನವಿ

ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1975 | ಮೂರನೇ ಸಂಚಿಕೆ |
| 7. | 1976 | ಮೂರನೇ ಸಂಚಿಕೆ |
| 8. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

**ಜ**ಗತ್ತಿನ ನಿತ್ಯದ ವಿದ್ಯಮಾನಗಳನ್ನು ಗಮನಿಸುತ್ತಿದ್ದರೆ ಒಂದು ಕಡೆ ಭೌತಿಕ ಬದುಕು ಒಂದಿಷ್ಟು ಮೇಲ್ಮುಖವಾಗಿ ಚಲಿಸುತ್ತಿರುವಂತೆ ಕಂಡುಬಂದರೂ, ಮತ್ತೊಂದು ಕಡೆ ಅದಕ್ಕಿಂತ ನೂರು ಪಟ್ಟು ಕ್ರೌರ್ಯ ವಿಜೃಂಭಿಸುತ್ತಿರುವುದು ಗೋಚರಿಸುತ್ತಿದ್ದು ನಾಳಿನ ಬದುಕಿನ ಬಗ್ಗೆ ಭರವಸೆಯೇ ಇಲ್ಲದಂತಾಗುತ್ತಿದೆ. ತಾತ್ವಿಕ ಸಂಘರ್ಷಗಳು ವ್ಯಕ್ತಿ ವ್ಯಕ್ತಿಗಳ ನಡುವೆ, ಗುಂಪುಗಳ ನಡುವೆ, ಆಗಾಗ ದೇಶಗಳ ನಡುವೆ ನಡೆಯುತ್ತಿದ್ದುದು ಹಿಂದೆಯೂ ಇತ್ತು. ಆನಂತರ ಅದು ಒಂದು ಸಮನ್ವಯದ, ಹೊಂದಾಣಿಕೆಯ ಮೂಲಕ ತಂತಾನೇ ಶಮನಗೊಳ್ಳುತ್ತಿತ್ತು.

ಈ ಹಿಂದೆ ಧರ್ಮ ಧರ್ಮಗಳ ನಡುವೆ ಸಂಘರ್ಷಗಳು ನಡೆದಿರುವುದೂ ಇದೆ. ಧರ್ಮಪೀಠಗಳಲ್ಲಿ, ರಾಜರ ಆಸ್ಥಾನಗಳಲ್ಲಿ 'ಖಂಡನ ಮಂಡನ'ಗಳು ನಡೆಯುತ್ತಿದ್ದುವು. ಅವು ತಾತ್ವಿಕ ಜಿಜ್ಞಾಸುಗಳ ನಡುವೆ, ಧರ್ಮಾಚಾರ್ಯರುಗಳ ನಡುವೆ ನಡೆಯುತ್ತಿದ್ದ ಸಾತ್ವಿಕ ಸಂಘರ್ಷಗಳು ಮಾತ್ರ ಆಗಿದ್ದವು.

ಆದರೆ ಇಂದಿನ ಸಂಘರ್ಷದ ಸ್ವರೂಪವೇ ಬೇರೆಯಾಗಿದೆ. ಅನೇಕ ರೀತಿಯ ಅಣ್ವಸ್ತ್ರಗಳನ್ನು ದಾಸ್ತಾನು ಮಾಡಿಕೊಂಡಿರುವ ಮುಂದುವರಿದ ರಾಷ್ಟ್ರಗಳು ಏನೇನೋ ನೆಪಗಳನ್ನು ಒಡ್ಡಿ (ತೋಳ ಕುರಿಮರಿಯ ಕತೆ ಎಲ್ಲರಿಗೂ ತಿಳಿದದ್ದೇ) – ಜನರನ್ನು ಕ್ರಿಮಿಕೀಟಗಳಿಗಿಂತಲೂ ಕಡೆಯಾಗಿ ಭಾವಿಸಿ, ಅವರನ್ನು ನಿರ್ನಾಮ ಮಾಡಲು, ಸದಾ ಸಜ್ಜಾಗಿ ಕಾರ್ಯಪ್ರವೃತ್ತವಾಗುತ್ತಿರುವುದು ಕಂಡುಬರುತ್ತಿದೆ. ಮಾಧ್ಯಮಗಳಲ್ಲಿ ಆ ದೃಶ್ಯಗಳನ್ನು ನೋಡುತ್ತಿದ್ದರೆ ಎಂತಹವರಿಗೂ ಕರುಳು ಕಿತ್ತುಬಂದ ಹಾಗಾಗುತ್ತದೆ.

ಆದರೆ ಇಂದು ಅಂತಹ ತಾತ್ವಿಕತೆಯ ಕಾರಣಗಳು ಎಲ್ಲಿಯೂ ಕಂಡುಬರುತ್ತಿಲ್ಲ. ಎಲ್ಲವೂ ಅಧಿಕಾರಕೇಂದ್ರಿತವಾಗಿ ರಾಕ್ಷಸೀಯ ರೂಪವನ್ನು ತಾಳಿವೆ. ಉಕ್ರೇನ್ ಎನ್ನುವ ಪುಟ್ಟ ರಾಜ್ಯದ ಮೇಲೆ ರಷ್ಯಾ ದಾಳಿ, ಅಮೆರಿಕದ ಮೇಲೆ ಸದ್ದಿಲ್ಲದೆ ಅಸ್ತ್ರಗಳನ್ನು ಅಣಿಗೊಳಿಸುತ್ತಿರುವ ಚೀನಾ, ಇರಾನ್ ಮತ್ತು ಅಮೆರಿಕ ನಡುವಣ ಸಂಘರ್ಷ, ಪ್ಯಾಲೆಸ್ತೈನ್–ಇಸ್ರೇಲ್ ನಡುವಿನ ಹಗ್ಗಜಗ್ಗಾಟ, ಇಷ್ಟಲ್ಲದೆ ಅನೇಕ ದೇಶಗಳ ಆಂತರಿಕ ದಂಗೆಗಳು – ಹೀಗೆ ಪಟ್ಟಿ ಮಾಡುತ್ತಾ ಹೋದರೆ ಮನುಕುಲದ ಉಳಿವಿನ ಬಗ್ಗೆ ಅನುಮಾನವುಂಟಾಗುತ್ತದೆ. ಇತ್ತೀಚಿನ ದಿನಗಳಲ್ಲಂತೂ ಧರ್ಮ ಮತ್ತು ರಾಜಕೀಯ ಒಂದರೊಳಗೊಂದು ಬೆರೆತು ಧರ್ಮರಕ್ಷಕರೆನಿಸಿಕೊಂಡ ವಿಪರೀತವಾದಿಗಳು ಕೊಲೆ ಸುಲಿಗೆಯಲ್ಲಿ ನಿರತರಾಗಿ ಜನಸಾಮಾನ್ಯರ ಪಾಲಿಗೆ ಬದುಕು ದುರ್ಭರವೆನಿಸಿದೆ.

ಹಿಂಸೆಯಿಂದಲೇ ಜಗತ್ತಿನ ಮೇಲೆ ತನ್ನ ಹಿಡಿತವನ್ನು ಸಾಧಿಸುತ್ತೇನೆ ಎಂದು ಹಠ ತೊಟ್ಟು ಮುನ್ನುಗ್ಗುತ್ತಿರುವ ಆಧುನಿಕ ನಾಗರಿಕ ಮಾನವ, ತನ್ನ ದಾರಿಯನ್ನು ಹೇಗೆ ಬದಲಿಸಬೇಕು ಎನ್ನುವುದಕ್ಕೆ ಕನ್ನಡದ 'ಯಶೋಧರ ಚರಿತೆ' ಕಾವ್ಯ ಒಂದು ಕೀಲಿಕೈಯನ್ನು ಒದಗಿಸುತ್ತದೆ. ಅದು ಹೀಗಿದೆ–

ರಾಜ ಯಶೋಧರನ ಪತ್ನಿ ಅಮೃತಮತಿ ಅರಮನೆ ಲಾಯದ ಕೆಲಸಗಾರ ಅಷ್ಟಾವಕ್ರನನ್ನು ಮೋಹಿಸಿದ್ದು, ಅದನ್ನು ಕಣ್ಣಾರೆ ಕಂಡು ಅವರನ್ನು ಕೊಲ್ಲಬಯಸಿದ ಯಶೋಧರ ಖಡ್ಗವನ್ನು ಒರೆಯಿಂದ ಎಳೆದರೂ, ಕೊಲೆಯ ಹಿಂಸೆಗೆ ಬೇಸರಿಸಿ ತಾಯಿಯ ಬಳಿ ವಾಸ್ತವವನ್ನು ಹೇಳಲು ಸಂಕೋಚಪಟ್ಟು 'ರಾತ್ರಿ ಕೆಟ್ಟ ಕನಸೊಂದನ್ನು ಕಂಡೆ' ಎಂದು ಅದನ್ನು ಬೇರೊಂದು ರೀತಿಯಲ್ಲಿ ಹೇಳಿದ್ದು, ತಾಯಿ ಅದರ ಶಾಂತಿಗಾಗಿ ಕೋಳಿಯನ್ನು ಬಲಿ ಕೊಡಬೇಕು ಎಂದುಕೊಂಡರೂ ಅದೂ ಪ್ರಾಣಿಹಿಂಸೆಯೇ ಆಗುತ್ತದೆ ಎಂದುಕೊಂಡು, ಹಿಟ್ಟಿನ ಕೋಳಿಯೊಂದನ್ನು ಮಾಡಿಸಿ ಬಲಿ ಕೊಟ್ಟುದು, ಬಲಿ ಕೊಡುವಾಗ ಅದರಲ್ಲಿ ಸೇರಿಕೊಂಡಿದ್ದ ಬೆಂತರವೊಂದು ನೋವಿನಿಂದ ಕಿರುಚಿಕೊಂಡದ್ದು, ಅದನ್ನು ಕೇಳಿ ಇದೂ ಒಂದು ರೀತಿಯ ಕೊಲೆಯೇ ಆಯಿತಲ್ಲ ಎಂದುಕೊಂಡು ವೈರಾಗ್ಯಪರರಾಗಿ ಪ್ರಾಯಶ್ಚಿತ್ತಕ್ಕಾಗಿ ಅನೇಕ ಜನ್ಮಗಳನ್ನು ಎತ್ತಬೇಕಾಗುತ್ತದೆ. ಇದು ಕಾವ್ಯದ ಒಂದು ಹಂತದ ಕಥೆ.

ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ವಾಸ್ತವವಾಗಿ ಆ ತಾಯಿ ಮತ್ತು ಮಗ ಯಾವ ಪ್ರಾಣಿಹಿಂಸೆಯನ್ನೂ ಮಾಡಲಿಲ್ಲ. ಸಾಂಕೇತಿಕವಾಗಿ ಹಿಟ್ಟಿನ ಕೋಳಿಯನ್ನು ಬಲಿ ಕೊಟ್ಟರು ಅಷ್ಟೆ. ಆದರೆ ಇಲ್ಲಿ ತರ್ಕಿಸಬೇಕಾದ ಮನೋವೈಜ್ಞಾನಿಕ ಅಂಶವೆಂದರೆ, ಕೋಳಿಯನ್ನು ಬಲಿ ಕೊಡದಿದ್ದರೂ ಬಲಿ ಕೊಡಬೇಕು ಎಂಬ ಭಾವವಂತೂ ಅವರಲ್ಲಿ ಸುಳಿದಿತ್ತು. ನಿಜವಾದ ಪ್ರಾಣಿಯನ್ನು ಬಲಿ ಕೊಡುವುದು 'ದ್ರವ್ಯಹಿಂಸೆ' ಎನಿಸಿಕೊಂಡರೆ, ಬಲಿ ಕೊಡಬೇಕು ಎನ್ನುವ ಅನಿಸಿಕೆ 'ಭಾವಹಿಂಸೆ'ಯಾಗುತ್ತದೆ. ಇಲ್ಲಿನ ಧರ್ಮಸೂಕ್ಷ್ಮವೆಂದರೆ ಕೊಲ್ಲುವುದಕ್ಕಿಂತಲೂ, ಕೊಲ್ಲಬೇಕೆಂಬ ಭಾವ ಹೆಚ್ಚು ಪಾಪಕರವಾದದ್ದು. ಏಕೆಂದರೆ ಹಿಂಸಾಭಾವ ಮೊದಲು ಮನುಷ್ಯನ ಒಳಗೆ ಹರಳುಗಟ್ಟಿದ ನಂತರವಷ್ಟೇ ಅವನು ಆ ಕ್ರಿಯೆಗೆ ಉದ್ಯುಕ್ತನಾಗುತ್ತಾನೆ. ಆದ್ದರಿಂದ ಮನುಷ್ಯ ತನ್ನ ಭಾವಕೋಶವನ್ನು ಸದಾ ಶುದ್ಧಿಗೊಳಿಸಿಕೊಳ್ಳುತ್ತಿರಬೇಕು. ಆಗ ಹೊರಗಿನ ಕರಾಳ ಕೃತ್ಯಗಳು ತಮ್ಮಷ್ಟಕ್ಕೆ ತಾವೇ ಇಲ್ಲವಾಗುತ್ತವೆ. ಅದಕ್ಕಾಗಿಯೇ ಈ ಭಾವಶುದ್ಧೀಕರಣಕ್ಕಾಗಿಯೇ ಅನೇಕ ಧಾರ್ಮಿಕ ಕ್ರಿಯಾಚರಣೆಗಳನ್ನು ತಂದು ಆಯಾ ಸ್ತರದವರಿಗೆ ತಕ್ಕಂತೆ ಭಕ್ತಿಸಮರ್ಪಣೆಯ ವಿಧಿವಿಧಾನಗಳನ್ನು ರೂಪಿಸಲಾಗಿದೆ. ಸುದೀರ್ಘ ಇತಿಹಾಸವಿರುವ ಭಾರತೀಯ ಪರಂಪರೆಯಲ್ಲಿ ಮುಂಬರುವ ದೀಪಾವಳಿಯ ಆಚರಣೆಯೂ ಅಂಥದೊಂದು ವಿಧಿವಿಧಾನ.

ಈ ದೀಪಾವಳಿಯಲ್ಲಿ ವಿಜೃಂಭಿಸುವ ಹೊರಬೆಳಕು, ಒಳಬೆಳಕಾಗಿ ಪರಿವರ್ತನೆಗೊಂಡು 'ಚಿಜ್ಯೋತಿ'ಯಾಗಿ ಲೋಕದಲ್ಲಿ ಶಾಶ್ವತ ಶಾಂತಿ ನೆಲೆಸಲೆಂದು ಶುಭ ಹಾರೈಸುತ್ತೇವೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

**ಖ್ಯಾ**ತ ಶರಣತತ್ವ ಚಿಂತಕರಾದ ಶ್ರೀ ಶಂಕರ್ ದೇವನೂರುರವರು ಒಮ್ಮೆ ನನಗೆ ಹೇಳಿದ ಒಂದು ಘಟನೆಯನ್ನು ಇಲ್ಲಿ ನಿರೂಪಿಸುತ್ತೇನೆ.

ಒಮ್ಮೆ ಅವರು ಗದಗಿನ ತೋಂಟದಾರ್ಯ ಮಠಕ್ಕೆ ಪ್ರವಚನ ಮಾಡಲು ಹೋಗಿದ್ದರಂತೆ. ಪ್ರವಚನ ಮುಗಿಸಿಕೊಂಡು, ಅವರು ಮಠದಿಂದ ಶ್ರೀ ವೀರೇಶ್ವರ ಪುಣ್ಯಾಶ್ರಮಕ್ಕೆ ಹೋದರು. ಅಲ್ಲಿಯೇ ಇದ್ದ ಒಬ್ಬ ಹುಡುಗ ಶ್ರೀಮಠದಿಂದ ಇವರನ್ನೇ ಹಿಂಬಾಲಿಸಿಕೊಂಡು ಆಶ್ರಮಕ್ಕೆ ಬಂದಿದ್ದ. ಆ ಹುಡುಗನನ್ನು ಕಂಡು ಕುತೂಹಲದಿಂದ 'ನೀನು ಯಾರಪ್ಪ' ಅಂದರು.

ಆತ 'ನಾನು ಇಲ್ಲಿ ಆಶ್ರಮದಲ್ಲಿಯೇ ಇದ್ದೇನೆ. ಪೂಜ್ಯ ಗುರುಗಳು ಸಂಗೀತ ಹೇಳಿಕೊಡುವುದನ್ನು ಕೇಳಿಸಿಕೊಂಡು, ಅವರನ್ನು ನೋಡಿ ಕಣ್ತುಂಬಿಕೊಳ್ಳುತ್ತಾ, ನನ್ನನ್ನೇ ನಾನು ಮರೆಯುತ್ತೇನೆ. ಪೂಜ್ಯ ಗವಾಯಿಗಳು ಕಣ್ಣಿಲ್ಲದಿದ್ದರೂ ನನ್ನಂತಹ ಸಾವಿರಾರು ಜನಕ್ಕೆ ಕಣ್ಣು ಕೊಟ್ಟಿದ್ದಾರೆ' ಎಂದು ಪಟಪಟನೆ ಮಾತನಾಡಿದ. ಆತನ ಮಾತಿಗೆ ಮೆಚ್ಚಿ ಶಂಕರ್‌ರವರು 'ಈ ಹಣವನ್ನು ಇಟ್ಟುಕೋ. ಯಾತಕ್ಕಾದರೂ ಬೇಕಾಗುತ್ತದೆ' ಎಂದು ಒಂದಿಷ್ಟು ಹಣ ಕೊಡಲು ಹೋದರು. ಆತ ನೇರವಾಗಿ 'ಇಲ್ಲಿ ನನಗೆ ಯಾವುದೇ ಹಣದ ಅವಶ್ಯಕತೆ ಇಲ್ಲ. ಗುರುಗಳ ಸನ್ನಿಧಿಯೇ ನನಗೆ ಎಲ್ಲವನ್ನೂ ಕೊಟ್ಟಿದೆ. ಅದಕ್ಕಿಂತ ಇನ್ನೇನು ಬೇಕು? ತಾವು ತುಂಬಾ ಚೆನ್ನಾಗಿ ಪ್ರವಚನ ಮಾಡಿದಿರಿ, ಸರ್' ಎಂದು ಹೇಳುತ್ತಾ ಶಂಕರ್‌ರವರ ಕಾಲಿಗೆ ನಮಸ್ಕರಿಸಿ, "ತಮ್ಮ ಮೊಬೈಲ್ ನಂಬರ್ ಕೊಡಿ ಸರ್ ತಮ್ಮೊಡನೆ ಆಗಾಗ ಮಾತನಾಡುತ್ತಿರುತ್ತೇನೆ" ಎಂದ. ಆಗ ಶಂಕರ್ 'ನಿನ್ನ ಬಳಿ ಮೊಬೈಲ್ ಇದೆಯಾ' ಎಂದರು. ಆಗ ಆತ 'ನಮ್ಮ ಅಕ್ಕನ ಬಳಿ ಇದೆ; ಊರಿಗೆ ಹೋದಾಗ ಮಾತನಾಡುತ್ತೇನೆ' ಎಂದ. ಆಗ ಇವರು 'ಇದಕ್ಕೇನು ಸಾಕ್ಷಿಯಪ್ಪ' ಎಂದರು ನಗುತ್ತಾ. ತಕ್ಷಣ ಆತ, 'ಇಲ್ಲಿ ಗುರುಗಳ ಪಾದದ ಬಳಿ, ಅವರು ನಡೆದಾಡುವ ನೆಲದಲ್ಲಿ ನಿಂತು ಹೇಳುತ್ತಿಲ್ಲವೇ, ಇದಕ್ಕಿಂತ ದೊಡ್ಡ ಸಾಕ್ಷಿ ಬೇಕೆ ಸರ್' ಎಂದುಬಿಟ್ಟ.

ಈ ಮಾತನ್ನು ಕೇಳಿದ ಶಂಕರ್‌ರವರು ಸ್ವಲ್ಪ ಹೊತ್ತು ಅವಾಕ್ಕಾದರಂತೆ. ಆತ ಇನ್ನೂ ಹೈಸ್ಕೂಲು ದಾಟಿರದ ವಯಸ್ಸಿನ ಹುಡುಗ. ಹೆಚ್ಚಿನ ವಿದ್ಯಾಭ್ಯಾಸಕ್ಕೆ

ತೆರೆದುಕೊಂಡವನೂ ಅಲ್ಲ. ಆದರೂ... ಆದರೂ ಅವನ ಮೈಮನಗಳಲ್ಲೆಲ್ಲಾ ಆ ಪುಣ್ಯಾಶ್ರಮದ ಅವರಣದಲ್ಲಿನ ಸಾತ್ವಿಕ ಪ್ರಭಾವ ಹೆಪ್ಪುಗಟ್ಟಿತ್ತು. 'ಇಲ್ಲಿ ನಿಂತು ನಾನು ಮಾತನಾಡುತ್ತಿಲ್ಲವೇ' ಎನ್ನುವ ಮಾತಿನಲ್ಲಿ, ಪುಟ್ಟರಾಜ ಗವಾಯಿಗಳವರ ಸಾಧನೆ, ವ್ಯಕ್ತಿತ್ವ, ತ್ಯಾಗ ಎಲ್ಲವೂ ಘನೀಕರಿಸಿ, ಇಡೀ ಆವರಣವನ್ನು ಹೇಗೆ ಪಾವನವಾಗಿಸಿತ್ತು ಎನ್ನುವುದು ವ್ಯಕ್ತವಾಗುತ್ತಿತ್ತು. ಅವನಿಗೆ ನಿಂತ ನೆಲವೇ 'ಕ್ಷೇತ್ರ'ವಾಗಿತ್ತು. ನಿತ್ಯವೂ ಕಿವಿಗೆ ಬಿದ್ದು ಚಿತ್ತಸ್ತರಕ್ಕೆ ಹರಿಯುತ್ತಿದ್ದ ಗುರುಗಳ ಅನಂತನಾದವೇ 'ತೀರ್ಥ'ವಾಗಿತ್ತು. ಆದ್ದರಿಂದಲೇ ಅವನ ಇಡೀ ವ್ಯಕ್ತಿತ್ವ ಪರುಷ ಮುಟ್ಟಿದ ಅವಲೋಹವಾಗಿತ್ತು. ಶಂಕರ್‌ರವರು ಆಗಾಗ ಇದನ್ನು ಎಲ್ಲರಿಗೂ ಹೇಳುತ್ತಾ, 'ಈತನ ಮುಂದೆ ನಾವೆಷ್ಟರವರು' ಎಂದು ಆತ್ಮಾವಲೋಕನ ಮಾಡಿಕೊಳ್ಳುತ್ತಿರುತ್ತಾರೆ.

ಕೆಲವು ವರ್ಷಗಳ ಹಿಂದಿನ ಒಂದು ಸಣ್ಣ ಘಟನೆ...

ಮೈಸೂರು ನಗರದಲ್ಲಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಪ್ರವಚನ ನಡೆಯುತ್ತಿತ್ತು. ಅಪರೂಪಕ್ಕೆ ಸಿಕ್ಕುವ ಅಂತಹ ಅವಕಾಶಕ್ಕಾಗಿ ಇಲ್ಲಿನ ಜನತೆ ಬೆಳಗಿನ ಜಾವವಾದರೂ ಸರಿ, ರಾತ್ರಿಯಾದರೂ ಸರಿ ಕಿಕ್ಕಿರಿದು ಸೇರುತ್ತಾರೆ. ಅವರ ಪ್ರವಚನ ಸಂಜೆ 7 ರಿಂದ 8 ಗಂಟೆಯ ತನಕ ನಡೆಯುವ ಏರ್ಪಾಡಾಗಿತ್ತು. ಎಂದಿನಂತೆ ಜನ ಸೇರಿದ್ದರು. ಇಂತಹ ಪ್ರವಚನಗಳಿಗೆ ಮಧ್ಯವಯಸ್ಸನ್ನು ಮೀರಿದವರೇ ಹೆಚ್ಚು ಸೇರುತ್ತಾರೆ. ಒಂದು ದಿನ ಅವರ ಪ್ರವಚನ ಕರಾರುವಾಕ್ಕಾಗಿ 8 ಗಂಟೆಗೆ ಮುಗಿಯಿತು. ಅಂದು ವಿದ್ಯುಚ್ಛಕ್ತಿ ಕೈಕೊಟ್ಟು ಸುತ್ತಲೆಲ್ಲಾ ಕತ್ತಲು ಆವರಿಸಿತ್ತು. ಜನರೆಲ್ಲ ಚದುರಿಹೋದರೂ ಒಂದಿಬ್ಬರು ಅಪರವಯಸ್ಕರು ಒಬ್ಬರ ಮೇಲೆ ಮತ್ತೊಬ್ಬರು ಆಪಾದನೆ ಹೊರಿಸುತ್ತಾ ಜಗಳ ತೆಗೆದಿದ್ದರು. ಆ ಜಗಳಕ್ಕೆ ಇದ್ದ ಸಣ್ಣ ಕಾರಣ ಇಷ್ಟೆ –

ಇಬ್ಬರೂ ತಮ್ಮ ತಮ್ಮ ಕಾರಿನಲ್ಲಿ ಹೊರಡುವಾಗ ಒಬ್ಬರ ಕಾರಿನ ಬಂಪರ್ ಮುಂದಿನ ಕಾರಿನ ಹಿಂಭಾಗಕ್ಕೆ ಸ್ವಲ್ಪ ತಗುಲಿ, ಒಂದಿಷ್ಟು ಬಣ್ಣ ಅಳಿಸಿಹೋಗಿತ್ತು. ಹೆಚ್ಚೆಂದರೆ ಕೇವಲ ನೂರು ರೂಪಾಯಿ ಕೊಟ್ಟಿದ್ದರೆ ವರ್ಕ್‌ಶಾಪಿನಲ್ಲಿ ಬಣ್ಣ ಹಚ್ಚುವವನು ಹತ್ತು ನಿಮಿಷದಲ್ಲೇ ಅದನ್ನು ಮೊದಲಿನಂತೆಯೇ ಮಾಡುತ್ತಿದ್ದ. ಇಂತಹ ಸಣ್ಣ ವಿಷಯಕ್ಕೆ ಒಬ್ಬರಿಗೊಬ್ಬರು ದೂಷಿಸುತ್ತಾ ನಿಂತುಕೊಂಡಿದ್ದರು. ಜನರೆಲ್ಲಾ ಕರಗಿದರೂ ಆ ಕತ್ತಲೆಯಲ್ಲಿ ಅವರಿಬ್ಬರೇ ಆರೋಪ ಪ್ರತ್ಯಾರೋಪ ಮಾಡುತ್ತ ನಿಂತೇ ಇದ್ದರು. ಈ ಸನ್ನಿವೇಶವನ್ನು ಕಂಡ ನಾನು ಹಾಗೆಯೇ ಯೋಚಿಸಿದೆ. ಇಂತಹ ಸಣ್ಣಪುಟ್ಟವು ಆಗಿಯೇ ಆಗುತ್ತವೆ ಎನ್ನುವುದು ವಾಹನ ಹೊಂದಿರುವವರಿಗೆಲ್ಲಾ ಗೊತ್ತಿರುವಂಥದೆ. ಕೆಲವೊಮ್ಮೆ ತಪ್ಪು ಯಾರದು ಎಂದು ಹೇಳುವುದೂ ಕಷ್ಟವಾಗುತ್ತದೆ. ಅಷ್ಟಕ್ಕೂ ಅವರು ಬಂದಿದ್ದುದು ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಪ್ರವಚನ ಕೇಳುವುದಕ್ಕೆ! ಅವರ ಪ್ರವಚನಗಳನ್ನು ನಿತ್ಯವೂ ಕೇಳುತ್ತಾ ಬರುತ್ತಿರುವ ಇವರಿಗೆ ಒಂದಿಷ್ಟು ಸಮಾಧಾನ, ತಾಳ್ಮೆ, ಸಹನೆ,

ಒಂದು ನಿರ್ಜೀವ ವಾಹನಕ್ಕೆ ಆಗಿರುವ ಒಂದು ಸಣ್ಣ ಮುಕ್ಕನ್ನು ಮರೆತು ನಿರುಮ್ಮಳವಾಗಿ, ಪೂಜ್ಯರ ಮಾತುಗಳನ್ನು ಮನನ ಮಾಡುತ್ತಾ ಮನೆಗೆ ಹೋಗುವ ಗುಣ ಇದಾವುದೂ ಬರಲಿಲ್ಲ ಎಂದ ಮೇಲೆ ಪ್ರವಚನ ಕೇಳಲು ಫ್ಯಾಶನ್‌ಗಾಗಿ ಬರುತ್ತಾರೆಯೇ? (ಇದೂ ಕೆಲವರಲ್ಲಿ ಉಂಟು.)

'ಏನನೋದಿ ಏನ ಕೇಳಿ ಫಲವೇನು? ಆಸೆ ಬಿಡದು, ರೋಷ ಹಿಂಗದು' ಎನ್ನುವ ಶರಣರ ಮಾತು ಇಂತಹವರನ್ನೇ ಕಂಡು ಹೇಳಿದಂತಿದೆಯಲ್ಲವೇ? ಅಂತೂ ಜಗಳ ಬಗೆಹರಿಯುವಂತೆ ಕಾಣಿಸುತ್ತಿಲ್ಲ. ಹೊರಗೆ ಕತ್ತಲೆ ದಟ್ಟೈಸುತ್ತಲೇ ಇತ್ತು. ಇವರ ಒಳಗಿನ ಕತ್ತಲೆಯೇ ವಿಸ್ತರಿಸಿ ಭೂಮಿ ಆಕಾಶವನ್ನೆಲ್ಲಾ ತುಂಬಿಕೊಂಡಂತೆ! ಈ ಸನ್ನಿವೇಶ ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಈಗ ಒಂದಿಷ್ಟು ಯೋಚಿಸೋಣ.

ಒಂದು ಕಡೆ ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ಹಿಡಿದವರಂತೆ ಜಗಳ ಮಾಡಿದ ಈ ಅಪರವಯಸ್ಕರು, ಮತ್ತೊಂದು ಕಡೆ ಆ ಮುಗ್ಧ ಹುಡುಗ. ನಿತ್ಯವೂ ಭಾಷಣಕ್ಕೆ ತಪ್ಪದೆ ಹಾಜರಾಗುತ್ತಿದ್ದ, ಅಪಕ್ವ ಮನಸ್ಸಿನ ವೃದ್ಧರ ಮೇಲೆ ಶ್ರೀ ಸಿದ್ಧೇಶ್ವರರ ಪ್ರವಚನ ಏನೂ ಪರಿಣಾಮವನ್ನು ಉಂಟುಮಾಡಲಿಲ್ಲವೇ? ಹಾಗೆ ಅದು ಒಂದಿಷ್ಟಾದರೂ ಇವರ ಅರಿವಿಗೆ ದಕ್ಕಿದ್ದರೆ, ಅವರ ಮನಸ್ಸನ್ನು ಸ್ವಲ್ಪವಾದರು ಹದಗೊಳಿಸಿದ್ದರೆ ಅವರು ತಮ್ಮ ಅಳಿದುಳಿದ ಆಯಸ್ಸನ್ನು ಹೀಗೆ ಕ್ಷುಲ್ಲಕ ವಿಚಾರಕ್ಕೆ ವ್ಯಯ ಮಾಡುತ್ತಿದ್ದರೆ?

ಇವರೆಲ್ಲ ತಮ್ಮ ಹಸಿವನ್ನು ಹಿಂಗಿಸಿಕೊಳ್ಳಲು ಹೊಟ್ಟೆಯ ಮೇಲೆ ಕಟ್ಟೋಗರವ ಕಟ್ಟಿಕೊಂಡವರಂತೆ ತಾವು ಮಹಾ ಅಧ್ಯಾತ್ಮ ಜೀವಿಗಳೆಂದು ತೋರಿಸಿಕೊಳ್ಳಬೇಕು ಎನ್ನುವ ಚಪಲ. ಹಾಗೆ ತೋರಿಸಿಕೊಳ್ಳಲು ಅತಿ ಸುಲಭ ಸಾಧನವೆಂದರೆ ಲಾಂಛನ ಧರಿಸಿ ಹುಸಿ ಆಧ್ಯಾತ್ಮದ ಮಾತುಗಳನ್ನು ಆಡುತ್ತಾ ಅಡ್ಡಾಡುವುದು. ವೇಷಕ್ಕೆ ತಕ್ಕ ಭಾಷೆಯೂ ಇಲ್ಲ; ಭಾಷೆಯ ಹಿಂದಿನ ಭಾವವೂ ಸರಿ ಇಲ್ಲ.

ಇತ್ತೀಚಿನ ದಿನಮಾನಗಳಲ್ಲಿ ದೈವಸಂಬಂಧಿ ಉತ್ಸವಗಳು ಎಲ್ಲ ಕಡೆ ಪೈಪೋಟಿ ಯೆಂಬಂತೆ ವಿಜೃಂಭಿಸುತ್ತಿವೆ.

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲ ನಾರಿ ದೈವ, ಕಾಣಿರೋ!
ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೋ!
ದೈವ ದೈವವೆಂದು ಕಾಲಿಡಲಿಂಬಿಲ್ಲ

ಇಂಥ ಉತ್ಸವಗಳಿಗೇನಾದರೂ ರಾಜಕೀಯ ಬಲ, ಹಣಬಲ, ಜಾತಿಬಲ ಸೇರಿಬಿಟ್ಟರಂತೂ ಇವೆಲ್ಲ ದೊಡ್ಡ ದೊಡ್ಡ ಪವಾಡಗಳ ಪರಿವೇಷವನ್ನು ಕಟ್ಟಿಕೊಂಡು

ಅಕರಾಳ ವಿಕರಾಳವಾಗಿ ಮೆರೆಯುತ್ತವೆ. ಇದರ ಹುನ್ನಾರವನ್ನು ಸೂಕ್ಷ್ಮವಾಗಿ ತಿಳಿಯಲಾರದ ಮುಗ್ಧರು, ಅರೆ ಬೆಂದ ಮನಸ್ಸಿನವರು ಮತ್ತಷ್ಟು ಮೌಢ್ಯತೆಯ ಪ್ರಪಾತಕ್ಕೆ ಕುರಿಮಂದೆಯಂತೆ ಜಿಗಿಯುತ್ತಾರೆ. ಭಕ್ತಿಯ ಅಭಿನಯ ಮಾಡುತ್ತಾರೆ.

ಭಕ್ತಿ ಎನ್ನುವುದು ನಿಜಕ್ಕೂ ಸ್ವಾನುಭವವಾಗಿದ್ದರೆ, ಸತ್ಸಂಗದ ಮಾತುಗಳು ನಮ್ಮೊಳಗನ್ನು ತೋಯಿಸಿದ್ದರೆ, ಆ ಅಪರವಯಸ್ಕರ ಒಳಗೆ ಹೊರಗಿನ ಕತ್ತಲೆಯನ್ನೂ ಮೀರಿಸುವಂತಹ ಕಗ್ಗತ್ತಲೆ ತುಂಬಿಕೊಳ್ಳಲು ಸಾಧ್ಯವಿರುತ್ತಿರಲಿಲ್ಲ. ತಲೆಯೊಳಗೆ ಎಲ್ಲ ವಿಕಾರಗಳನ್ನೂ ತುಂಬಿಕೊಂಡವರಿಗೆ ಭಕ್ತಿಯೆಂಬುದು ಕೇವಲ ತೋರುಂಬ ಲಾಭವಾಗಿ ಮಾತ್ರ ಕಂಡುಬರುತ್ತದೆ.

ಇಂತಹವರಿಗೆ ಸಿದ್ಧೇಶ್ವರರ ಪ್ರವಚನವಾದರೇನು, ಹಾಳೂರು ಶುನಕನ ಊಳಿಡುವಿಕೆಯಾದರೇನು? ಎರಡೂ ಬರಿಯ ಶಬ್ದಗಳು ಮಾತ್ರ ಆಗಿರುತ್ತವೆ. ನಮ್ಮ ಜನಪದರ ಹಾಡಿನಲ್ಲಿ ಹೀಗೊಂದು ಸಾಲು ಬರುತ್ತದೆ. 'ಬೆಟ್ಟಕ್ಕೆ ಹೋಗೋರ್ಗೆ ಹಟ್ಟಿಯ ಹಂಗ್ಯಾಕೆ' ಎಂದು. ಹೀಗೆ ಹೇಳಿದವರು ಪ್ರವಚನ ಕೇಳಲು ಬಂದು ಕಾಲ್ಕೆರೆದು ಜಗಳಕ್ಕೆ ನಿಂತ ರೀತಿಯ ದೊಡ್ಡವರೇನಲ್ಲ. ಅವರು ನಿರಕ್ಷರಕುಕ್ಷಿಗಳು, ಬಡವರು, ರೈತಾಪಿ ಜನ. ಅಂತಹವರಿಗೇ ಇಂತಹ ಭಕ್ತಿಮಾರ್ಗದ ಪರಿಕಲ್ಪನೆ ಇರುವಾಗ, ನಾಗರಿಕರೆನಿಸಿಕೊಂಡ ನಮ್ಮನ್ನು ಹಿಡಿದಿರುವ 'ಗರ'ವಾದರೂ ಯಾವುದು?

ಈ ಹಿನ್ನೆಲೆಯಲ್ಲಿ ಶ್ರೀ ದೇವನೂರು ಶಂಕರ ಅವರು ಹೇಳಿದ ಆ ಹುಡುಗನ ಘಟನೆ ಮತ್ತೆ ಮತ್ತೆ ನನ್ನನ್ನು ಕಾಡುತ್ತಿದೆ. ಇದು ಎಲ್ಲರನ್ನೂ ಕಾಡಬೇಕಾದ ಸಂಗತಿಯೇ. ಆತನಿಗೆ ತಾನು ನಿಂತ ಆಶ್ರಮದ ನೆಲವೇ ಧರ್ಮಕ್ಷೇತ್ರವಾಗಿತ್ತು. ಆದರೆ ಈ ಅಪರವಯಸ್ಕ ತದಾಕಥಿತ ನಾಗರಿಕರ ಒಳಹೊರಗೆಲ್ಲಾ ಕುರುಕ್ಷೇತ್ರವಾಗಿತ್ತು. ಈಗ ಯಾರು ನಮಗೆ ಆದರ್ಶವಾಗಬೇಕು?

ಇವು ದೀಪಾವಳಿಯ ದಿನಗಳು. ವರ್ಣವಿಲ್ಲದ ಬೆಳಕನ್ನು, ವರ್ಣಮಯವಾಗಿ ಮಾಡಿಕೊಂಡು ಸಂತೋಷಪಡುವುದು ನಮ್ಮಲ್ಲಿ ಪಾರಂಪರಿಕವಾಗಿ ನಡೆದುಬಂದಿದೆ. ಈ ಬೆಳಕಿನಲ್ಲಿ ಕ್ಷಣ ಹೊತ್ತಾದರೂ ಹೊರಗಿನ ಕತ್ತಲೆ ಅತ್ತತ್ತ ಸರಿಯುತ್ತದೆ. ಆದರೆ ಈ ಹೊರಗಿನ ಬೆಳಕು ನಮ್ಮ ಒಳಗಿನ ಬೆಳಕಾದಾಗ ಮಾತ್ರ ನಮ್ಮ ಆಚರಣೆಗೆ ಸಾರ್ಥಕತೆ ಬರುತ್ತದೆ. ಹಾಗಾಗಲಿ ಎನ್ನುವುದು 'ಪ್ರಸಾದ' ಬಳಗದ ಬಯಕೆ.

**ಪ್ರೊ. ಮಲೆಯೂರು ಗುರುಸ್ವಾಮಿ**
**ಸಂಪಾದಕ**

# ಗುಪ್ತ ಕಾಯಕದ ಶರಣ ಮರುಳಶಂಕರದೇವರು

**ಡಾ. ರಾಜಶೇಖರ ಜಮದಂಡಿ**

**ಪೀಠಿಕೆ**

12ನೇ ಶತಮಾನದಲ್ಲಿದ್ದ ಶರಣ ಮರುಳಶಂಕರದೇವರನ್ನು ಪರಿಚಯ ಮಾಡಿಕೊಳ್ಳುವುದಕ್ಕೂ ಮೊದಲು ಈ ಶತಮಾನದ ಒಟ್ಟಾರೆ ಆಗುಹೋಗುಗಳನ್ನು, ಅದರ ಮಹತ್ವವನ್ನು ಅವಲೋಕನ ಮಾಡಬಹುದು. ಬಸವಣ್ಣನವರ ಅನುಭವಮಂಟಪದಲ್ಲಿ ನೂರಾರು ಶರಣ–ಶರಣೆಯರು ಸಾಮಾಜಿಕ ಧಾರ್ಮಿಕ ಚರ್ಚೆಗಳಲ್ಲಿ ಭಾಗವಹಿಸಿದ್ದನ್ನು ನಾವು ಕಾಣುತ್ತೇವೆ. ಕಲ್ಯಾಣ ನಾಡಿನ ಸಮಾಜೋಧಾರ್ಮಿಕ ಕ್ರಾಂತಿಯಿಂದ ಆಕರ್ಷಿತರಾಗಿ ದೇಶ–ವಿದೇಶಗಳಿಂದಲೂ ಬಂದು ಇಲ್ಲಿನ ಕಾಯಕ–ದಾಸೋಹದಲ್ಲಿ ನಿರತರಾಗಿ ತಮ್ಮ ಜೀವನವನ್ನು ಪಾವನಮಯಗೊಳಿಸಿಕೊಂಡಿದ್ದಾರೆ. ದೇಶವಿದೇಶದಿಂದ ಸಾವಿರಾರು ಶರಣರ ಸಂಗಮವೇ ಕಲ್ಯಾಣದಲ್ಲಿ ಸೇರಿತ್ತು. ಲಕ್ಷದ ಮೇಲೆ ತೊಂಬತ್ತಾರು ಸಾವಿರ, ಪ್ರಪಂಚವೇ ನಿಬ್ಬೆರಗಾಗಿದೆ. ಮನುಕುಲಕ್ಕೆ ಒಳಿತಾಗುವಂತೆ ಅನೇಕ ಕಾರ್ಯಗಳನ್ನು ಮಾಡಿದವರು. ಇಂಥವರ ಸಾಲಿನಲ್ಲಿ ಶರಣ ಮರುಳಶಂಕರದೇವರು.

ಇವರು ಅನುಭವ ಮಂಟಪದ 770 ಅಮರ ಗಣಂಗಳ ಪೈಕಿ ಒಬ್ಬ ಶರಣರಾಗಿದ್ದರು. ಷಟ್ಸ್ಥಲ ತತ್ವದಲ್ಲಿನ ಒಂದು ಸ್ಥಲವಾದ 'ಪ್ರಸಾದಿಸ್ಥಲ'ದಲ್ಲಿದ್ದವರು. ಇವರ 35 ವಚನಗಳು ಲಭ್ಯವಾಗಿದ್ದು, ಅವುಗಳಲ್ಲಿ ಪ್ರಸಾದ ತತ್ವದ ಪ್ರತಿಪಾದನೆಗೆ ಹೆಚ್ಚು ಆದ್ಯತೆ ಕಂಡುಬರುತ್ತದೆ.

**ಲಿಂಗಪತಿ–ಶರಣಸತಿ**

12ನೇ ಶತಮಾನದ ಶರಣ ಗುಚ್ಛದ ಎಲೆ ಮರೆಯಲ್ಲಿ ಹುದುಗಿ, ನರುಗಂಪಿನ ಸುವಾಸನೆ ಬೀರುವ ಕುಸುಮೋಪಾದಿಯಲ್ಲಿ ಕಂಡುಬರುವ ಶರಣ ಮರುಳಶಂಕರದೇವ. ಇವರದು ಅತ್ಯಂತ ವಿಶಿಷ್ಟವಾದ ವ್ಯಕ್ತಿತ್ವ. ಬಸವಣ್ಣನ ಸಮಕಾಲೀನರಾಗಿದ್ದರೂ ಯಾರಿಗೂ ಕಂಡೂಕಾಣದಂತೆ ತೊಳಗಿ ಬೆಳಗಿದ ಅನುಪಮ ಶರಣನೆಂದಿನಿಸಿಕೊಂಡವರು. ಇವರ ತಂದೆ–ತಾಯಿ ಯಾರು? ಇವರ ಸಾಂಸಾರಿಕ ಜೀವನ ಏನಾಗಿತ್ತು? ಜೀವಿತದ ಕಾಲವಾವುದು? ಇವರ ಸಂಪೂರ್ಣ ವ್ಯಕ್ತಿತ್ವಕ್ಕೆ ಪೂರಕವಾದ ವಿವರಗಳು ಲಭ್ಯವಾಗ ದಿದ್ದರೂ, ಕಣ್ವತ್ತೂರು ಎಂಬಲ್ಲಿದ್ದ ನೈಸರನೆಂಬ ಶಿವಭಕ್ತನ ಶಿಷ್ಯನಾಗಿದ್ದರೆಂಬುದನ್ನು

ಖ್ಯಾತ ಸಂಶೋಧಕರಾದ ಡಾ. ಫ.ಗು. ಹಳಕಟ್ಟಿಯವರು ತಿಳಿಸಿದ್ದಾರೆ. ಆಗಲೇ ಹೇಳಿದಂತೆ ಶಂಕರದೇವರು ತಮ್ಮ ತಂದೆ–ತಾಯಿ ಬಗೆಗೆ ವಚನದಲ್ಲಿ

ಮಹಾಶ್ರೀ ಗುರುವೇ ತಂದೆ, ಮಹಾಜಂಗಮವೇ ತಾಯಿ.
ಇವರಿಬ್ಬರ ಸಂಗ ಸಂಯೋಗದಿಂದ ತಾನು ಹುಟ್ಟಿದೆ ನೋಡಿರಯ್ಯಾ
ಸರ್ವಾಂಗ ಸಾಹಿತ್ಯ ಆನು ಹುಟ್ಟಿದ ಬಳಿಕ,
ಆ ತಂದೆ ತಾಯಿಗಳಿಬ್ಬರು ಲಿಂಗವೆಂಬ ಹೆಣ್ಣು ತಂದು
ಎನ್ನ ಕೊರಳಲ್ಲಿ ಕಟ್ಟಿ ಮದುವೆಯ ಮಾಡಿದರಯ್ಯಾ,
ಆ ಹೆಣ್ಣಿನ ಕೈಹಿಡಿದು ತಾನು ಬದುಕಿದೆನು.
ಆ ಹೆಣ್ಣಿನ ಸಂಗ ಸಂಯೋಗದಿಂದ ಮಗನೆಂಬ ಮಹಾಲಿಂಗ ಹುಟ್ಟಿದನಯ್ಯಾ,
ಆ ಮಗ ಹುಟ್ಟಿದ ಮುನ್ನವೇ ಎನಗೆ ಮರಣವಾಯಿತ್ತು.
ಲಿಂಗವೆಂಬ ಹೆಂಡತಿ ಮುಂಡೆಯಾದಳು.
ತಂದೆ ತಾಯಿಗಳಿಬ್ಬರು ಎನ್ನವರಾಗಿ ಅಡಗಿ ಹೋದರು.
ಇನ್ನು ಮುನ್ನಿನ ಪರಿಯೆಂತುಂಟಲ್ಲವಾಗಿ ಆನು ಬದುಕಿದೆನು ಕಾಣಾ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚನ್ನಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಶರಣರ ಕರುಣದಿಂದ ಎನ್ನ ಕರ್ಮ ನಿರ್ಮಳವಾಯಿತ್ತಯ್ಯಾ
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ

ಈ ವಚನವು ಶಿವಭಕ್ತಿಯ ನೆಲೆಯಿಂದ ಪ್ರಾರಂಭವಾದ ಅವರ ಜೀವನವು ಸಮರಸಗೊಂಡು ನಿರ್ಬಯಲಾದ ಪರಿಯನ್ನು ತಿಳಿಯಪಡಿಸುತ್ತದೆ. ಅಲ್ಲದೆ ಇಲ್ಲಿ **'ಶರಣ ಪತಿ, ಲಿಂಗ ಸತಿ'** ಎಂಬ ಭಾವವೂ ಗಮನಾರ್ಹವಾಗಿದೆ. ಸಾಮಾನ್ಯವಾಗಿ ಶರಣರು **'ಲಿಂಗಪತಿ–ಶರಣಸತಿ'** ಎಂಬ ಭಾವಕ್ಕೆ ಒಲಿದರೆ, ಮರುಳಶಂಕರದೇವರ ನಿಲುವು ಸೂಫಿ ಸಂಪ್ರದಾಯಕ್ಕೆ ಹತ್ತಿರವಾಗಿರುವುದನ್ನು ಸೂಚಿಸುತ್ತದೆ. ಇಲ್ಲಿ ಸ್ವತಃ ಶರಣ ತಾನು ಸತಿಯಾಗಿ ತನ್ನಂಗದೊಳಗಿರುವ ದೈವಸ್ವರೂಪದ ಲಿಂಗವನ್ನು ತನ್ನ ಪತಿಯನ್ನಾಗಿ ಒಪ್ಪಿಕೊಂಡಿರುವುದು ಕಂಡುಬರುತ್ತದೆ.

**ಹಿನ್ನೆಲೆ**

ಅವರ ನಿಲವನ್ನು ನೋಡಿದರೆ ಅಫ್ಘಾನಿಸ್ತಾನದಿಂದ ಬಂದಿರಬಹುದೆಂದೂ, ಬೌದ್ಧ ಧರ್ಮದ ಅಹಿಂಸಾ ನಿಷ್ಠೆಯ ಕಾರಣದಿಂದ ಯಾವ ವೃತ್ತಿಯನ್ನು ಕೈಗೊಂಡರೂ ಜೀವಹಿಂಸೆ ಇರುವುದನ್ನು ಮನಗಂಡು, ಶಿವಭಕ್ತರು ಸೇವಿಸಿ ಬಿಟ್ಟ ಪ್ರಸಾದವನ್ನು ಮಾತ್ರ ಸೇವಿಸಿ ಜೀವಿಸಿದ್ದ ಕಾರಣದಿಂದ, ಹೆಸರಿನ ಹಿಂದೆ 'ಮರುಳ' ಎಂಬ ಹೆಸರು ಸೇರಿರುವುದೂ ಕಾರಣವಾಗಿರಬಹುದು. ಅವರು ಯಾವ ಕೆಲಸ ಮಾಡುತ್ತಿರಲಿಲ್ಲ ಎಂದು ಲೆಕ್ಕ ಹಾಕುವುದಾದರೆ ಅಥವಾ ಯಾರಾದರೂ ವಿಚಾರಿಸುವುದಾದರೆ ಅದೇ 'ಶರಣರು ಸ್ವೀಕರಿಸಿ ಬಿಟ್ಟ ಪ್ರಸಾದವನ್ನು ಒಟ್ಟುಗೂಡಿಸಿ, ಪಶುಪಕ್ಷಿಗಳಿಗೆ ಹಾಕುವುದನ್ನು ಮಾಡಿರುವ' ಸಾಧ್ಯತೆಗಳಿವೆ.

ಶಿವಭಕ್ತನೆಂಬ ನೈಸರನು ಶಂಕರದೇವರ ಗುರು. ಇವರು ಬದುಕಿನಲ್ಲಿ ಭಿಕ್ಷಾನ್ನವೇ ಪ್ರಸಾದವೆಂದು ತಿಳಿದು ಅದರಂತೆಯೇ ಬದುಕಿದ್ದರಂತೆ. ಅದೇ ರೀತಿ ಶಂಕರ ದೇವರು ಪ್ರಸಾದಿಸ್ಥಲವನ್ನು ತಿಳಿದುಕೊಳ್ಳಲು ಕಲ್ಯಾಣ ನಾಡಿಗೆ ಗುಪ್ತಭಕ್ತರಾಗಿ ಬಂದವರು. ಕೊನೆಯವರೆಗೂ ಗುರುವಿನಂತೆ ಪ್ರಸಾದಿಸ್ಥಲವನ್ನು ಸಂಪಾದಿಸಿದವರು. ಈ ಅಫ್ಘಾನಿಸ್ಥಾನವು ಪ್ರಾಚೀನ ಗಾಂಧಾರ ದೇಶವೆಂತಲೂ ಅಥವಾ ಮಹಾಭಾರತದ ಕುಂತಿಯ ದೇಶವೆಂತಲೂ ತಿಳಿಯಲಾಗಿದೆ. ಮರುಳಶಂಕರದೇವರ ಕುರಿತಾಗಿ ಚಾಮರಸನ ಪ್ರಭುಲಿಂಗಲೀಲೆ, ಶೂನ್ಯಸಂಪಾದನೆ ಮತ್ತು ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಮುಂತಾದ ಗ್ರಂಥಗಳಲ್ಲಿ ಕಂಡುಬರುತ್ತದೆ. ಈವರೆಗೆ ಮರುಳಶಂಕರದೇವರ 35 ವಚನಗಳು ದೊರೆತಿವೆ. ಅವುಗಳನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಇವರು 1993ರಲ್ಲಿ ಪ್ರಕಟಿಸಿರುವ ಸಂಕೀರ್ಣ ವಚನ ಸಂಪುಟ–3 ಮತ್ತು ಸಮಗ್ರ ವಚನ ಸಂಪುಟ 8ರ ಜನಪ್ರಿಯ ಆವೃತ್ತಿಯಲ್ಲಿ ನೋಡಬಹುದು.

**ಉಲ್ಲೇಖ–ಅಂಕಿತ**

ಬಸವಣ್ಣನವರ ಸಮಕಾಲೀನರಾಗಿದ್ದ ಮರುಳಶಂಕರದೇವರು ಷಟ್‌ಸ್ಥಲಗಳ ಅಂತರಂಗ ಬಹಿರಂಗ ಸಾಧನೆ ಮಾಡುತ್ತಾ ಪ್ರಸಾದಿಸ್ಥಲವನ್ನು ಸಂಪಾದಿಸಿದ ಶ್ರೇಷ್ಠ ಅನುಭಾವಿ ಶರಣ. ಪ್ರಭುಲಿಂಗಲೀಲೆಯಲ್ಲಿ ಮರುಳಶಂಕರದೇವರ ನಿರಾಭಾರಿ ನಿಲುವನ್ನು ಹಾಗೂ ಗುಪ್ತಭಕ್ತಿಯ ಮಹಿಮೆಯನ್ನು ತಿಳಿಸುವ ಪ್ರಸಂಗಗಳಿವೆ. ಇವರನ್ನು ಕುರಿತಾಗಿ ಎಳಂದೂರು ಹರೀಶ್ವರ, ಶಾಂತಲಿಂಗದೇಶಿಕ, ವಿರೂಪಾಕ್ಷಪಂಡಿತ ಮುಂತಾದ ಕವಿಗಳು ಪ್ರಸಾದಿಸ್ಥಲ ಸಂಪಾದಿಸಿದ ಹಿನ್ನೆಲೆಯಲ್ಲಿ ಇವರ ಹಲವಾರು ವೃತ್ತಾಂತಗಳನ್ನು ಉಲ್ಲೇಖಿಸಿದ್ದಾರೆ. ಇವರ ವಚನಾಂಕಿತ ಇತರೇ ವಚನಕಾರರಿಗಿಂತ ತೀರಾ ಭಿನ್ನವಾಗಿದ್ದು ಮತ್ತು ಬಹಳ ದೊಡ್ಡದಾಗಿದೆ. “ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಸದ್ಭಕ್ತನ ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ, ನಿಮ್ಮ ಧರ್ಮ” ಎಂಬುದಾಗಿದೆ. ಹೀಗೆ ಪ್ರತಿಯೊಂದು ವಚನದ ಕೊನೆಯಲ್ಲಿ ‘ನಿಮ್ಮ ಧರ್ಮ’ ಎಂದು ಮೂರು ಬಾರಿ ಹೇಳಿದ್ದಾರೆ. ಇವರ ವಚನದ ಸಾಲುಗಳು ಕನಿಷ್ಠ 10 ಸಾಲುಗಳಿಂದ ಗರಿಷ್ಠ 40 ಸಾಲುಗಳವರೆಗೆ ಇವೆ. ಇವರ ಪ್ರಸಾದಿಸ್ಥಲದ ವಿವರ ತಿಳಿಸುವ ವಚನ ಹೀಗಿದೆ:

> ಇಷ್ಟಲಿಂಗಕ್ಕೆ ಅಂಗವನರ್ಪಿತವ ಮಾಡಬೇಕು
> ಪ್ರಾಣಲಿಂಗಕ್ಕೆ ಮನವನರ್ಪಿತವ ಮಾಡಬೇಕು
> ಭಾವಲಿಂಗಕ್ಕೆ ತೃಪ್ತಿಯನರ್ಪಿತವ ಮಾಡಬೇಕು
> ಈ ಮರ್ಮವನರಿತು ಅರ್ಪಿತವ ಮಾಡಬಲ್ಲಡೆ ಪ್ರಸಾದಿಯೆಂಬೆ.

ಅದೆಂತೆಂದಡೆ:
ಇಷ್ಟಲಿಂಗಾರ್ಪಿತಂ ತ್ವಂಗಂಪ್ರಾಣಲಿಂಗಾರ್ಪಿತಂ ಮನಂ
ಭಾವಲಿಂಗಾರ್ಪಿತಂ ತೃಪ್ತಿಂ ರೀತಿಭೇದಂ ವರಾನನೇ
ಎಂದುದಾಗಿ, ಲಿಂಗಕ್ಕೆಯೂ ತನಗೆಯೂ ಎಡೆದೆರಹಿಲ್ಲ
ಇದು ಕಾರಣ, ಲಿಂಗ ಸಹಿತವಾಗಿಯೆ ಕೇಳುವ,
ಲಿಂಗಸಹಿತವಾಗಿಯೆ ಘ್ರಾಣಿಸುವ, ಲಿಂಗಸಹಿತವಾಗಿಯೆ ರೂಪಿಸುವ
ಲಿಂಗಸಹಿತವಾಗಿಯೆ ನೋಡುವ, ಲಿಂಗಸಹಿತವಾಗಿಯೆ ಸಂಗ ಮಾಡುವ,
ಲಿಂಗಸಹಿತವಾಗಿಯೆ ತೊಳಗುವ,
ಇಂತಪ್ಪ ಮಹಾಮಹಿ ಸದ್ಭಕ್ತನ ಅಂಗವೆಲ್ಲವೂ ಲಿಂಗ, ಸಂಗಮವೆಲ್ಲವು ಲಿಂಗ
ಅಂಗ ಸಂಗಮವೆಲ್ಲವು ಲಿಂಗಸಂಗವಾದ ಕಾರಣ
ಅಂಗಭೋಗವೆಲ್ಲವೂ ಲಿಂಗಭೋಗವಾದ ಕಾರಣ
ಇಂತಪ್ಪ ಮಹಾಮಹಿಮ ಸದ್ಭಕ್ತನ ಶ್ರೀಚರಣಕ್ಕೆ
ಎನ್ನ ಶಿರವನಿರಿಸಿ ಪೂಜಿಸುವೆ ಕಾಣಾ
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಸದ್ಭಕ್ತನ ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ, ನಿಮ್ಮ ಧರ್ಮ

ಬೇರೆ ಬೇರೆ ಗ್ರಂಥಗಳಲ್ಲಿ ಮರುಳಶಂಕರದೇವರ ಬಗೆಗೆ ಏನು ಉಲ್ಲೇಖವಾಗಿದೆ ಎಂಬುದನ್ನು ನೋಡೋಣ:

**ಚಾಮರಸನ ಪ್ರಭುಲಿಂಗಲೀಲೆಯಲ್ಲಿ**

ನಮಗೆಲ್ಲಾ ಗೊತ್ತಿರುವಂತೆ ಅಲ್ಲಮಪ್ರಭುದೇವರು ದೇಶ ಸಂಚಾರ ಮುಗಿಸಿಕೊಂಡು ಮತ್ತೆ ಕಲ್ಯಾಣಕ್ಕೆ ಬರುತ್ತಾರೆ. ಇದೇ ಸಂದರ್ಭದಲ್ಲಿ ಬಸವಣ್ಣನವರು ಅನುಭವಮಂಟಪವನ್ನು ರಚನೆ ಮಾಡಿದ ಮೇಲೆ ಅದರ ಅಧ್ಯಕ್ಷರನ್ನಾಗಿ ಅಲ್ಲಮಪ್ರಭುವನ್ನು ಮಾಡಲು ಸುಮಾರು ವರ್ಷಗಳಿಂದ ಕಾಯುತ್ತಾ ಇರುತ್ತಾರೆ. ಅಲ್ಲಮಪ್ರಭುದೇವರು ಬಸವಣ್ಣನವರ ಮಹಾಮನೆಗೆ ಬರುವಾಗ ಹಗಲಿರುಳು ಪ್ರಸಾದದ ಕುಂಡದ ತೀರದಲ್ಲಿ ಕೂತು ಶರಣರು ಸ್ವೀಕರಿಸಿ ಬಿಟ್ಟ ಪ್ರಸಾದವನ್ನು ಒಟ್ಟುಗೂಡಿಸುವ ಕಾಯಕದಲ್ಲಿ ಶಂಕರದೇವರು ನಿರತರಾಗಿರುತ್ತಾರೆ. ಅದು ಯಾರಿಗೂ ತಿಳಿಯದ ಹಾಗೆ 12 ವರ್ಷಗಳ ಕಾಲ ಗುಪ್ತಭಕ್ತರಾಗಿ. ಉದಾಹರಣೆಯಾಗಿ ಹೇಳುವುದಾದರೆ: 'ಶಿಲೆಯ ಮರೆಯ ಹೊನ್ನಿನಂತೆ, ತಿಲದ ಮರೆಯ ತೈಲದಂತೆ, ನೆಲದ ಮರೆಯ ನಿಧಾನವಿರುವಂತೆ' ಮರುಳ ವೇಷದಲ್ಲಿ. ಹೀಗೆ ತನ್ನಂಗಳದಲ್ಲಿಯೇ ಇಷ್ಟು ವರ್ಷಗಳ ಕಾಲ ಯಾರ ಕಣ್ಣಿಗೂ ಕಾಣದಂತೆ ಯಾರಿಗೂ ಹೇಳದಂತೆ ವಾಸವಾಗಿರುವುದನ್ನು ಅರಿಯದೇ ಹೋದೆನಲ್ಲಾ ಎಂದು ಬಸವಣ್ಣನವರು ಬಹಳ ಪರಿತಪಿಸುತ್ತಾರೆ ಮತ್ತು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಇವರನ್ನು ಪ್ರಭುದೇವರು ಪತ್ತೆಹಚ್ಚಿ ಬಸವಣ್ಣನವರ ಗಮನಕ್ಕೆ ತರುವ

ಬಹುದೊಡ್ಡ ಕೆಲಸ ಮಾಡುತ್ತಾರೆ. ಮರುಳ ಶಂಕರ ದೇವರನ್ನು ಅಪ್ಪಿಕೊಂಡಂತ ಬಸವಣ್ಣನವರು 'ಮರುಳಶಂಕರ ನಾಮದಲ್ಲಿ ಶಂಕರನೆ ಬಂದಿಹನು' ಎಂದು ಅವರ ಸಾತ್ವಿಕ ಭಕ್ತಿಯ ಅನುಪಮ ವ್ಯಕ್ತಿತ್ವವನ್ನು ಕಂಡು, ಕರುಣೆಯಲ್ಲಿ ಐಕ್ಯಪದವಿಯನ್ನು ಕರುಣಿಸುತ್ತಾರೆ. ಹೀಗೆ ಬಸವಣ್ಣನವರ ಸಮಕಾಲೀನರಾಗಿದ್ದ ಮರುಳಶಂಕರದೇವರು ಪ್ರಸಾದ ಕುಂಡದಲ್ಲಿ (ತಗ್ಗಿನ ಪ್ರದೇಶದಲ್ಲಿ) ಮರುಳನಂತೆ ಬಾಹ್ಯ ರೂಪಧಾರಿಯಾಗಿ, ಅಂತರಂಗದಲ್ಲಿ ಶಿವಪ್ರಸಾದಿಯಂತೆ ಬೆಳೆದು ನಿಂತಿರುವ ಅಸಾಮಾನ್ಯ ವ್ಯಕ್ತಿತ್ವ ವಿಶೇಷವನ್ನು ಕವಿ ಚಾಮರಸ ತನ್ನ ಕಾವ್ಯದಲ್ಲಿ ಸಮಯಾನುಸಾರ ಚಿತ್ರಿಸಿದ್ದಾನೆ.

**ಗೂಳೂರು ಸಿದ್ಧವೀರನ ಶೂನ್ಯಸಂಪಾದನೆಯಲ್ಲಿ**

ಮರುಳಶಂಕರದೇವರ ಸಂಪಾದನೆಯ ಭಾಗವೇ ಕಂಡುಬರುತ್ತದೆ. ಇಲ್ಲಿನ ಪ್ರಸಂಗವನ್ನು ನೋಡುವುದಾದರೆ ಇದನ್ನು ಸಂಭಾಷಣಾ ರೂಪದಲ್ಲಿ ಸೊಗಸಾಗಿ ಚಿತ್ರಿಸಲಾಗಿದೆ. ಮೇಲೆ ತಿಳಿಸಿದಂತೆ ಅಲ್ಲಮಪ್ರಭುದೇವರು ಬಸವಣ್ಣನ ಮನೆಯ ಕಡೆಗೆ ಬರುತ್ತಾ ಇರುತ್ತಾರೆ. ಆಕಸ್ಮಿಕವಾಗಿ ಅವರ ಮನೆಯ ಮುಂದೆ ಅಥವಾ ಪಕ್ಕದಲ್ಲಿ ಪ್ರಸಾದದ ದೊಡ್ಡ ಗುಂಡಿಯೊಂದು ಕಾಣುತ್ತದೆ. ಅದರ ಹತ್ತಿರಕ್ಕೆ ಹೋಗಿ ದಿಟ್ಟಿಸಿ ನೋಡುತ್ತಾ ನಿಲ್ಲುತ್ತಾರೆ. ಅವರಿಗೆ ಅಲ್ಲಿ ಒಂದು ಅತಿಶಯವಾದ ದೃಶ್ಯ ಕಾಣುತ್ತದೆ. ಬಸವಣ್ಣನವರನ್ನು ಕಂಡು ಮಾತಾಡಿಸುತ್ತಾ: "ನಿನ್ನ ಭಕ್ತಿ ಎಂಬ ವೃಕ್ಷದ ಪಸರಣೆಯನ್ನು ಆಶ್ರಯಿಸಬೇಕೆಂದು ಒಸೆದು ಬಂದ ಮಹಾತ್ಮರು ಅಗಣಿತ. ಅವರಲ್ಲಿ ನಿನಗಾರು ಸಮಾನರು? ಎಂದು ಪ್ರಶ್ನಿಸುತ್ತಾರೆ.

ನಂತರ ಆ ಗುಂಡಿಯ ಒಳಗೆ ಕೂತಂತ ಶರಣ ಮರುಳಶಂಕರದೇವರನ್ನು ನೋಡಿ ಬಹಳ ಪ್ರೀತಿಯಿಂದ ಮಾತಾಡಿಸುತ್ತಾರೆ. ಈ ಮರುಳ ಶಂಕರ ದೇವರಿಗೆ ವಸುಮತಿಯಲ್ಲಿ ಸಾಟಿಯಿಲ್ಲ. ಇಂತಪ್ಪ ಅಸಮರೆಲ್ಲರು ನಿನ್ನ ಬಾಗಿಲನ್ನು ಮುಸುರಿ ಕೊಂಡಿಹರಾಗಿ ನೀನೇ ಕೃತಾರ್ಥನಲ್ಲವೆ! ಎಂದಾಗ "ನಿಮ್ಮ ಶರಣ ಬಸವಣ್ಣನ ಪರಿಯ ನೀವೇ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ ನಿಮ್ಮ ಧರ್ಮ ನಿಮ್ಮ ಧರ್ಮ" ಎಂದು ಮರುಳಶಂಕರದೇವರು ಮಾರುತ್ತರ ನೀಡುತ್ತಾರೆ. ಇದೇ ಸಂದರ್ಭದಲ್ಲಿ ಸೊಲ್ಲಾಪುರ ದಿಂದ ಅಲ್ಲಮನೊಂದಿಗೆ ಕಲ್ಯಾಣಕ್ಕೆ ಬಂದ ಸಿದ್ಧರಾಮನಿಗೆ ಈ ದೃಶ್ಯ ನೋಡಿ ಕುತೂಹಲವಾಗುತ್ತದೆ. ಮೊದಲೇ ಬಸವಣ್ಣನವರ ಬಗೆಗೆ ಅಲ್ಪಸ್ವಲ್ಪ ಕೇಳಿ ತಿಳಿದುಕೊಂಡಿದ್ದ ಸಿದ್ಧರಾಮನಿಗೆ  ಉತ್ಸಾಹ ಹೆಚ್ಚಾಗಿತ್ತು. ಈಗಂತೂ ಶಂಕರದೇವರನ್ನು ನೋಡಿದ ಮೇಲೆ ಆ ಕೌತುಕ ಇನ್ನಷ್ಟು ಹೆಚ್ಚಾಗಿ, ಅವರ ವಿಷಯ ಕುರಿತಾಗಿ ಇನ್ನಷ್ಟು ಮಾಹಿತಿ ನನಗೆ ತಿಳಿಸಬೇಕೆಂದು ಅಲ್ಲಮನನ್ನು ಕೇಳುತ್ತಾನೆ. ಆಗ ಅಲ್ಲಮಪ್ರಭುಗಳು:

ಮರುಳಶಂಕರದೇವರು ಅರಿವಿನ ತಿರುಳು,
ಲಿಂಗಾಂಗದ ಹೊಳಹಿನ ಹುರುಳು
ನಿರ್ಮಳ ಧರ್ಮ ವರ್ಮದ ಚಾರು ಚಾರಿತ್ರ್ಯ

ಶಾಂತಿಯ ಚಿತ್ತವೃತ್ತಿಯ ಪರಮ ಪಾವನ ಮೂರ್ತಿ
ಕರಣವೆಲ್ಲವು ಕರಗಿ ಅಂತಃಕರಣ ಶುದ್ಧಿಯ ಪಡೆದು
ಶಂಕರನ ಸಾಧಕರೊಕ್ಕು ಮಿಕ್ಕುದನುಂಡು ಕಾಮದಲ್ಲಿ ಕಂಗೆಡದೆ,
ಕ್ರೋಧಸ್ತೋಮದಲ್ಲಿ ಮುಂಗೆಡದೆ, ಲೋಭದ ಸೀಮೆಯಲ್ಲಿ ಸಿಕ್ಕದೆ,
ವಿಮೋಹದ ಬಲೆಗೆ ಬಗೆಗೆಡದೆ, ಆ ಮದೋನ್ನತ ಮತ್ಸರಂಗಳ ನೇಮಿಸದೆ,
ಲಿಂಗಪ್ರಸಾದದ ಪ್ರೇಮಿಯಾದ ಮಹಾತ್ಮನೀತ,
ಈಶಪ್ರಸಾದವ ಮೆಚ್ಚಿದ ಮಹಿಮನೀತ.
ಇಂದ್ರಿಯವನತಿಗಳೆದು ಅಳುಪಿನ ದಂದುಗವ ಧಿಕ್ಕರಿಸಿ
ಭವ ಬಂಧನದ ಬೇರಿಗೆ ಕಿಚ್ಚನಿಕ್ಕಿದ ಅಚ್ಚ ಶರಣನೀತ

ಎಂದು ಅವರ ಮಹೋನ್ನತಿಯನ್ನು ನಾನಾ ರೀತಿಯಲ್ಲಿ ಬಣ್ಣಿಸಿದರು. ಅದರಲ್ಲೂ ಪ್ರಭುವಿನ ಮೆಚ್ಚುಗೆಗೆ ಪಾತ್ರರಾಗುವುದು ಅಷ್ಟೊಂದು ಸುಲಭವಲ್ಲ. ಇದೇ ಸಂದರ್ಭದಲ್ಲಿ ಬಸವಣ್ಣ ತನ್ನ ಮನೆಯಂಗಳದಲ್ಲಿದ್ದ ಶಿವಭಕ್ತರನ್ನು ಅರಿಯದೆಹೋದೆನಲ್ಲಾ ಎಂಬ ದುಃಖದಿಂದ ಕೊರಗುತ್ತಾನೆ.

ಅಯ್ಯಾ ನಿಮ್ಮ ಶರಣರು ಬಂದೆನ್ನ ಅಂಗಳದೊಳಗೆ ರಕ್ಷಿಸಿಹೆನಿಂದಿರಲು
ನಾನು ತೆರಹುಮರಹಾಗಿರ್ದು ಕೆಟ್ಟೆನಯ್ಯಾ!
ನಿಮ್ಮ ಶರಣರ ಇರವನರಿಯದೆ, ಭವದುಃಖಿಯಾದೆನಯ್ಯಾ!
ನಡುದೊರೆಯೊಳಗೆ ಹರಿಗೋಲನು ಇಳುಹಿದಂತಾಯಿತೆನ್ನ ಭಕ್ತಿ,
ಕೂಡಲಸಂಗಮದೇವಾ ಈ ಮರುಳಶಂಕರದೇವರ
ಕೃಪೆ ಎನಗೆನ್ನೆಂದಪ್ಪುದು ಹೇಳಾ ಪ್ರಭುವೇ

ಎಂದು ಬಹಳ ನೊಂದುಕೊಂಡು ಬಸವಣ್ಣನವರು ನುಡಿಯುತ್ತಾರೆ. ಇದೇ ಸಮಯದಲ್ಲಿ ಅಲ್ಲಿಯೇ ಇದ್ದ ಹಡಪದ ಅಪ್ಪಣ್ಣನೂ ಸಹ

ಬಸವಣ್ಣಾ, ಎನ್ನ ಮದಂಗಳ ಹಂಗನಳಿದು,
ನಿಷ್ಠೆ ನಿಬ್ಬೆರಗಾಗಿ ನಿಂತ ಚಿತ್ ಸುಖಿಯ ನೋಡಾ!
ಬಸವಪ್ರಿಯ ಕೂಡಲ ಚೆನ್ನಸಂಗಮ ದೇವಯ್ಯಾ
ಪರಮ ಪ್ರಸಾದಿ ಮರುಳು ಶಂಕರದೇವರ ನಿಲವ
ಪ್ರಭು ಬಸವಣ್ಣನಿಂದ ಕಂಡು ಬದುಕಿದೆನು

ಎಂದು ಕೊಂಡಾಡುವನು. ಅದೇ ರೀತಿ ಅಲ್ಲಿಯೇ ಇದ್ದ ಕಿನ್ನರಿಬೊಮ್ಮಯ್ಯನು

ತನ್ನನಳಿದು ನಿಜ ಉಳಿದ ಮಹಾಲಿಂಗ ತ್ರಿಪುರಾಂತಕನ ನಿಲವ ಕಂಡು
ಒಳಗೊಂಡ ಮರುಳುಶಂಕರದೇವ ಮೂರ್ತಿಯ
ನಿನ್ನಿಂದ ಕಂಡು ಬದುಕಿದೆನು ಕಾಣಾ ಸಂಗನಬಸವಣ್ಣಾ

ಎಂದು ನುಡಿವನು. ಹೀಗೆ ಎಲ್ಲಾ ಶರಣರು ತಮ್ಮ ತಮ್ಮ ಮೆಚ್ಚುಗೆಯನ್ನು ಸೊಗಸಾಗಿ ಸೂಸುತ್ತಾರೆ. ಇದನ್ನು ಕಂಡ ಮರುಳ ಶಂಕರ ದೇವರು ಸಂಕೋಚದಿಂದ ಮುದುಡುತ್ತಾರೆ,

ನೀರಾಗುತ್ತಾರೆ ಅಂತಾರಲ್ಲ ಹಾಗೆ ಆದರಂತೆ. ಈ ರೀತಿ ಎಲ್ಲಾ ಶರಣರು ತನ್ನನ್ನು ಹೊಗಳಿದ ಮೇಲೆ ಸುಮ್ಮನೆ ಹೇಗಿರುವುದು? ಇದಕ್ಕೆ ಪ್ರತಿಕ್ರಿಯೆಯಾಗಿ ಮರುಳ ಶಂಕರ ದೇವರೂ ಸಹ ತನ್ನ ಮುಂದಿದ್ದ ಎಲ್ಲ ಶರಣರನ್ನು ಕಂಡು ಕೃತಾರ್ಥಭಾವದಿಂದ ಹೀಗೆ ವಚನದಲ್ಲಿ ನುಡಿಯುತ್ತಾರೆ:

ಎನ್ನ ಜ್ಞಾನಾತ್ಮನ ಚೇತನನಯ್ಯಾ ಪ್ರಭುದೇವರು
ಎನ್ನ ಜ್ಞಾನಾತ್ಮನ ಚೇತನನಯ್ಯಾ ಸಿದ್ಧರಾಮೇಶ್ವರದೇವರು
ಎನ್ನ ಚಿನ್ಮಯಾತ್ಮನ ಚೇತನನಯ್ಯಾ ಬಸವಣ್ಣನು
ಎನ್ನ ನಿರ್ಮಲಾತ್ಮನ ಚೇತನನಯ್ಯಾ ಷಟ್ಸ್ಥಲಬ್ರಹ್ಮಿ ಚೆನ್ನಬಸವಣ್ಣನು
ಎನ್ನ ಮಹಾತ್ಮನ ಚೇತನನಯ್ಯಾ ಸಂಗನಬಸವಣ್ಣನ ನಿಜಸುಖಿ ಅಪ್ಪಣ್ಣನು
ಎನ್ನ ಜೀವಾತ್ಮನ ಚೇತನನಯ್ಯಾ ಮಡಿವಾಳ ಮಾಚಯ್ಯನು
ಎನ್ನ ಅಂತರಾತ್ಮನ ಚೇತನನಯ್ಯಾ ಸೊಡ್ಡಳ ಬಾಚರಸರು
ಎನ್ನ ಅರಿವಿನ ಚೇತನಾತ್ಮಕನಯ್ಯ ಕಿನ್ನರಿ ಬೊಮ್ಮಯ್ಯನು
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣರ ಕರುಣವ ಪಡೆದೆನಾಗಿ
ಎನ್ನ ಕರ್ಮ ನಿರ್ಮೂಲವಾಯಿತ್ತಯ್ಯಾ
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ

ಈ ರೀತಿ ಎಲ್ಲ ಶರಣರ ಚೇತನದಿಂದ ತನ್ನ ಬದುಕು ಪಾವನಗೊಂಡಿತೆಂದು ಸರ್ವಾಂಗ ಸುಖ ಪ್ರಾಪ್ತಿಯಾಯಿತು ಎಂದು ಹೇಳಿದರು. ಆನಂತರ ಬಸವಣ್ಣನ ಮುಂದೆ ಬಯಲಾಗಿ ಹೋದೆನಯ್ಯಾ ಎಂದು, ಇಲ್ಲಿಗೆ ಸಂಸಾರ ಬಂಧನ ಹರಿಯಿತ್ತೆಂದು ಹೇಳಿ ಇಷ್ಟಲಿಂಗದಲ್ಲಿ ಲೀನವಾದರು/ಐಕ್ಯವಾದರು. ಹೀಗೆ ಪ್ರಸಾದಿಸ್ಥಲದಲ್ಲಿ ಕೊನೆಯವರೆಗೂ ನೆಲೆನಿಂತು ಅಗಮ್ಯ ಅಗೋಚರರಾಗಿ ಚೈತನ್ಯಮೂರ್ತಿಯಾದ ಈ ಮರುಳ ಶಂಕರ ದೇವರ ಬಗೆಗೆ ಪ್ರಭುದೇವರು ಮತ್ತೊಮ್ಮೆ ಮೆಚ್ಚುಗೆ ಸೂಸುತ್ತಾ:

ಆದಿಯನಂಗ ಮುಖದಲ್ಲಿ ಅರ್ಪಿತ ಮಾಡಿ,
ಅನಾದಿಯ ಪ್ರಾಣ ಮುಖದಲ್ಲಿ ಅರ್ಪಿತ ಮಾಡಿ,
ಮನವೆಂಬುದ ಅರಿವಿನ ಮುಖಕ್ಕರ್ಪಿಸಿ,
ತಾನೆಂಬುದ ನಿರಾಕಾರದಲ್ಲಿ ನಿಲ್ಲಿಸಿ,
ಪರಿಣಾಮ ಪ್ರಸಾದದಲ್ಲಿ ತದುಗತನಾಗಿ
'ಪ್ರಸಾದವೇ ಪ್ರಾಣ ಪ್ರಸಾದವೇ ಕಾಯ, ಪ್ರಸಾದವೇ ಜ್ಞಾನ,
ಪ್ರಸಾದವೇ ಧ್ಯಾನ, ಪ್ರಸಾದವೇ ಭೋಗವಾಗಿಪ್ಪ ನಮ್ಮ ಗೊಗ್ಗೇಶ್ವರ ಲಿಂಗದಲ್ಲಿ
ನಿಜ ಪ್ರಸಾದಿ ಮರುಳಶಂಕರದೇವಾ ನೋಡಾ ಸಂಗನ ಬಸವಣ್ಣಾ

ಈ ರೀತಿ ಅಲ್ಲಮಪ್ರಭುದೇವರು ಎಡಬಿಡದೇ ಶಂಕರದೇವರ ಕಂಡು ನಾನಾ ವಿಧದಲ್ಲಿ ವರ್ಣಿಸುತ್ತಾರೆ. ಬಸವಣ್ಣನವರೂ ಸಹ ಮತ್ತೊಮ್ಮೆ ತಮ್ಮ ವಚನದಲ್ಲಿ:

ಮುಗಿಲ ಮರೆಯ ಮಿಂಚಿನಂತೆ ಒಡಲ ಮರೆಯ ಆತ್ಮನಂತೆ
ನೆಲದ ಮರೆಯ ನಿಧಾನದಂತೆ, ಇಪ್ಪ ನಿಮ್ಮ ನಿಲುವನಾರೂ ಬಲ್ಲರು
ನಿಮ್ಮ ನಿಲುವ ಹಲಕಾಲದಿಂದ ಕಂಡು ಕಂಡು ಕಡೆಗಣಿಸಿ ಮರೆದು
ಮುಂಗೆಟ್ಟು ಮರುಳಾದೆನು ಎನ್ನ ತಪ್ಪಿಂಗೆ ಕಡೆಯಿಲ್ಲ
ತ್ರಾಹಿ ತ್ರಾಹಿ ಕೂಡಲಸಂಗಮದೇವಯ್ಯಾ ಕಾಯಯ್ಯಾ

ಎಂದು ಪ್ರಾರ್ಥಿಸುತ್ತಾರೆ. ಹಾಗೆ ಮುಂದುವರೆದು ಅಲ್ಲಿಯೇ ಇದ್ದ ಚೆನ್ನಬಸವಣ್ಣನ ಮುಂದೆ ಮರುಳಶಂಕರದೇವರ ಬಗೆಗೆ ಇದ್ದ ತನ್ನ ಮರುಳತನದ ಅಸಹಾಯಕತೆಯನ್ನು ಹೇಳುತ್ತಾ

ಕಂಗಳೊಳಗೆ ಕರುಳಿಲ್ಲ, ಕಾಯದೊಳಗೆ ಮಾಯವಿಲ್ಲ
ಮನದೊಳಗೆ ಮಹಿಮೆಯಿಲ್ಲ ದೇಹವೆಂದರಿಯ ನಿರ್ದೇಹವೆಂದರಿಯ
ಜಂತ್ರದ ಸೂತ್ರದಂತಿಪ್ಪ ನಿಬ್ಬೆರಗಿನ ಮೂರ್ತಿಯ ನೋಡಾ!
ಲಿಂಗ ಜಂಗಮರ ಒಕ್ಕು ಮಿಕ್ಕ ಪ್ರಸಾದವ ಕೊಂಡ ಮಿಕ್ಕು ಮೀರಿ ನಿಂದ
ಮಹಾಪ್ರಸಾದಿಯ ನೋಡಾ!
ತನ್ನನರಿದಿಹರೆಂದು ಜಗದ ಕಣ್ಣಿಂಗೆ
ಮಾಯದ ಮಂಜ ಕವಿಸಿ ನಿತ್ಯ ನಿಜ ತಪದಲ್ಲಿ
ತದುಗತನಾಗೆ ಕೂಡಲಸಂಗಮದೇವರಲ್ಲಿ ಮರುಳಶಂಕರದೇವರ
ನಿಲುವ ನೋಡಾ ಚೆನ್ನಬಸವಣ್ಣ

ಎಂದು ತಮ್ಮೊಳಗಿನ ಪ್ರಾಯಶ್ಚಿತ್ತದ ನುಡಿಯನ್ನು ಹೊರಹಾಕಿದ್ದಾರೆ. ಈ ರೀತಿ ಬಸವಣ್ಣನವರ ಮಾತುಗಳನ್ನು ಕೇಳಿದ ಮೇಲೆ ಚೆನ್ನಬಸವಣ್ಣನು ಸಹ ತನ್ನ ವಚನದಲ್ಲಿ ಮರುಳ ಶಂಕರ ದೇವರ ಕುರಿತು:

ಅಂಗತವನಾಚಾರಕ್ಕರ್ಪಿಸಿ ಆಚಾರವನ್ನಂಗಕರ್ಪಿಸಿ ಆಚಾರ ಲಿಂಗಪ್ರಸಾದಿಯಾದ
ಪ್ರಾಣವ ಲಿಂಗಕ್ಕರ್ಪಿಸಿ ಆ ಲಿಂಗವ ಪ್ರಾಣಕ್ಕರ್ಪಿಸಿ ಪ್ರಾಣಲಿಂಗ ಪ್ರಸಾದಿಯಾದ
ದೇಹಭಾವಹಂಕಾರ ದಾಸೋಹಭಾವದೊಳಗಲ್ಲದೆ ಅಳಿಯದೆಂದು
ಲಿಂಗಜಂಗಮಕ್ಕೆ ತೊತ್ತು ವೊಕ್ಕು ಜಂಗಮಲಿಂಗ ಪ್ರಸಾದಿಯಾದ
ಸತ್ಯ ಶರಣರ ಅಂಗಳದೊಳಗೆ ಬಿದ್ದ ಅಗುಳನೆತ್ತಿಕೊಂಡಿಪ್ಪೆನೆಂದು
ನಿಮ್ಮ ಪ್ರಸಾದದ ಕುಳಿಯೊಳಗೆ ಹನ್ನೆರಡು ವರುಷ ನಿರಂತರ ಪ್ರಸಾದಿಯಾದ
ಕೂಡಲ ಚೆನ್ನಸಂಗಮದೇವರಲ್ಲಿ ಮರುಳಶಂಕರದೇವರ ಶ್ರೀಪಾದದ
ಘನವನು ನಿಮ್ಮಿಂದ ಅರಿದು ಬದುಕಿದೆನು ಕಾಣಾ ಸಂಗನ ಬಸವಣ್ಣಾ

ಎಂಬಂತಹ ಮಾತುಗಳನ್ನು ನುಡಿಯುತ್ತಾನೆ. ಹೀಗೆ ಶೂನ್ಯಸಂಪಾದನೆಯಲ್ಲಿ ಮರುಳಶಂಕರದೇವರ ವ್ಯಕ್ತಿತ್ವವನ್ನು ಕುರಿತು ನಿರೂಪಿಸಲಾಗಿದೆ.

**ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ**

ಬರ್ಬರ ದೇಶದ ಕಣ್ಬತ್ತೂರಿನಲ್ಲಿ ನೈಸರನೆಂಬ ಒಬ್ಬ ಭಿಕ್ಷುಕನಿದ್ದನು. ಅವನು

ಆಶ್ರಮದ ಬಳಿ ಸಾಯುತ್ತಾ ಬಿದ್ದಿದ್ದ ನಾಯಿಯೊಂದನ್ನು ಕರುಣೆಯಿಂದ ನೋಡಿ ಭಿಕ್ಷಾನ್ನ ತಿನ್ನಿಸಿದನು. ಆಯುಷ್ಯ ಮುಗಿದಿದ್ದ ಆ ನಾಯಿ ಪ್ರಸಾದವನ್ನು ತಿಂದ ನಂತರ ಸತ್ತುಹೋಯಿತು. ಆದರೆ ನೈಸರನು ನೀಡಿದ ಪ್ರಸಾದ ಸೇವಿಸಿದ್ದ ಫಲವಾಗಿ ಆ ನಾಯಿ ಮುಂದಿನ ಜನ್ಮದಲ್ಲಿ ಸಿರಿಚೋಳನೆಂಬ ರಾಜನಾಗಿ ಹುಟ್ಟಿತು. ಒಂದು ದಿನ ಆ ರಾಜನು ತನ್ನ ಹಿಂದಿನ ಜನ್ಮವನ್ನು ನೆನೆದು ನೈಸರನ ಬಳಿ ಹೋಗಿ ನಿಮ್ಮ ಪ್ರಸಾದ ಮಹಿಮೆಯ ಫಲದಿಂದ ತಾನು ರಾಜನಾದ ವಿಚಾರ ಹೇಳಲು ಆತನು ನಂಬಲಿಲ್ಲ. ಇಬ್ಬರೂ ಆ ಊರಿನ ನೀಲಕಂಠೇಶ್ವರನ ಬಳಿಗೆ ಬಂದು ಕೇಳಲು, ಅವರು ನಿಜಾಂಶ ತಿಳಿಸಿದರು. ನೈಸರನು ಒಪ್ಪದೇ ಕೋಪದಲ್ಲಿ ತನ್ನ ದಂಡದಿಂದ ಅವನನ್ನು ತಿವಿದನು. ಆಗ ನೀಲಕಂಠೇಶ್ವರನು ತಾನು ಪ್ರಸಾದದ ಮಹಿಮೆಯನ್ನು ಜಗತ್ತಿಗೆ ತಿಳಿಸಲು ಹಾಗೆ ಮಾಡಿದ್ದಾಗಿ ಹೇಳಿ ಅವರಿಬ್ಬರಿಗೂ ಮುಕ್ತಿ ನೀಡಿದನು. ಅಲ್ಲಿಯೇ ಇದ್ದ ಮತ್ತು ಈ ವಿಚಾರವನ್ನು ಆಲಿಸಿದ ಮರುಳ ಶಂಕರ ದೇವರು ಶಿವಪ್ರಸಾದದ ಮಹಿಮೆ ಅರಿಯಲು ಕಳಿಂಗ ದೇಶದಿಂದ ಕಲ್ಯಾಣಕ್ಕೆ ಬಂದು ಬಸವಣ್ಣನ ಮಹಾಮನೆಯ ಅಂಗಳದಲ್ಲಿದ್ದ ಪ್ರಸಾದದ ಹೊಂಡದಲ್ಲಿ ಯಾರಿಗೂ ಕಾಣದಂತೆ ಹನ್ನೆರಡು ವರ್ಷವಿದ್ದರು. ಅಲ್ಲಿಯೇ ಶರಣರ ಜೀವನದ ಚೈತನ್ಯಗಳಿಂದ ಸ್ಫೂರ್ತಿ ಪಡೆದು, ಗುಪ್ತಭಕ್ತಿಯ ಸಾಧನೆ ಮಾಡಿದರು. ಬಸವಾದಿ ಶರಣರೆಲ್ಲ ಅಚ್ಚರಿಪಡುವಂತೆ 12 ವರ್ಷಗಳ ಸಾಧನೆಯ ಸಿದ್ಧಿ ಪಡೆದ ಈ ಶರಣನನ್ನು ನೋಡಿದ ಅಲ್ಲಮ ಎಲ್ಲರಿಗೂ ಪರಿಚಯಿಸಿದನು. ನಂತರ ಶಂಕರ ದೇವರು ಬಯಲಾದರು.

ಒಟ್ಟಾರೆ ಮರುಳಶಂಕರದೇವರು ಬಸವಣ್ಣನ ಮಹಾಮನೆಯ ಪ್ರಸಾದದ ಹೊಂಡದಲ್ಲಿದ್ದರೆಂಬುದಾಗಿ ವಚನವೊಂದರಿಂದ ನಮಗೆ ತಿಳಿದುಬರುತ್ತದೆ. ಈ ಪ್ರಸಾದದ ಹೊಂಡದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಶರಣರು ಪೂಜಿಸಿ ಹೊರ ತೆಗೆದ ಹೂ ಪತ್ರಿಗಳನ್ನು ಇತರರು ತುಳಿಯಬಾರದೆಂದು ಆ ಹೊಂಡದಲ್ಲಿ ಹಾಕುತ್ತಿದ್ದರು. ಅದೇ ಹೊಂಡದಲ್ಲಿ ಈ ಮರುಳಶಂಕರದೇವರು ವಾಸವಾಗಿದ್ದರು ಎಂಬ ಅಭಿಪ್ರಾಯವಿದೆ. ಕೇವಲ ಪತ್ರಿ ಪುಷ್ಪವಲ್ಲದೆ ತಾವು ಸ್ವೀಕರಿಸಿದ ಪ್ರಸಾದದಲ್ಲಿನ ಮಿಕ್ಕಿದ್ದನ್ನು ಆ ಪ್ರಸಾದದ ಹೊಂಡದಲ್ಲಿ ಹಾಕುತ್ತಿದ್ದರು ಎಂಬುದು ಸ್ವತಃ ಮರುಳಶಂಕರದೇವರ ವಚನವೇ ಸ್ಪಷ್ಟಪಡಿಸುತ್ತದೆ.

ಜಂಗಮ ಪಾದೋದಕವ ಮಜ್ಜನ ಮಾಡಿ
ಪ್ರಸಾದಂಬುವ ಮಾಡಿ, ಎನಗೆನ್ನ ಗುರು ತಂದೆ,
ಶಿವಕಲ್ಯಾಣವ ಮಾಡಿದ
ಹಿಂಗದಿರು ಕಂಡಾ ಎಂದು ಕಂಕಣವ ಕಟ್ಟಲು
ಲಿಂಗೈಕ್ಯ ಚೈತನ್ಯ ಪ್ರಸಾದವೆಂದು
ತನಗೆ ಚೈತನ್ಯ ಜಂಗಮವೆಂದು

ನನಗೆ ಚೈತನ್ಯ ಲಿಂಗವೆಂದು ನಿರೂಪಿಸಿದ
ಜಂಗಮಪ್ರಸಾದ ಬಸವಣ್ಣನಿಂದಲ್ಲದೆ ದೊರಕೊಳ್ಳದೆಂದು
ಬಸವಣ್ಣನ ಸಾರಿದೆ.
ಬಸವಣ್ಣ ಮಾಡಿದ ಉಪಕಾರವನೇನ ಹೇಳುವೆನಯ್ಯಾ
ಒಡೆಯರು ಒಕ್ಕುದ ತಾ ಸವಿದು
ತನಗೆ ಒಕ್ಕಿದ ಮಿಕ್ಕಿದ ತನ್ನ ಗೃಹಚರರುಂಡು
ಮಿಕ್ಕ ಶೇಷ ಪ್ರಸಾದವು ಎನ್ನ ಲಿಂಗಕಾಯಿತ್ತು
ಆ ಪ್ರಸಾದ ಗುಂಡವೆ ಗೃಹವಾಯಿತ್ತು
ಆ ಪ್ರಸಾದ ಎನ್ನ ಲಿಂಗಕ್ಕೆ ಪೂಜೆ
ಎನಗೆ ಹೊದಿಕೆಯಾಗಿ ಎನ್ನ ತನು ಶುದ್ಧ ಪ್ರಸಾದವಾಯಿತ್ತು
ಮನ ಸಿದ್ಧ ಪ್ರಸಾದವಾಯಿತ್ತು
ಗುರುವಾಜ್ಞೆ ಹಿಡಿದೆನಾಗಿ ಆನೆ ಪ್ರಸಿದ್ಧ ಪ್ರಸಾದವಾದೆನಯ್ಯಾ
ಇನ್ನು ಬದುಕಿದೆನು ಕಾಣಾ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತಚನ್ನಮಲ್ಲಿಕಾರ್ಜುನ ದೇವಯ್ಯಾ
ಶಿಖಿಕರ್ಪೂರ ಯೋಗದಂತಾದೆನಯ್ಯಾ
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ

**ಸಂಸಾರ–ಸಾಗರ**

ಸಂಸಾರವೆಂದರೆ ಕೇವಲ ಕುಟುಂಬವಷ್ಟೇ ಅಲ್ಲ. ಲೌಕಿಕದಲ್ಲಿ ಕಣ್ಣಿಗೆ ಕಾಣುವ ಸಾಮಾಜಿಕ ಸ್ಥಿತಿಗತಿಗಳನ್ನು ಬೆನ್ನುಹತ್ತುವುದು, ಅವುಗಳಿಗಾಗಿ ಆಸೆ ಪಡುವುದು ಇರುತ್ತದೆ. ಇಹವನ್ನು ಗೆಲ್ಲುವ ಸಂದರ್ಭದಲ್ಲಿ ಏನೆಲ್ಲಾ ಸಮಸ್ಯೆಗಳನ್ನು ಗೆಲ್ಲಬೇಕು, ಮೀರಬೇಕು, ಅನುಭವಿಸಬೇಕು, ಕಾಪಾಡಿಕೊಳ್ಳಬೇಕು, ಎಚ್ಚರವಿರಬೇಕು ಇತ್ಯಾದಿಗಳನ್ನು ಸಮಾನವಾಗಿರಿಸಿಕೊಳ್ಳಬೇಕು. ಸಂಸಾರವೆಂಬುದು ಸಾಗರವಿದ್ದಂತೆ; ಇದನ್ನು ದಾಟುವುದು ಅಷ್ಟೊಂದು ಸುಲಭವಾದ ಮಾತಲ್ಲ. ಈ ಸಂಸಾರದ ಒಟ್ಟು ನೋಟವನ್ನು ಮರುಳಶಂಕರದೇವರು ಅತ್ಯಂತ ಮೌಲಿಕವಾದ ಮತ್ತು ದೃಷ್ಟಂತಪೂರ್ವಕವಾಗಿ ತಮ್ಮ ವಚನದಲ್ಲಿ ಕಟ್ಟಿಕೊಟ್ಟಿದ್ದಾರೆ.

ಸಂಸಾರವೆಂಬ ಸಾಗರವ ದಾಂಟುವಡೆ
ಅರಿವೆಂಬ ಹರುಗೋಲನಿಕ್ಕಿ, ಜ್ಞಾನವೆಂಬ ಅಂಬಿಗ
ಹರುಗೋಲದಲ್ಲಿ ಕುಳ್ಳಿರ್ದು,
ಸುಜ್ಞಾನವೆಂಬ ಘಾತದ ಗಳೆಯ ಪಿಡಿದು
ನಾನೀ ಹೊಳೆಯ ಕಂಡು, ಅಂಬಿಗನ ಕೇಳಿದಡೆ,
ನಾನು ಹಾಸಿಕೊಟ್ಟಿಹೆನೆಂದನು.
ನಾನು ನಿನ್ನ ನಂಬಿ ಹರುಗೋಲನೇರಿದೆನು ಕಾಣಾ, ಅಂಬಿಗರಣ್ಣಾಯೆಂದು
ನಾನು ಹರುಗೋಲದಲ್ಲಿ ಕುಳ್ಳಿರ್ದು ಹೊಳಿಯೊಳಗೆ ಹೋಗಲಿಕೆ
ಕಾಮವೆಂಬ ಕೊರಡು ಅಡ್ಡಬಿದ್ದಿತ್ತು
ಕ್ರೋಧವೆಂಬ ಸುಳಹಿನೊಳಗೆ

ಅಹಂಕಾರವೆಂಬ ಮೀನೂ ಬಂದು ನಿಂದಿತ್ತು
ಮಾಯೆಯೆಂಬ ಮೊಸಳೆ ಬಂದು ಬಾಯಬಿಡುತ್ತಿದ್ದಿತ್ತು
ಮೋಹವೆಂಬ ನೊರೆತೆರೆಗಳು ಹೆಚ್ಚಿ ಬರುತ್ತಿದ್ದಿತ್ತು
ಲೋಭವೆಂಬ ಕಾಳ್ಗಡಲು ಎಳದೊಯ್ಯುತ್ತಿದ್ದಿತ್ತು
ಮರವೆಂಬ ಮೊರಹು ನೂಕುತ್ತಲಿದ್ದಿತ್ತು
ಮತ್ಸರವೆಂಬ ಗಾಳಿ ತಲೆಕೆಳಗು ಮಾಡುತ್ತಿದ್ದಿತ್ತು
ಇವೆಲ್ಲವನ್ನೂ ಪರಿಹರಿಸಿ
ಎನ್ನ ಹೊಳೆಯ ದಾಂಟಿಸಿದನು ಅಂಬಿಗರಣ್ಣನು.
ಈ ಹೊಳೆಯ ದಾಂಟಿಸಿದ ಕೂಲಿಯ ನನ್ನ ಬೇಡಿದಡೆ
ಕೂಲಿಯ ಕೊಡುವಡೇನೂ ಇಲ್ಲೆಂದಡೆ
ಕೈಸೆರೆಯಾಗಿ ಎನ್ನನೆಳದೊಯ್ದನಯ್ಯಾ
ಅರುವೆಯ ಕೊಟ್ಟ ಕೂಲಿಗೆ ತನ್ನ ಕರುವ ಕಾಯಿಸಿಕೊಂಡನಯ್ಯಾ
ಅರಿಯದೆ ಹರುಗೋಲವ ನೆರೆತೊರೆಯ ದಾಂಟಿಸಿದ ಕೂಲಿಗೆ
ಕರುವ ಕಾಯಿದೆನು ಕಾಣಾ
ಶುದ್ಧ ಸಿದ್ಧ ಪ್ರಸಿದ್ಧಪ್ರಸನ್ನ ಪ್ರಭುವೆ ಶಾಂತಚನ್ನಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ

ಲೌಕಿಕವೆಂಬ ಸಂಸಾರ ಸಾಗರದಲ್ಲಿಳಿದ ಮೇಲೆ ಬರುವ ಎಲ್ಲ ಸಮಸ್ಯೆಗಳನ್ನೂ ಅನುಸರಿಸಿಕೊಂಡು ಅಥವಾ ಒಂದೊಂದಾಗಿ ಗೆಲ್ಲುತ್ತಾ ಮೋಕ್ಷವೆಂಬ ದಡವನ್ನು ತಲುಪಬೇಕು. ಈ ಕುರಿತು ಅನೇಕ ದೃಷ್ಟಾಂತಗಳ ಮೂಲಕ ಮರುಳಶಂಕರದೇವರು ಇಲ್ಲಿ ಚಿತ್ರಿಸಿದ್ದಾರೆ. ಎದುರುಗಡೆ ಸಾಗರದಂತಹ ಸಂಸಾರ ವ್ಯಾಪಿಸಿದಾಗ ಹೇಗೆ ದಾಟಬೇಕೆಂದು ಎದೆಗುಂದಿದರೆ ಅದು ತಲೆಯುದ್ದವಾಗಿಬಿಡುತ್ತದೆ. ಅಲ್ಲಿ ಈಸುವುದನ್ನು ಕಲಿತರೆ ಅದು ಎದೆಯುದ್ದದಷ್ಟೇ ಎನಿಸಿಬಿಡುತ್ತದೆ. ಆಗ ಬಹಳ ಸುಲಭವಾಗಿ ದಾಟಬಹುದು. ಅನುಪಮ ಪ್ರಸಾದಿ, ಅವಿರಳ ಜ್ಞಾನಿ ಮರುಳ ಶಂಕರ ದೇವರು ಪ್ರಸ್ತುತ ವಚನದಲ್ಲಿ ಅಂಬಿಗರಣ್ಣನನ್ನು ನಂಬಿ ಹರಿಗೋಲನೇರಿ ಸಂಸಾರವೆಂಬ ಸಾಗರವನ್ನು ದಾಟಬೇಕೆಂದು ಹೇಳಿದ್ದಾರೆ.

ಅಂಬಿಗರಣ್ಣನೆಂದರೆ ಇಲ್ಲಿ ಬೇರಾರು ಅಲ್ಲ. ನಮ್ಮ ಸದ್ಗುರು ಅಥವಾ ನಮ್ಮ ಆಧ್ಯಾತ್ಮಿಕ ಜ್ಞಾನ. ಇದು ಅಳವಟ್ಟರೆ ಸಂಸಾರದ ಅನಿತ್ಯತೆ ಖಚಿತವಾಗಿ, ವ್ಯಾಮೋಹಗಳು ತನ್ನಷ್ಟಕ್ಕೆ ತಾನೇ ಮಾಯವಾಗುತ್ತವೆ. ಅರಿವೇ ಗುರು ಅಲ್ಲವೆ? ಮೇಲಿನ ವಚನದಲ್ಲಿ ಶಿವಶರಣ ಮರುಳಶಂಕರದೇವರು 'ಜ್ಞಾನವೆಂಬ ಅಂಬಿಗ ಅರುಹೆಂಬ ಹರಿಗೋಲನಿಕ್ಕಿ' ಎಂಬ ರೂಪಕವನ್ನು ಸೃಷ್ಟಿಸಿದ್ದಾರೆ. ಇಲ್ಲಿ ವ್ಯವಹಾರಜ್ಞಾನವನ್ನೂ ಅರುಹವೆಂದು ಕರೆಯಬಹುದು. ಆಧ್ಯಾತ್ಮಿಕ ಜ್ಞಾನವೆಂಬ ಅಂಬಿಗನ ಬಲದಿಂದ ವ್ಯವಹಾರ ಜ್ಞಾನವೆಂಬ ಹರಿಗೋಲನ್ನು ಹತ್ತಿ ಸಂಸಾರ ಸಾಗರದಲ್ಲಿ ಇಳಿಯಬೇಕು.

ಅಂಬಿಗ ಮತ್ತು ಹರಿಗೋಲು ಇದ್ದ ಮಾತ್ರಕ್ಕೆ ಎಂದರೆ ಆಧ್ಯಾತ್ಮಿಕ ಜ್ಞಾನ ಮತ್ತು ವ್ಯವಹಾರ ಜ್ಞಾನ ಇದ್ದ ಮಾತ್ರಕ್ಕೆ ಹೊಳೆ ದಾಟುವುದು ಸಾಧ್ಯವಿಲ್ಲ. ಇವೆರಡರ ಜೊತೆಗೆ ಸುಜ್ಞಾನವೆಂಬ ಸಟ್ಟುಗ ಬೇಕೇ ಬೇಕು. ಹರಿಗೋಲನ್ನು ಮುಂದಕ್ಕೆ ದೂಡುವಂಥದ್ದೇ ಸಟ್ಟುಗ. ಸುಜ್ಞಾನವೆಂದರೆ ಪರಮಾತ್ಮನಿಗೆ ಸಂಪೂರ್ಣ ಶರಣಾಗತಿ ಆಗುವುದು. ಆತನೇ ಎಲ್ಲ ರೀತಿಯ ಕರ್ತಾರನಾಗಿದ್ದಾನೆ. ಲಿಂಗಜ್ಞಾನ ಲಿಂಗವನರಿಯದೆ ಮತ್ತೇನನ್ನೂ ಅರಿತರೂ ಫಲವಿಲ್ಲ. ಲಿಂಗವನರಿತ ಬಳಿಕ ಮತ್ತೇನನ್ನೂ ಅರಿಯುವ ಅಗತ್ಯವಿಲ್ಲ. ಆ ಲಿಂಗ ಜ್ಞಾನವೇ ಸುಜ್ಞಾನ.

ಹೀಗೆ ಹೊಳೆಗೆ ಇಳಿದಾಗ ಸಹಜವಾಗಿ ಕಾಮವೆಂಬ ಕೊರಡು, ಕ್ರೋಧವೆಂಬ ಸುಳುಹು, ಅಹಂಕಾರವೆಂಬ ಮೀನು, ಅತ್ಯಾಶೆಯೆಂಬ ಮೊಸಳೆ, ಸತಿಸುತಬಂಧುಗಳೆಂಬ ವ್ಯಾಮೋಹ, ಲೋಭವೆಂಬ ಪ್ರವಾಹ ಇವೆಲ್ಲವೂ ನಮ್ಮನ್ನು ಹೋಗಬೇಕಾದಲ್ಲಿಗೆ ಕೊಂಡೊಯ್ಯದೆ ವಿರುದ್ಧ ದಿಕ್ಕಿಗೆ ಎಳೆದೊಯ್ಯುತ್ತವೆ. ಮದವೆಂಬ ಸೆಳವಿನಿಂದಲೂ ತಪ್ಪಿಸಿಕೊಳ್ಳಲಾಗುವುದಿಲ್ಲ. ಆದರೂ ನಮ್ಮಲ್ಲಿ ಸುಜ್ಞಾನವೆಂಬ ಸಟ್ಟುಗ ಮಹಾಜ್ಞಾನವೆಂಬ ಘಾತಗಳು ಇರುವವರೆಗೂ ಯಾವ ಅಡೆತಡೆಗಳೂ ನಿಲ್ಲಿಸಲಾರವು. ಅವು ಮೋಕ್ಷವೆಂಬ ಗುರಿಯೆಡೆಗೆ ಸಾಗಿಯೇ ಸಾಗಿಸುತ್ತವೆ.

ಸಂಸಾರದಲ್ಲಿ ನಾವಷ್ಟೇ ಪಾರಾಗುವುದಲ್ಲ. ನಮ್ಮ ಸುತ್ತಮುತ್ತ ಇರುವ ಮುಗ್ಧರಿಗೆ, ಅಜ್ಞಾನಿಗಳಿಗೆ, ಆತ್ಮಜಾಗೃತಿ ಇಲ್ಲದವರಿಗೆ ನಮ್ಮ ಸುಜ್ಞಾನ ಮಹಾಜ್ಞಾನದ ಲಾಭ ಹಂಚಬೇಕು. ಆ ದೇವರು ಕೊಟ್ಟಿರುವ ಈ ಶರೀರವನ್ನು ವೃಥಾ ಪೋಲಾಗಲಿಕ್ಕೆ ಬಿಡಬಾರದು. ಕಾಯಕ ಮಾಡುತ್ತಲೇ ಇರಬೇಕು. ನಮ್ಮ ಜತೆಯಲ್ಲಿದ್ದವರನ್ನೂ ಸರಿಯಾದ ದಾರಿಯಲ್ಲಿ ನಡೆಸುವುದು ನಾವು ಸಂಪಾದಿಸಿದ ಜ್ಞಾನದ ಅರ್ಥಕ್ಕೆ ಸಾರ್ಥಕ್ಯ ಬರುತ್ತದೆ.

ಒಟ್ಟಾರೆ ಮರುಳಶಂಕರದೇವರಲ್ಲಿ ವಿಶೇಷವಾಗಿ ತೋರುವ ಗುಣ 'ಶರಣಸತಿ ಲಿಂಗಪತಿ'ಯೆಂಬ ಭಾವ ಇವರಲ್ಲಿ ಉಲ್ಬಾ ಆಗಿದೆ. ಇದು ಅವರ ಸೂಫಿ ಮೂಲವನ್ನು ಎತ್ತಿ ತೋರಿಸುತ್ತದೆ. ವ್ಯಕ್ತಿಯ ಆತ್ಮೋನ್ನತಿಗೆ ಮತ್ತು ಜಗತ್ತಿನ ಒಳಿತಿಗಾಗಿ ಯಾವುದಾದರೂ ಕಾಯಕದಲ್ಲಿ ನಿರತನಾಗಿರಬೇಕೆಂಬ ಶುದ್ಧವಾದ ಭಾವನೆಯನ್ನು ಇವರಲ್ಲಿ ಕಾಣುತ್ತೇವೆ. ಕಾಯಕ ಯಾವುದೇ ಆದರೂ ಅದರಲ್ಲಿ ಸಂಪೂರ್ಣವಾಗಿ ಅರ್ಪಿಸಿಕೊಳ್ಳುವ ಮನಸ್ಸು ಅತೀ ಮುಖ್ಯ. ಅಸಹ್ಯ, ಅಸಹಜ, ಅನಾನುಕೂಲ, ಅವಹೇಳನ ಇತ್ಯಾದಿ ಮನಸ್ಥಿತಿಯನ್ನೂ ಮೀರಿದ ಅತ್ಯಪರೂಪದ ವ್ಯಕ್ತಿತ್ವವನ್ನು ಮರುಳಶಂಕರದೇವರಲ್ಲಿ ನಿಜವಾಗಿಯೂ ಕಂಡುಬರುತ್ತದೆ. ಹೀಗೆ ವಚನಕಾರರು ಅಥವಾ ಶರಣರು ತಮಗೆ ಒದಗಿಬಂದ ಅವಕಾಶವನ್ನು ಅಥವಾ ಆಯ್ಕೆ ಮಾಡಿಕೊಂಡ ಕಾಯಕವನ್ನು ಪ್ರೀತಿಪೂರ್ವಕವಾಗಿ ಅನುಭೋಗಿಸಿದ್ದಾರೆ. ಇತರರಿಗೂ ಮಾದರಿಯಾಗಿ ಬದುಕಿ ತೋರಿಸಿದ್ದಾರೆ.

□

# ಲಿಂಗಾಯತ ಅಧ್ಯಯನಗಳು

**ಪ್ರಕಾಶ ಗಿರಿಮಲ್ಲನವರ**

**ಶ್ರೀ** ಸುತ್ತೂರು ವೀರಸಿಂಹಾಸನ ಮಠದ ಪ್ರತಿಷ್ಠಿತ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಗೆ ಪಾತ್ರವಾದ ಮೊದಲ ಕೃತಿ ಡಾ. ಎಂ. ಚಿದಾನಂದಮೂರ್ತಿಯವರ 'ಲಿಂಗಾಯತ ಅಧ್ಯಯನಗಳು'. ಡಾ. ಚಿದಾನಂದಮೂರ್ತಿಗಳು ಸುತ್ತೂರು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಸ್ಥಾಪಿಸಿದ ಉಚಿತ ಪ್ರಸಾದನಿಲಯದಲ್ಲಿ ಆಶ್ರಯ ಪಡೆದು ಅಧ್ಯಯನ ಮಾಡಿದವರು. ನಮ್ಮ ನಾಡಿನ ಶ್ರೇಷ್ಠ ಸಂಶೋಧಕರಲ್ಲಿ ಒಬ್ಬರಾದ ಡಾ. ಚಿದಾನಂದಮೂರ್ತಿಯವರು ತೀ.ನಂ.ಶ್ರೀ ಅವರ ಮಾರ್ಗದರ್ಶನದಲ್ಲಿ ರಚಿಸಿದ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕೃತಿ ಶಾಸನ ಕ್ಷೇತ್ರದ ಒಂದು ಆಚಾರ್ಯ ಕೃತಿಯಾಗಿದೆ. ಕನ್ನಡ ನಾಡಿನ ಇತಿಹಾಸವನ್ನು ಅರಿಯಬೇಕೆನ್ನುವ ಯಾರೇ ಆದರೂ ಡಾ. ಮೂರ್ತಿ ಅವರ ಕೃತಿಯನ್ನು ಗಮನಿಸದೆ ಮುಂದೆ ಹೋಗುವಂತಿಲ್ಲ. ಸಂಶೋಧನ ಕ್ಷೇತ್ರದಲ್ಲಿ ಡಿ.ಎಲ್.ಎನ್., ಶಂಬಾ ಜೋಶಿ ಮೊದಲಾದ ಹಿರಿಯ ತಲೆಮಾರಿನ ವಿದ್ವಾಂಸರ ವಾರಸುದಾರಿಕೆಯನ್ನು ಅತ್ಯಂತ ವ್ಯವಸ್ಥಿತವಾಗಿ ಮುಂದುವರಿಸಿದ ಕೀರ್ತಿ ಡಾ. ಚಿದಾನಂದಮೂರ್ತಿ ಅವರದು. ಕೇಂದ್ರ ಸಾಹಿತ್ಯ ಅಕಾಡೆಮಿ, ಪಂಪ ಪ್ರಶಸ್ತಿ ಮೊದಲಾದ ಪ್ರತಿಷ್ಠಿತ ಪ್ರಶಸ್ತಿಗಳಿಂದ ಭೂಷಿತರಾದ ಡಾ. ಮೂರ್ತಿ ಅವರು ನಮ್ಮ ನಾಡು ಕಂಡ ಶ್ರೇಷ್ಠ ಹೋರಾಟಗಾರರೂ ಹೌದು. 1987–88ನೇ ಸಾಲಿನ ಮೊಟ್ಟಮೊದಲನೆಯ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಯು ಡಾ. ಚಿದಾನಂದಮೂರ್ತಿಯವರ 'ಲಿಂಗಾಯತ ಅಧ್ಯಯನಗಳು' ಕೃತಿಗೆ ಪ್ರಾಪ್ತವಾಯಿತು.

'ಲಿಂಗಾಯತ ಅಧ್ಯಯನಗಳು' ಡಾ. ಚಿ.ಮೂ ಅವರು 25 ವರ್ಷಗಳ ಕಾಲ ವೀರಶೈವ–ಲಿಂಗಾಯತ ಸಾಹಿತ್ಯ, ಮತ, ಸಮಾಜಗಳನ್ನು ಕುರಿತು ಆಗಾಗ ಬರೆದಿರುವ ಸಂಪ್ರಬಂಧಗಳ ಸಂಕಲನ. ಪ್ರಬುದ್ಧ ಕರ್ನಾಟಕ ಸೇರಿ ಹಲವಾರು ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಗೊಂಡ 57 ಲೇಖನಗಳನ್ನು ಇಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ವಿದ್ವತ್ ವಲಯದಲ್ಲಿ ಒಂದು ಸಮಸ್ಯೆಯನ್ನು ಎತ್ತಿಕೊಂಡು ಹಲವು ವಿದ್ವಾಂಸ ರೊಂದಿಗೆ ಅವರು ವಾಗ್ವಾದಕ್ಕಿಳಿದು ತಮ್ಮ ಅಭಿಪ್ರಾಯವನ್ನು ಸಮರ್ಥಿಸುವ ಅನೇಕ ಆಕರಗಳನ್ನು ವಿಶ್ಲೇಷಿಸುವ ರೀತಿ ಅನನ್ಯವಾದುದು. ಉದಾ : ಬಸವಣ್ಣನವರ ವಚನಗಳ

ಅರ್ಥಕ್ಕೆ ಡಾ. ಎಂ.ಎಂ. ಕಲಬುರ್ಗಿ ಅವರೊಂದಿಗೆ ನಡೆಸಿದ ಚರ್ಚೆ ತುಂಬ ಅರ್ಥಪೂರ್ಣವಾಗಿವೆ. 'ಹಡೆದೊಡವೆ ವಸ್ತುವನ್ನು...' ಎಂದು ಪ್ರಾರಂಭವಾಗುವ ವಚನಕ್ಕೆ ಡಾ. ಕಲಬುರ್ಗಿ ಅವರು 'ಯಾವನೋ ಒಬ್ಬ ಶರಣ ತನ್ನ ಬಳಿ ಇರುವ ಸಂಪತ್ತನ್ನು ಶಿವಭಕ್ತರಿಗೆ ಮಾತ್ರ ಕೊಡಬೇಕು: ಮತ್ತು ಅದನ್ನು ಕಡವಾಗಿ ಅಥವಾ ಬಡ್ಡಿಯ ಮೇಲೆ ಯಾರಿಗೂ, ಶಿವಶರಣರಿಗೂ ಕೊಡಕೂಡದು' ಎಂಬ ಅರ್ಥವನ್ನು ಹೇಳುತ್ತ ದಾನ ಮತ್ತು ದಾಸೋಹದ ಪ್ರಸ್ತಾಪ ಮಾಡಿದ್ದರು. ಅದನ್ನು ಡಾ. ಮೂರ್ತಿ ಅವರು ಅಲ್ಲಗಳೆದು 'ಬಸವಣ್ಣನ ಆ ವಚನದಲ್ಲಿ ದಾಸೋಹ ಅಥವಾ ದಾನದ ಸೂಚನೆಯೇ ಇಲ್ಲ. ಶರಣರಿಗೆ ಕಡ, ಬಡ್ಡಿಗೆ ಕೊಟ್ಟ ಹಣ ವಾಪಸ್ ಬಂದರೆ ಸಂತೋಷ. ಇಲ್ಲದಿದ್ದರೆ ಲಿಂಗದ ಆಸ್ತಿ ಲಿಂಗಕ್ಕೆ ಸೇರಿತು ಎಂದು ಇನ್ನೂ ಸಂತೋಷ ಪಡಬಹುದು. ಶರಣರಲ್ಲದವರಿಗೆ ಕಡಬಡ್ಡಿಗೆ ಕೊಟ್ಟ ಹಣ ವಾಪಸ್ ಬರದಿದ್ದರೆ ಬರಲಿಲ್ಲವೆಂಬ ಕೊರಗನ್ನು ಬಿಟ್ಟರೆ ಅಲ್ಲಿ ಏನೂ ಸುಖವಿಲ್ಲ. 'ಜಂಗಮ' ಮಾತಿಗೆ ಸಮಾಜವೆಂಬ ಅರ್ಥವನ್ನು ಆರೋಪಿಸಿ ಕಲಬುರ್ಗಿಯವರು ಬರೆದ ಬರಹಗಳನ್ನು ನೋಡಿದ್ದೇನೆ. ವಾಸ್ತವವಾಗಿ ಇಲ್ಲದ ಅರ್ಥಗಳನ್ನು ಆರೋಪಿಸುವುದಕ್ಕಿಂತ ಸರಳ, ವಾಸ್ತವ ಅರ್ಥಗಳನ್ನು ಗ್ರಹಿಸುವುದೇ ಉಚಿತವೆಂಬ ಭಾವನೆಯವನು ನಾನು' (ಲಿಂಗಾಯತ ಅಧ್ಯಯನಗಳು ಪು. 86) ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಇದೇ ಲೇಖನದಲ್ಲಿ ಸೀತಾರಾಮ ಜಾಗೀರದಾರರು ಎತ್ತಿದ 'ವಾಳಿಯಾವು' 'ಓಱಿಯಾವು' ಪದಗಳ ನಿಜಾರ್ಥ ವಿಶ್ಲೇಷಣೆಯನ್ನು ಮಾಡಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ಮತ್ತೆ ಚರ್ಚೆ ನಡೆದಾಗ 'ಪುನಸ್ಸಮರ್ಥನೆ' ಎಂಬ ಮತ್ತೊಂದು ಸುದೀರ್ಘ ಲೇಖನ ಬರೆಯುತ್ತಾರೆ. ವಚನ ಸಾಹಿತ್ಯಕ್ಕೆ ಸಂಬಂಧಿಸಿ ಇಂದಿಗೂ ಮೌಲಿಕವೆನಿಸುವ ಅವರ ಲೇಖನಗಳು ಈ ಕೃತಿಯಲ್ಲಿವೆ. 'ವಚನ ಸಾಹಿತ್ಯದ ಉಗಮ', 'ವಚನವೊಂದರ ಅಂದಿನರ್ಥ ಮತ್ತು ಇಂದಿನರ್ಥ', 'ಉಗಾಭೋಗಗಳು ಮತ್ತು ವಚನಗಳು', 'ವಚನಗಳು ಶಾಸ್ತ್ರವೇ, ಸಾಹಿತ್ಯವೇ?' 'ಅಂಬಿಗರ ಚೌಡಯ್ಯನ ವಚನವೊಂದರ ಪಾಠ ನಿರ್ಣಯ', ಮೊದಲಾದ ಲೇಖನಗಳು ವಚನ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಇಂದಿಗೂ ಅತ್ಯಂತ ಪ್ರಮುಖ ಆಕರಗಳಾಗಿವೆ. 'ವಚನ ಸಾಹಿತ್ಯದ ಉಗಮವು' ತ್ರಿಪದಿಗಳ ಮೂಲದಿಂದ ಆಗಿದೆ ಎಂಬ ಅಭಿಪ್ರಾಯಕ್ಕೆ ಪರ್ಯಾಯವಾಗಿ ಡಾ. ಎಲ್. ಬಸವರಾಜು, ರಂ.ಶ್ರೀ. ಮುಗಳಿ, ಡಿ.ಎಲ್.ಎನ್., ಡಾ. ಆರ್.ಸಿ. ಹಿರೇಮಠ ಮೊದಲಾದ ಬಹುಶ್ರುತ ವಿದ್ವಾಂಸರು ಬೇರೆ ಬೇರೆ ಮೂಲಗಳನ್ನು ಹೇಳಿದರೂ ಇಂದಿಗೂ ಡಾ. ಮೂರ್ತಿ ಅವರ ವಿಚಾರವನ್ನು ಅಲ್ಲಗಳೆಯುವ ಯಾವ ಲೇಖನಗಳು ಪ್ರಕಟವಾಗಿಲ್ಲವೆಂಬುದು ಹೆಮ್ಮೆಯ ವಿಷಯ. ಸಾಹಿತ್ಯ ಚರಿತ್ರೆ ಸಂಪುಟಕ್ಕೆ ಬರೆದ 'ಶೂನ್ಯಸಂಪಾದನೆ' ಲೇಖನ ಇಲ್ಲಿ ಗಮನಾರ್ಹ. ಅವರು ಈ ಮೊದಲೇ 'ಶೂನ್ಯಸಂಪಾದನೆಯನ್ನು ಕುರಿತು' ಎಂಬ ಕೃತಿಯನ್ನು ರಚಿಸಿದ್ದರು. ಅದು ವಿವಾದವೂ ಆಗಿತ್ತು. ಆದರೆ ಡಾ. ಮೂರ್ತಿ ಅವರು ಶೂನ್ಯಸಂಪಾದನೆ

ಯನ್ನು ವಿನಾಕಾರಣ ವೈಭವೀಕರಣ ಮಾಡುವುದರಿಂದ ಮೂಲ ವಚನಕಾರರ ಕರ್ತೃತ್ವಕ್ಕೆ ಧಕ್ಕೆ ಬರುತ್ತದೆಂಬ ಅಭಿಪ್ರಾಯಕ್ಕೆ ಬಂದು ನಿಲ್ಲುತ್ತಾರೆ. 'ಶೂನ್ಯಸಂಪಾದನೆಯ ಯಕ್ಷಗಾನೀಯ ಶೈಲಿ' ಎಂಬ ಡಾ. ಮೂರ್ತಿ ಅವರ ಲೇಖನವನ್ನು ಗಮನಿಸಿ ಡಾ. ಕಲಬುರ್ಗಿಯವರು ಶೂನ್ಯಸಂಪಾದನೆಯಲ್ಲಿ 'ಪ್ರಸಂಗ' ಎಂಬ ಹೆಸರು ಬರುವುದರಿಂದ ಶೂನ್ಯಸಂಪಾದನೆ ಯಕ್ಷಗಾನದ ಒಂದು ಪ್ರಕಾರವಾಗಿರಬಹುದು ಎಂಬ ನಿರ್ಧಾರಕ್ಕೆ ಬರುತ್ತಾರೆ.

ಸರ್ವಜ್ಞ ಕವಿ ಕುರಿತು ನಾಲ್ಕು ಮೌಲಿಕ ಲೇಖನಗಳು ಇಲ್ಲಿವೆ. ಸರ್ವಜ್ಞ ಅಂಕಿತ ಪರಮಾರ್ಥವೋ ಸರ್ವಜ್ಞವೋ ಎಂಬ ಜಿಜ್ಞಾಸೆ ನಮ್ಮ ವಿದ್ವತ್‌ಲೋಕವನ್ನು ಕಾಡಿತ್ತು. ಆಗ ಡಾ. ಮೂರ್ತಿ ಅವರು ಡಾ. ಎಲ್. ಬಸವರಾಜುರವರ 'ಪರಮಾರ್ಥ' ಅಂಕಿತ ವಿಚಾರವನ್ನು ತಳ್ಳಿಹಾಕಿ 'ಸರ್ವಜ್ಞ' ಎಂಬುದೇ ಅವನ ನಿಜವಾದ ಅಂಕಿತ ಎಂಬ ನಿರ್ಣಯಕ್ಕೆ ಬರುತ್ತಾರೆ. ಅವರ ಈ ನಿರ್ಣಯಕ್ಕೆ ಇಡೀ ವಿದ್ವತ್‌ಲೋಕ ತಲೆದೂಗಿತು. 'ಸರ್ವಜ್ಞನ ಮೇಲೆ ವಚನಕಾರರ ಪ್ರಭಾವ', 'ಸರ್ವಜ್ಞನ ಸಮಾಜ ದರ್ಶನ' ಮತ್ತು 'ಉತ್ತಂಗಿಯವರು ಸಂಪಾದಿಸಿದ ಸರ್ವಜ್ಞನ ವಚನಗಳ ಆವೃತ್ತಿಗಳು' ಕುರಿತು ಬರೆದ ಲೇಖನಗಳಲ್ಲಿ ಡಾ. ಮೂರ್ತಿ ಅವರು ವಿಶೇಷ ಬೆಳಕು ಚೆಲ್ಲಿದ್ದಾರೆ.

ಶರಣ ಸಾಹಿತ್ಯದ ಬೆಳವಣಿಗೆಯಲ್ಲಿ ಕಂಡುಬರುವ ಬಸವ ಪುರಾಣ, ಹರಿಹರನ ರಗಳೆಗಳ ಕುರಿತು ಶೋಧಪರ ಲೇಖನಗಳು ಇಲ್ಲಿವೆ. 'ಹರಿಹರ ಮತ್ತು ವಚನಕಾರರು' ಅವರ ಮತ್ತೊಂದು ಗಮನಾರ್ಹ ಲೇಖನ. ವಚನಾಂಕಿತಗಳ ಬಗ್ಗೆಯೂ ಡಾ. ಮೂರ್ತಿ ಅವರು ಇದಮಿತ್ಥಂ ಎಂದು ಹೇಳುವ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. 'ಗೋಗೇಶ್ವರ' (ಗೊಗ್ಗೇಶ್ವರ) ಅಲ್ಲಮನ ಅಂಕಿತ ಎಂಬ ಅಭಿಪ್ರಾಯ ಅವರದು. ಅದರ ಬಗ್ಗೆ ಚರ್ಚೆ ನಡೆದಂತೆ 'ಅಲ್ಲಮನ ಅಂಕಿತ 'ಗೋಗ್ಗೇಶ್ವರ' ಹೆಚ್ಚಿನ ಸಮರ್ಥನೆ' ಎಂಬ ಮತ್ತೊಂದು ಲೇಖನವನ್ನು ಬರೆದು ಸಮರ್ಥಿಸಿಕೊಂಡಿದ್ದಾರೆ. ಶರಣ ಪರಂಪರೆಯಲ್ಲಿ ಹೆಚ್ಚು ಚರ್ಚೆಗೆ ಒಳಗಾದವಳು ಅಕ್ಕಮಹಾದೇವಿ. 'ಅಕ್ಕಮಹಾದೇವಿಯ ಗಂಡ ಕೌಶಿಕನನ್ನು ಇತಿಹಾಸದಲ್ಲಿ ಗುರುತಿಸುವ ಒಂದು ಪ್ರಯತ್ನ', 'ಮಹಾದೇವಿಯಕ್ಕನ ಹೆಸರಿನ ಬಗ್ಗೆ ಒಂದು ಸಾಧಾರ ಕಲ್ಪನೆ', 'ಮಹಾದೇವಿಯಕ್ಕನ ಬದುಕಿನ ರೂಪುರೇಷೆಗಳು' (ಒಂದು ಐತಿಹಾಸಿಕ ಪುನಾರಚನೆ), 'ಅಕ್ಕಮಹಾದೇವಿಯ ಒಂದು ಹೊಸ ಹಾಡು ಮತ್ತು ಕಿನ್ನರಯ್ಯ' ಹೀಗೆ ಒಟ್ಟು ನಾಲ್ಕು ಲೇಖನಗಳು ಇಲ್ಲಿವೆ.

ಈ ಕೃತಿಯ ಒಂದು ಮುಖ್ಯ ಲೇಖನ 'ಲಿಂಗಾಯತ' ಪದದ ನಿಷ್ಪತ್ತಿ.' 'ಲಿಂಗಾಯತ' ಪದವನ್ನು ವೀರಶೈವಕ್ಕೆ ಪರ್ಯಾಯವಾಗಿ ಬಳಸುತ್ತ ಬರಲಾಗಿದೆ. 'ಲಿಂಗಾಯತ' ಮತ್ತು 'ಲಿಂಗವಂತ' ಪದಗಳ ವಿಶ್ಲೇಷಣೆ ಮಾಡುತ್ತ ಮೂರು ರೀತಿಯಲ್ಲಿ ಲಿಂಗಾಯತ ಪದದ ಬೆಳವಣಿಗೆಯನ್ನು ವಿವರಿಸುತ್ತಾರೆ. 1. 'ಲೋಕಾಯತ' ಪದದಂತೆ ಬಳಕೆಯಾಗಿರಬಹುದು, 2. ಕನ್ನಡದಲ್ಲಿ 'ಆಯ್ತ' ಎಂಬ ತದ್ದಿತ ಪ್ರತ್ಯಯವಿದೆ. ಅದು 'ಈ ನಿಯೋಗವನ್ನು ಈತ ನಡೆಸುತ್ತಾನೆ' ಎಂಬರ್ಥ ಕೊಡುತ್ತದೆ. 'ಲಿಂಗಾಯ್ತ' ಎಂದರೆ ಲಿಂಗಕ್ಕೆ ಸಂಬಂಧಿಸಿದವನು, ಲಿಂಗದ ಸೇವೆ ಮಾಡುವವನು ಎಂದಾಗುತ್ತದೆ. 3. ಖ್ಯಾತ

ವಿದ್ವಾಂಸರಾಗಿದ್ದ ಟಿ.ಎನ್. ಮಲ್ಲಪ್ಪನವರು ತಿಳಿಸಿದ ಪ್ರಕಾರ 'ಆಯತ' ಎಂಬ ಸಂಸ್ಕೃತ ಪದಕ್ಕೆ ವಿಸ್ತಾರ, ದೊಡ್ಡದು ಎಂಬರ್ಥವಿದೆಯೆಂದು ಭಾವಿಸಿದ ಡಾ. ಮೂರ್ತಿ ಅವರು 'ಗುರುವು ಭಕ್ತನಿಗೆ ಕೊಡುವ ದೀಕ್ಷೆ' ಎಂದು ವಿಸ್ತರಿಸುತ್ತ 'ಆಯತಲಿಂಗ' ಎಂದರೆ ಇಷ್ಟಲಿಂಗ. ಇದರ ಜೊತೆ ಬರುವ ಸ್ವಾಯತ ಸನ್ನಿಹಿತ ಲಿಂಗಗಳಿಗೆ ಪ್ರಾಣಲಿಂಗ. ಭವಲಿಂಗಗಳೆಂದು ಅರ್ಥ. ಇವು ಮೂರೂ ಸೇರಿ 'ಲಿಂಗತ್ರಯ'ವೆನ್ನಿಸಿಕೊಳ್ಳುತ್ತವೆ. 'ಆಯತಲಿಂಗ'ವೇ (ಇಷ್ಟಲಿಂಗ) ಕಣ್ಣಿಗೆ ಕಾಣಿಸಿಕೊಳ್ಳತಕ್ಕದ್ದು ಮತ್ತು ವೀರಶೈವನನ್ನು ಇತರ ಶೈವರಿಂದ ಬೇರ್ಪಡಿಸತಕ್ಕದ್ದು, ಎಲ್ಲ ಲಿಂಗಗಳಿಗೆ ಇದೇ ಮೂಲವಾದುದು. 'ಲಿಂಗಾಯತ' ಎನ್ನುವ ಮಾತನ್ನು ಈ ಹಿನ್ನೆಲೆಯಲ್ಲಿ ವಿವರಿಸಲು ಸಾಧ್ಯವಾಗುತ್ತದೆ. ಎಂದು ಡಾ. ಚಿ.ಮೂ.ರವರು ಲಿಂಗಾಯತ ಪದಕ್ಕೆ ನಿರ್ದಿಷ್ಟ ಅರ್ಥವನ್ನು ಕೊಡುತ್ತಾರೆ. (ಲಿಂಗಾಯತ ಅಧ್ಯಯನಗಳು, ಪು. 434) ಡಾ. ಮೂರ್ತಿ ಅವರ ಈ ವಿಚಾರಗಳೇ ಬೆಳೆದು ಉತ್ತರ ಕರ್ನಾಟಕದ ಜನರು 'ಲಿಂಗಾಯತ' ಪದಕ್ಕೆ ದಟ್ಟವಾಗಿ ಅಂಟಿಕೊಳ್ಳುವಂತೆ ಮಾಡಿತೆಂದು ಹೇಳಬಹುದು.

1973ರಲ್ಲಿ ಬೆಂಗಳೂರಿನಲ್ಲಿ 19ನೇ ಅಖಿಲ ಭಾರತ ವೀರಶೈವ ಮಹಾಸಭೆ ಅಧಿವೇಶನ ಜರುಗಿತು. ಆ ಸಂದರ್ಭದಲ್ಲಿ ಡಾ. ಮೂರ್ತಿಯವರು 'ವೀರಶೈವ ಧರ್ಮ, ಸಂಸ್ಕೃತಿ, ಸಮಾಜಗಳನ್ನು ಕುರಿತು ಒಂದು ಚಿಂತನೆ' ಎಂಬ ಭಾಷಣ ಮಾಡುತ್ತ ಈಗ ಆಗಿರುವುದು ಮುಂದೆ ಆಗಬೇಕಾಗಿರುವುದರ ಕುರಿತು ಸುದೀರ್ಘವಾಗಿ ಆಲೋಚಿಸಿದ ಒಂದು ಬರಹ ಇಲ್ಲಿದೆ. ಈ ಭಾಷಣದಲ್ಲಿ ವೀರಶೈವ ಸಾಹಿತ್ಯದ ಇತಿಹಾಸದ ಮೇಲೆ ಸಂಶೋಧನೆಯ ಬೆಳಕು ಚೆಲ್ಲುತ್ತ ಸಮಾಜಮುಖಿಯಾಗಿ ಸಾಗುತ್ತಾರೆ. ಸಮಾಜದಲ್ಲಿರುವ ಜಾತಿ ಒಳಜಾತಿ ಪಂಗಡಗಳ ಪರಿಣಾಮವಾಗಿ ಆಗುತ್ತಿರುವ ಅನಾಹುತಗಳ ಕುರಿತು ಎಚ್ಚರಿಸುತ್ತಾರೆ. ಜಂಗಮ ಜಾತಿ ಕುರಿತಾಗಿ ಎಚ್ಚರಿಸುತ್ತ ಜಂಗಮ ಜಾತಿಯಲ್ಲ ಅದೊಂದು ತತ್ವ ಎಂಬ ನಿರ್ಣಯಕ್ಕೆ ಬರುತ್ತಾರೆ. ಜಂಗಮಾಭಿವೃದ್ಧಿ ಸಂಸ್ಥೆಗಳು ಅಥವಾ ಇತರ ಒಳಪಂಗಡಗಳ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದರೆ ಸಮಾಜ ಛಿದ್ರವಾಗುತ್ತದೆ ಎಂದು ನಾಲ್ಕು ದಶಕಗಳ ಹಿಂದೆ ಡಾ. ಮೂರ್ತಿಯವರು ಆಡಿದ ಮಾತುಗಳು ಇಂದು ಅಕ್ಷರಶಃ ನಿಜವಾಗಿ ಪರಿಗಣಿಸಿರುವುದನ್ನು ನಾವು ಕಾಣುತ್ತೇವೆ.

ಪ್ರಸ್ತುತ ಕೃತಿಯಲ್ಲಿ ಅತ್ಯಂತ ಸುದೀರ್ಘವಾದ ಲೇಖನ 'ಜಂಗಮ ಜಾತಿಯಲ್ಲಿ ಅನುಶ್ರೇಣಿ'. ಡಾ. ಚಿದಾನಂದಮೂರ್ತಿ ಅವರು ಸಮಾಜ ಸಂಸ್ಕೃತಿಗಳ ಬಗ್ಗೆ ಇರುವ ನಿಜವಾದ ಕಳಕಳಿಯನ್ನು ಇಲ್ಲಿ ತೋರಿಸಿದ್ದಾರೆ. ಸುಮಾರು 60 ಪುಟಗಳ ವ್ಯಾಪ್ತಿ ಹೊಂದಿರುವ ಈ ಲೇಖನಕ್ಕೆ ಪೂರಕವಾಗಿಯಾಗಲಿ, ಪರ್ಯಾಯವಾಗಲಿ ಮತ್ತೊಂದು ಲೇಖನ ಈ ವಿಷಯದಲ್ಲಿ ಪ್ರಕಟಗೊಂಡಿಲ್ಲವೆಂದೇ ಹೇಳಬೇಕು. ಪಂಚಾಚಾರ್ಯರು, ಉಪಾಚಾರ್ಯರು, ಪಟ್ಟದ್ದೇವರು, ಹಿರೇಮಠರು, ಗಣಾಚಾರಿ, ಮಠಪತಿ ಮೊದಲಾದವರ ವಿಶೇಷತೆಗಳು, ಅವರ ಕಾರ್ಯಗಳನ್ನು ಕುರಿತು ಸಾಮಾಜಿಕವಾಗಿ ವಿಶ್ಲೇಷಿಸುತ್ತ ಇವರೆಲ್ಲರಿಗಿಂತ ವಿರಕ್ತರು ಶ್ರೇಷ್ಠರು ಎಂಬ ನಿರ್ಣಯಕ್ಕೆ ಬರುತ್ತಾರೆ. 'ವೀರಶೈವ

ಧರ್ಮವನ್ನು ಒಂದು ದೇಶ ಎಂದು ಭಾವಿಸಿದರೆ, ಪಂಚಪೀಠಾಧ್ಯಕ್ಷರು ಅದನ್ನು ಆಳುವ ರಾಜರುಗಳಿದ್ದಂತೆ; ಅವರಿಗೆ ಸಂಸ್ಥಾನ, ಸಿಂಹಾಸನ, ಪಟ್ಟ, ಸದರು, ಪಟ್ಟದ ಆನೆ, ಕುದುರೆ, ಕಿರೀಟ ಎಲ್ಲ ಉಂಟು; ಜನರ ನೀತಿ ಅನೀತಿಗಳ ವಿಮರ್ಶೆ ಮಾಡಿ ರಕ್ಷಿಸುವ ಶಿಕ್ಷಿಸುವ ಹಕ್ಕುಗಳು ಅವರಿಗಿವೆ. ವಿರಕ್ತ ಎಲ್ಲವನ್ನೂ ತ್ಯಜಿಸಿದ ಸನ್ಯಾಸಿಯಿದ್ದಂತೆ. ಹಿಂದೂ ಸಮಾಜದಲ್ಲಿ ಎಲ್ಲವೂ ಇರುವ ರಾಜನಿಗೇ ಪ್ರಥಮ ಸ್ಥಾನವಿದ್ದರೂ, ಅಂತಹ ರಾಜನೂ ಏನೂ ಇಲ್ಲದ ಸನ್ಯಾಸಿಯ ಮುಂದೆ ಬಾಗಲೇಬೇಕು; ಸನ್ಯಾಸಿಯ ಹಿರಿಮೆಯನ್ನು ಒಪ್ಪಿಕೊಳ್ಳಲೇಬೇಕು. ಈ ದೃಷ್ಟಿಯಿಂದ ನೋಡಿದರೆ, ತಾತ್ವಿಕವಾಗಿ ಅನುಶ್ರೇಣಿಯಲ್ಲಿ ವಿರಕ್ತರು ಪೀಠಾಧ್ಯಕ್ಷರಿಗಿಂತ ಮೇಲೆ ಇರಬೇಕಾಗುತ್ತದೆ.' (ನೋಡಿ : ಲಿಂಗಾಯತ ಅಧ್ಯಯನಗಳು, ಪು. 489–490)

ಗುರು ವಿರಕ್ತರ ತಿಕ್ಕಾಟ ಒಂದು ಶತಮಾನದ ಇತಿಹಾಸ ಹೊಂದಿದೆ. ಈ ತಿಕ್ಕಾಟಕ್ಕೆ ಅವಕಾಶವಿಲ್ಲದಂತೆ ಡಾ. ಮೂರ್ತಿ ಅವರು ಒಂದು ಮಹತ್ವದ ನಿರ್ಧಾರಕ್ಕೆ ಹೀಗೆ ಬಂದಿದ್ದಾರೆ : 'ಈಗ ಇರುವಂತೆ ನೋಡಿದರೆ ಅವುಗಳಿಗೆ ಲಿಂಗವಂತ ಸಂಪ್ರದಾಯವು ಬೇರೆ ಬೇರೆ ಕರ್ತವ್ಯಗಳನ್ನು ನಿಯೋಜಿಸಿರುವುದರಿಂದ ಯಾವುದೇ ತಿಕ್ಕಾಟಕ್ಕೂ ಅವಕಾಶವಿಲ್ಲ. ಅವುಗಳಲ್ಲಿ ಒಂದು ಅನುಶ್ರೇಣಿಯನ್ನು ನಾವು ಗುರುತಿಸಲು ಭಾರತೀಯ ಸಂಸ್ಕೃತಿಯ ಪರಿಕಲ್ಪನೆಗಳೇ ಕಾರಣ. ರಾಜ, ಸನ್ಯಾಸಿ ಇಬ್ಬರೂ ದೊಡ್ಡವರು, ಉಪಯುಕ್ತರು, ತತ್ವಶಃ ಸಮಾನರು. ಆದರೆ ಅನುಶ್ರೇಣಿಯನ್ನು ಗುರುತಿಸಲೇಬೇಕಾಗಿ ಬಂದಾಗ ಭಾರತೀಯ ಸಂಸ್ಕೃತಿಯು ಸನ್ಯಾಸಿಯನ್ನು ಮೇಲೆತ್ತಿ ಹಿಡಿಯುತ್ತದೆ. ವಿರಕ್ತ ಮಠಗಳೂ ಪಂಚಪೀಠಗಳೂ ಸಮಾನ, ತಾತ್ತ್ವಿಕವಾಗಿ ಅನುಶ್ರೇಣಿಯ ಪ್ರಶ್ನೆ ಬಂದಾಗ ವಿರಕ್ತ ಪೀಠಗಳಿಗೆ ಮೊದಲ ಸ್ಥಾನ' (ಲಿಂಗಾಯತ ಅಧ್ಯಯನಗಳು, ಪು. 491)

ಜಂಗಮರ ಅನುಶ್ರೇಣಿಯು ಹಿಂದೂ ಸಮಾಜದ ಒಂದು ಛಾಯೆ. ಇಲ್ಲಿ ವಿರಕ್ತನಿಗೆ ಅಗ್ರಸ್ಥಾನ ಎಂಬ ಡಾ. ಮೂರ್ತಿ ಅವರ ಅಭಿಪ್ರಾಯ ಅಕ್ಷರಶಃ ನಿಜ. ಧಾರ್ಮಿಕ ಕರ್ತವ್ಯಗಳಲ್ಲಿ ಪಂಚಾಚಾರ್ಯರಿಗೆ ಎಷ್ಟು ಹಕ್ಕುಗಳಿವೆಯೋ ಹಾಗೆ ವಿರಕ್ತರು ಸಮಾಜದ ಸಮಸ್ತ ಆಯಾಮಗಳಲ್ಲಿ ಲೋಕಸಂಚಾರಿಯಾಗಿ ಶುದ್ಧೀಕರಣ ಮಾಡುತ್ತ, ಸುಂದರ ಸಮಾಜವನ್ನು ಕಟ್ಟುವುದೇ ಆಗಿದೆ. ಆದರೆ ಅವರಿಬ್ಬರೂ ತಮ್ಮ ತಮ್ಮ ಕರ್ತವ್ಯಗಳನ್ನು ಮರೆತು ನಾ ಮೇಲು ನೀ ಮೇಲು ಎಂದು ವಾದಿಸುತ್ತ ಕಾಲಹರಣ ಮಾಡುವುದು ವಿಷಾದನೀಯ. ಗುರು ವಿರಕ್ತರು ಒಂದಾಗಬೇಕು. ಅವರು ಈ ಧರ್ಮದ ಎರಡು ಕಣ್ಣುಗಳು ಎಂಬ ಡಾ. ಮೂರ್ತಿಯವರ ವಿಚಾರ ಅನುಷ್ಠಾನಕ್ಕೆ ಬಂದರೆ ಈ ಧರ್ಮ ಇನ್ನಷ್ಟು ವಿಸ್ತಾರ–ವಿಸ್ತಾರೋನ್ನತವಾಗಿ ಬೆಳೆಯಬಲ್ಲದು.

'ವೀರಶೈವ ಧರ್ಮದ ಬೆಳವಣಿಗೆಯ ನಾಲ್ಕು ಘಟ್ಟಗಳು' ಎಂಬ ಲೇಖನದಲ್ಲಿ ಡಾ. ಮೂರ್ತಿಯವರು ಈ ಧರ್ಮವು ಬೆಳೆದು ಬಂದ ನಾಲ್ಕು ಪ್ರಮುಖ ಘಟ್ಟಗಳನ್ನು ಗುರುತಿಸಿದ್ದಾರೆ. ಬಸವಾದಿ ಪ್ರಮಥರು ಮಾಡಿದ ವಚನ ಕ್ರಾಂತಿ ಮೊದಲ ಘಟ್ಟ,

ಏಕಾಂತ ರಾಮಯ್ಯ ಮತ್ತು ಆದಯ್ಯಗಳು ಜೈನಾಗಮ ತಿರಸ್ಕರಿಸಿ ಶಿವಾಗಮ ಪ್ರತಿಷ್ಠಾಪಿಸಿದ್ದು ಎರಡನೆಯ ಘಟ್ಟ, ಹರಿಹರ, ರಾಘವಾಂಕ, ಕೆರೆಯ ಪದ್ಮರಸರು ಹಂಪೆಯಲ್ಲಿ ಮಾಡಿದ ಸಾಹಿತ್ಯಿಕ ಕ್ರಾಂತಿ ಮೂರನೆಯ ಘಟ್ಟ ಮತ್ತು ತೋಂಟದ ಸಿದ್ಧಲಿಂಗೇಶ್ವರರ ನೇತೃತ್ವದಲ್ಲಿ ನೂರೊಂದು ವಿರಕ್ತರು ಮಾಡಿದ ಕ್ರಾಂತಿ ನಾಲ್ಕನೆಯ ಘಟ್ಟ. ಈ ನಾಲ್ಕು ಘಟ್ಟಗಳಲ್ಲಿ ವೀರಶೈವ ಧರ್ಮವು ಒಂದು ಮೂರ್ತಸ್ವರೂಪ ಪಡೆಯುತ್ತ ಬಂದಿದೆ ಎಂಬ ವಿಚಾರವನ್ನು ಡಾ. ಮೂರ್ತಿಯವರು ತಿಳಿಸುತ್ತಾರೆ.

ಇಲ್ಲಿಯ ಲೇಖನಗಳ ಕುರಿತು ಅವರು ಹೀಗೆ ಹೇಳುತ್ತಾರೆ : 'ಈ ಲೇಖನಗಳ ಬಗ್ಗೆ ನಾನು ಹೆಚ್ಚು ಹೇಳಲು ಬಯಸುವುದಿಲ್ಲ. ಅವುಗಳಲ್ಲಿ ಬಹುಪಾಲು ಲೇಖನಗಳು ಸಾಹಿತ್ಯಾಸಕ್ತರ ಗಮನವನ್ನು ಸೆಳೆದು ಚರ್ಚೆಗೆ ಅವಕಾಶ ಮಾಡಿಕೊಟ್ಟಿವೆ. ಇದು ನನಗೆ ತೃಪ್ತಿಯನ್ನು ತಂದಿರುವ ವಿಷಯ: ಯಾವನೇ ಸಂಶೋಧಕನಿಗೂ ತನ್ನ ಬರಹಗಳು ಚರ್ಚೆಗೆ ಗುರಿಯಾಗಿ ಅರಿವನ್ನು ವಿಸ್ತರಿಸಲು ಸಹಾಯಕವಾಗುವುದು ತನ್ನ ಬಗ್ಗೆ ತೋರುವ ಗೌರವ ಎಂಬ ಭಾವನೆ ಇರುತ್ತದೆ. ಎಲ್ಲ ಸಂಗತಿಗಳು ಒಪ್ಪಿತವಾದುವೇ ಇಲ್ಲವೇ ಎಂಬುದು ಮುಖ್ಯವಾದರೂ ಅದಕ್ಕೆ ಎರಡನೆಯ ಸ್ಥಾನವೇ ಹೊರತು ಪ್ರಥಮ ಸ್ಥಾನವಲ್ಲ' ಎಂದು ಅತ್ಯಂತ ವಿನಮ್ರವಾಗಿ ಹೇಳುತ್ತಾರೆ.

ಪ್ರಸ್ತುತ ಕೃತಿಯನ್ನು ತಮಗೆ ಎಂಟು ವರ್ಷಗಳ ವಿದ್ಯಾರ್ಥಿ ಜೀವದಲ್ಲಿ ಅನ್ನ ಆಶ್ರಯ ನೀಡಿ ಸಾಕಿ ಸಲುಹಿದ ಚಿತ್ರದುರ್ಗದ ಜಗದ್ಗುರು ಶ್ರೀ ಮುರುಘರಾಜೇಂದ್ರ ಮಹಾಸಂಸ್ಥಾನ ಮತ್ತು ಮೈಸೂರು ಶ್ರೀ ಸುತ್ತೂರು ಜಗದ್ಗುರು ವೀರಸಿಂಹಾಸನ ಮಹಾಸಂಸ್ಥಾನಕ್ಕೆ ಸಮರ್ಪಿಸಿದ್ದು ಅವರ ಕೃತಜ್ಞತಾ ಮನೋಭಾವಕ್ಕೆ ಹಿಡಿದ ಕನ್ನಡಿಯಾಗಿದೆ.

ಸಂಶೋಧಕರ ಬರಹಗಳು ಕಾಲಕಾಲಕ್ಕೆ ಬದಲಾಗುತ್ತ ಹೋಗುತ್ತವೆ ಎಂಬುದು ಒಂದು ಅಭಿಪ್ರಾಯ. ಆದರೆ ಡಾ. ಮೂರ್ತಿಯವರ ಇಲ್ಲಿಯ ಒಂದೆರಡು ವಿಚಾರಗಳನ್ನು ಬಿಟ್ಟರೆ ಯಾವ ಅಂಶಗಳು ಬದಲಾವಣೆಯಾಗಿಲ್ಲ ಎಂಬುದು ಅಭಿಮಾನ ಪಡುವ ಸಂಗತಿಯಾಗಿದೆ. ಅವರ ಎಲ್ಲ ಬರಹಗಳು ಸಂಸ್ಕೃತಿನಿಷ್ಠವಾಗಿವೆ. ಶರಣ ಸಂಸ್ಕೃತಿ ಸಮಾಜದ ಬಗ್ಗೆ ಅವರಿಗೆ ಖಚಿತವಾದ ದೃಷ್ಟಿಕೋನ, ನಿಶ್ಚಿತವಾದ ಪರಿಪ್ರೇಕ್ಷ್ಯಗಳಿವೆ. ಶರಣ ಸಂಸ್ಕೃತಿಯ ಘನತೆ, ಶರಣ ಧರ್ಮದ ಏಳಿಗೆ, ಶರಣ ಸಮಾಜದ ಅಭಿವೃದ್ಧಿಯ ಕಡೆ ಅವರ ಮನಸ್ಸು ಸದಾ ತುಡಿಯುತ್ತದೆ. ಆದ್ದರಿಂದಲೇ ಅವರ ಮಾತುಗಳಿಗೆ, ಬರಹಗಳಿಗೆ ಇಂದಿಗೂ ಒಂದು ಉತ್ಕೃಷ್ಟ ತೂಕವಿದೆ.

ಸುತ್ತೂರು ಜಗದ್ಗುರು ಮಹಾಸನ್ನಿಧಿಯವರು ಕೊಡಮಾಡುವ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಗೆ ಭಾಜನವಾದ ಮೊದಲ ಕೃತಿ 'ಲಿಂಗಾಯತ ಅಧ್ಯಯನಗಳು' ಡಾ. ಚಿದಾನಂದಮೂರ್ತಿಯವರ ಶ್ರೇಷ್ಠ ಗ್ರಂಥಗಳಲ್ಲಿ ಒಂದಾಗಿದೆ.

□

# ಸೂಕ್ತ ಜಾತಿಸೂಚಕ ಯಾವುದು

ಡಾ. ಬಸವರಾಜ ಎ. ಕಾಗಲಿ

**'ಜಾ**ತಿ' ಎಂಬುದು ಭಾರತದ ಪ್ರಜೆಗಳಿಗೆ – ಬೇಕು ಎನ್ನುವವರಿಗೂ ಮತ್ತು ಬೇಡ ಎನ್ನುವವರಿಗೂ ಸಹ – ಗಟ್ಟಿಯಾಗಿ ಅಂಟಿಕೊಂಡಿರುವ ಕಾಣದ ಹಣೆಪಟ್ಟಿಯಾಗಿ ಬಿಟ್ಟಿದೆ! ಆಶ್ಚರ್ಯಕರ ಸಂಗತಿ ಏನೆಂದರೆ ಹಿಂದೆ ಅದನ್ನು ಕಾಣುವಂತೆ ಮಾಡುವ ಚಿಹ್ನೆಗಳನ್ನು ಧರಿಸುವ ಕಾಲವೂ ಇತ್ತು! ಹುಟ್ಟಿನಿಂದ ಆರಂಭಗೊಂಡು, ಶಾಲಾ–ಕಾಲೇಜು ದಾಖಲಾತಿ, ಮದುವೆ, ಉದ್ಯೋಗ, ರಾಜಕೀಯ ಕ್ಷೇತ್ರಗಳಿಂದ ಹಿಡಿದು ಕೊನೆಗೆ ಸಾಯುವವರೆಗೂ, ಒಂದಲ್ಲ ಮತ್ತೊಂದು ರೀತಿಯಲ್ಲಿ ಸಮಾಜ ಅದನ್ನು ಪರಿಗಣಿಸುತ್ತ ಬಂದಿರುವುದು ಕಾಣುವುದು. ಇಂತಹ ಮಹತ್ವದ 'ಜಾತಿ' ಎಂಬ ಪದದ ಅರ್ಥವೇನು? 'ಜಾತಿ' ಎಂಬ ಹಣೆಪಟ್ಟಿ ಇಂದು ಎಷ್ಟರಮಟ್ಟಿಗೆ ಸೂಕ್ತವಾಗಿದೆ? ಇಂತಹ ಹಣೆಪಟ್ಟಿಯಿಂದ ಆಗುವ ಅನುಕೂಲ ಅಥವಾ ಅನಾನುಕೂಲಗಳು ಯಾವುವು? ಇವೇ ಮುಂತಾದ ವಿಷಯಗಳನ್ನು ಮುಂದೆ ಸಂಕ್ಷಿಪ್ತವಾಗಿ ವಿಮರ್ಶಿಸಲಾಗಿದೆ.

'ಜಾತಿ' ಎಂಬ ಪದಕ್ಕೆ ಹುಟ್ಟಿನಿಂದ ಒಂದು ವಿಶಿಷ್ಟ ರೀತಿಯಲ್ಲಿ ಇರುವ ವಸ್ತು ಎಂಬುದು ನಿಘಂಟಿನ ಅರ್ಥವಾಗಿದೆ. ಉದಾಹರಣೆಗೆ, ನಾವು ನಮ್ಮ ಸುತ್ತಮುತ್ತಲಿನ ಅನೇಕ ಪ್ರಕಾರದ ಗಿಡ–ಮರಗಳನ್ನು, ಪ್ರಾಣಿ–ಪಕ್ಷಿಗಳನ್ನು, ಕ್ರಿಮಿ–ಕೀಟಗಳನ್ನು ಕಾಣುತ್ತೇವೆ. ಅವೆಲ್ಲ ಬಗೆಬಗೆಯ ಜಾತಿಗೆ ಸೇರಿದ್ದಾವೆ ಎನ್ನಬಹುದು. ಮಾವು ಒಂದು ತರಹದ ಮರವಾದರೆ ಬೇವು ಮತ್ತೊಂದು ಬಗೆಯ ಮರ – ಹಾಗಾಗಿ ಮಾವಿನಿಂದ ಬೇವನ್ನು ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಅವುಗಳನ್ನು ಬೇರೆ ಬೇರೆ 'ಜಾತಿ'ಯ ಮರಗಳು ಎಂದು ಖಚಿತವಾಗಿ ಹೇಳಬಹುದು. ಅದೇ ರೀತಿಯಲ್ಲಿ ನಾಯಿಗಳನ್ನು ಹಾಗೂ ಬೆಕ್ಕುಗಳನ್ನು ಗಮನಿಸೋಣ. ಒಂದರಿಂದ ಮತ್ತೊಂದನ್ನು ಪಡೆಯಲು ಸಾಧ್ಯವಿಲ್ಲದ ಕಾರಣ ನಾಯಿ ಮತ್ತು ಬೆಕ್ಕುಗಳನ್ನು ಬೇರೆ ಬೇರೆ ಜಾತಿಯ ಪ್ರಾಣಿಗಳು ಎಂದು ನಾವು ಗುರುತಿಸುತ್ತೇವೆ. ಈಗ ನಾಯಿಗಳ ವಿಷಯ ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳಲ್ಲಿ ವಿವಿಧ ಬಣ್ಣಗಳ, ಆಕಾರದ ಮತ್ತು ಗಾತ್ರದ ನಾಯಿಗಳು ನಮಗೆ ಸಿಗುತ್ತವೆ. ಅವೆಲ್ಲ ಮೇಲ್ನೋಟಕ್ಕೆ ಭಿನ್ನವಾಗಿ ಕಂಡರೂ, ಎಲ್ಲವನ್ನು ನಾಯಿ ಎಂಬ 'ಮೂಲಜಾತಿ'ಗೆ ಸೇರಿಸಬಹುದು. ಹೀಗೆ ನಾಯಿ ಎಂಬ 'ಮೂಲ' ಪ್ರಾಣಿಜಾತಿಯಲ್ಲಿ ನಾವು ಇಂದು ಸಾವಿರಾರು ಬಗೆಯ ನಾಯಿಗಳ ಪ್ರಕಾರಗಳನ್ನು ಕಾಣಬಹುದು. ಸಾವಿರಾರು ವರ್ಷಗಳಿಂದ

ಸಂಕರಗೊಳ್ಳುತ್ತ ಬಂದಂತಹ 'ಮೂಲಜಾತಿ'ಯ ನಾಯಿಗಳು ಈಗ ನೂರಾರು ಪ್ರಕಾರಗಳಾಗಿ ಜೀವಿಸುತ್ತಿವೆ. ಇಂತಹ ಪ್ರಾಣಿಗಳನ್ನು ನಾಯಿಗಳ 'ಉಪಜಾತಿ'ಗಳೆಂದು ಗುರುತಿಸಬಹುದು.

ಈಗ ಮನುಷ್ಯರ ವಿಷಯಕ್ಕೆ ಬರೋಣ. ಮನುಷ್ಯರೂ ಕೂಡ ಒಂದು ತರಹದ ಉನ್ನತ ಮಟ್ಟದ ಪ್ರಾಣಿಗಳೇ ತಾನೆ? ಪ್ರಾಚೀನ ಕಾಲದಲ್ಲಿ – ಅಂದರೆ ಲಕ್ಷಾನುಗಟ್ಟಲೆ ವರ್ಷಗಳ ಹಿಂದೆ – ಪರಸ್ಪರ ಸಂಪರ್ಕವಿಲ್ಲದ ಕೆಲವು ಪ್ರದೇಶಗಳಲ್ಲಿ ಮೂಲ ಮಾನವರು ಹೇಗೋ ಹುಟ್ಟಿ ಅಭಿವೃದ್ಧಿಗೊಂಡರು ಎಂದು ನಂಬಲಾಗಿದೆ. ಅವರಲ್ಲಿ ನಾಲ್ಕೈದು ಪ್ರಕಾರದ 'ಮೂಲಜಾತಿ' ಮಾನವರು ಇದ್ದಿರಬಹುದು. ಇದು ಇನ್ನೂ ಸ್ಪಷ್ಟವಾಗಿಲ್ಲ. ಕೆಲವರ ವಾದದಂತೆ ಆಫ್ರಿಕಾಖಂಡದಲ್ಲಿ ಮೂಲ ಮಾನವರು ಕಾಣಿಸಿಕೊಂಡರು ಎಂಬುದು. ಅಲ್ಲಿಂದ ವಲಸೆ ಹೊಂದುತ್ತ ಯುರೋಪ್, ಏಷಿಯಾ ಮತ್ತು ಅಮೆರಿಕಖಂಡಕ್ಕೆ ಮಾನವರು ಹರಡಿಕೊಂಡರು ಎಂಬುದು ಮತ್ತೊಂದು ವಾದ. ಅದೇನೇ ಇದ್ದರೂ, ಸೂಕ್ಷ್ಮವಾಗಿ ಗಮನಿಸಿದರೆ ಜಗತ್ತಿನಲ್ಲಿ ಬೆರಳೆಣಿಕೆಯಷ್ಟೇ 'ಮೂಲ ಮಾನವ ಜಾತಿ'ಗಳನ್ನು ಈಗ ನಾವು ಗುರುತಿಸಬಹುದು. ಆಕಾರದಲ್ಲಿ, ಬಣ್ಣದಲ್ಲಿ, ಮೂಳೆಗಳ ರಚನೆ ಮತ್ತಿತರ ದೈಹಿಕ ಆಧಾರದ ಮೇಲೆ, ಮಾನವರನ್ನು ನಾವು ಅಂತಹ ಮೂಲ ಜಾತಿಗಳಾಗಿ ವಿಂಗಡನೆ ಮಾಡಬಹುದು. ಕಾಲಾನಂತರ 'ಮೂಲಜಾತಿ'ಗಳು ಅತಿಯಾಗಿ ಸಂಕರಗೊಂಡು ಸಾವಿರಾರು 'ಉಪಜಾತಿ'ಗಳಾಗಿ ಈಗ ಮಾರ್ಪಾಡಾಗಿರುವುದನ್ನು ನಾವು ಕಾಣಬಹುದು. ಈಗ ಯಾವುದೇ ಒಂದು ಭೂಪ್ರದೇಶದಲ್ಲಿ ನೂರಾರು 'ಉಪಜಾತಿ'ಗಳನ್ನು ಗುರುತಿಸಬಹುದು. ಈಗಿನ ಪರಿಸ್ಥಿತಿಯಲ್ಲಿ ಸ್ಪಷ್ಟವಾಗಿ ಬೇರ್ಪಡಿಸಬಹುದಾದ 'ಉಪಜಾತಿ'ಗಳನ್ನು ಗುರುತಿಸುವುದೇ ಒಂದು ಪ್ರಯಾಸದ ಕೆಲಸವಾಗಿದೆ ಎಂದೇ ಹೇಳಬಹುದು! ಬುದ್ಧಿಮತ್ತೆಯ ಹಾಗೂ ಸಾಂಸ್ಕೃತಿಕ ಭಿನ್ನತೆಗಳ ಬಗ್ಗೆ ಇಲ್ಲಿ ಹೇಳುತ್ತಿಲ್ಲ.

ಇಂದಿನ ಭಾರತ ದೇಶದ ಪರಿಸ್ಥಿತಿಯನ್ನು ನೋಡಿದಾಗ, ಇಲ್ಲಿ ಭಾರಿ ಪ್ರಮಾಣದ 'ಮೂಲ' ಮತ್ತು 'ಉಪಜಾತಿ'ಗಳ ಸಂಕರಗಳಿಂದ ಸಾವಿರಾರು ರೀತಿಯಲ್ಲಿ ಅಲ್ಪ ಸ್ವಲ್ಪ ಭಿನ್ನವಾದ ಭೌತಿಕ ಲಕ್ಷಣಗಳನ್ನು ಹೊಂದಿದ ಜನರನ್ನು ಎಲ್ಲ ಪ್ರದೇಶಗಳಲ್ಲೂ ನಾವು ಕಾಣಬಹುದು. ಪ್ರತಿಯೊಂದು ಜನಾಂಗದಲ್ಲಿಯೂ ವಿಭಿನ್ನ ಉಪಜಾತಿಗಳು ಇರುವುದನ್ನು ನಾವು ಕಾಣಬಹುದು. ಆದರೂ ನಮ್ಮ ದೇಶದಲ್ಲಿ 'ಜಾತಿ'ಸೂಚಕ ಪದ ಬಳಕೆಯಲ್ಲಿ ಬಂದುಬಿಟ್ಟಿದೆ! ಅದು ಹೇಗಾಯಿತು? ಭಾರತದಲ್ಲಿ 'ಜಾತಿ' ಪದದ ನಿಜವಾದ ಅರ್ಥವೇನು? ಅಂತಹ ಹಣೆಪಟ್ಟಿ ಅರ್ಥಪೂರ್ಣವಾಗಿದೆಯೇ? ಅನುಕೂಲ ವಾಗಿದೆಯೇ? ಎಂಬುದನ್ನು ಈಗ ನೋಡೋಣ.

ನಮ್ಮ ದೇಶದಲ್ಲಿ ಪ್ರಚಲಿತವಿರುವ ಜಾತಿಸೂಚಕ ಶಬ್ದ ಉದ್ಯೋಗಸೂಚಕವಾಗಿ ವೈದಿಕ ಕಾಲದ ನಂತರ (ಸುಮಾರು ಮೂರರಿಂದ ನಾಲ್ಕು ಸಾವಿರ ವರ್ಷಗಳ

ಹಿಂದಿನಿಂದ) ಜಾರಿಯಲ್ಲಿ ಬಂತು ಎಂಬುದು ಸಾಮಾನ್ಯವಾಗಿ ಎಲ್ಲರೂ ಒಪ್ಪುವಂತಹದು. ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಒಬ್ಬನನ್ನು 'ಕುಂಬಾರ ಜಾತಿ'ಯವನು ಎಂದು ಕರೆಯಲು, ಅವನು ಮಣ್ಣಿನಿಂದ ಮಡಕೆ ಇತ್ಯಾದಿಗಳನ್ನು ಮಾಡುವ ಕಸುಬನ್ನು ಮಾಡುವ ಮನೆತನದಲ್ಲಿ ಬಂದವನು ಎಂದು ಹೇಳುತ್ತಿದ್ದರು. ಹಿಂದೆ ವೃತ್ತಿಗಳನ್ನು ಅಥವಾ ಕಸುಬುಗಳನ್ನು ವಂಶಪರಂಪರೆಯಾಗಿ ಮಾಡುವ ಕಾಲ ಇತ್ತು. ಅದು ಅವರಿಗೆ ಅನುಕೂಲವೂ ಆಗಿತ್ತು. ಚಿಕ್ಕ ಊರುಗಳಲ್ಲಿ ವಾಸವಾಗಿದ್ದ ಒಂದೇ ಕಸುಬಿನವರ ನಡುವೆ ಸಂಬಂಧಗಳು ಬೆಳೆಯುತ್ತಿದ್ದರಿಂದ ಹೆಚ್ಚಿನ ಅನುಕೂಲಗಳು ಆಗುತ್ತಿದ್ದವು. ಆದರೆ ಕಾಲ ಬದಲಾದಂತೆ, ಜನಸಂಖ್ಯೆ ಹೆಚ್ಚಿದಂತೆ, ಚಲನೆ ಹೆಚ್ಚಿದಂತೆ, ವಿದೇಶಿಯರ ಪ್ರಭಾವ ಹೆಚ್ಚಿದಂತೆ ವಂಶಪಾರಂಪರಿಕ ವೃತ್ತಿ ಆಚರಣೆ ಬಹುತೇಕ ನಿಂತುಹೋಯಿತು. ಇಂತಹ ಬದಲಾವಣೆಗಳು ನಮ್ಮ ದೇಶಕ್ಕೆ ಮುಸಲ್ಮಾನರ ಆಗಮನದಿಂದ ಆಗಿರಬಹುದೆಂಬುದು ಒಂದು ಊಹೆ. ಒಬ್ಬ ಕುಂಬಾರನ ಮಗ ಬೆಳೆದು ಬೇರೆ ಉದ್ಯೋಗ ಮಾಡುವಂತಾಯಿತು. ಉದಾಹರಣೆಗೆ, ಅವನು ಸೈನ್ಯಕ್ಕೆ ಸೇರಿರಬಹುದು, ವ್ಯಾಪಾರ ಮಾಡುತ್ತ ಬೇರೆ ಪ್ರದೇಶಗಳಿಗೆ ಹೋಗಿ ನೆಲೆಸಿರಬಹುದು, ಜಮೀನು ಖರೀದಿಸಿ ವ್ಯವಸಾಯ ಮಾಡುತ್ತ ಇದ್ದಿರಬಹುದು. ಕುಂಬಾರಿಕೆ ವೃತ್ತಿ ಬಿಟ್ಟವನ ಮಗನ 'ಜಾತಿ' ಯಾವುದೆಂದು ಹೇಳಬೇಕು? 'ಕುಂಬಾರ' ಎಂದು ಹೇಳುವುದು ಸೂಕ್ತವೆ? ಹೀಗೆ ಮುಂದುವರೆದು ಅವನ ಮುಂದಿನ ಪೀಳಿಗೆಯವರ 'ಜಾತಿ' ಏನಾಗಬಹುದು? ಇಂತಹ ಪ್ರಶ್ನೆಗಳಿಗೆ ನಮ್ಮ ಸಮಾಜದ ಉತ್ತರವೇನು? ಜಾತಿ ಗಣನೆ ಯಾವ ಪೀಳಿಗೆಯಿಂದ ಆರಂಭವಾಯಿತು? ನಮ್ಮ ಸಮಾಜ ಸುಲಭವಾಗಿ ಅವರೆಲ್ಲರನ್ನೂ 'ಕುಂಬಾರ ಜಾತಿ'ಯವರೇ ಎಂದು ಹೇಳುತ್ತ ಬಂದಿದೆ! ಇಂತಹ ತಪ್ಪುಗ್ರಹಿಕೆ ಮುಂದುವರೆಯುತ್ತಾ ಇರುವುದರಿಂದ ಮೂಲ ಕುಂಬಾರನ ಮಕ್ಕಳು ಮತ್ತು ಮೊಮ್ಮಕ್ಕಳು ತಮ್ಮ ಭವಿಷ್ಯದಲ್ಲಿ ತಪ್ಪಾಗಿ ಕುಂಬಾರ ಎಂಬ ಹಣೆಪಟ್ಟಿಯನ್ನು ಹೊರುತ್ತ ಸಾಗುವಂತಾಯಿತು. ಪರಿಣಾಮವಾಗಿ, ಒಂದೇ ಉದ್ಯೋಗ ಮಾಡುವವರಲ್ಲಿ ಗುಂಪುಗಾರಿಕೆ ಹೆಚ್ಚಾಗುತ್ತಾ ಹೋಯಿತು. ಅದರಿಂದ ಸಮಾಜದಲ್ಲಿ ಒಗ್ಗಟ್ಟು ಕಡಿಮೆಯಾಗಿ, ಅರ್ಹರಿಗೆ ಅವಕಾಶಗಳು ಕುಂಟಿತವಾದವು. ಸಮಾಜವು ಉದ್ಯೋಗದಿಂದ 'ಉಪಜಾತಿ'ಗಳನ್ನು ಸೃಷ್ಟಿಮಾಡುತ್ತಾ ಹೋಯಿತು. ವೃತ್ತಿಗಳಲ್ಲಿ ಮೇಲು ಕೀಳು ಎಂಬ ಭಾವನೆಗಳು ಬೆಳೆದು ಶೈಕ್ಷಣಿಕ ಮಟ್ಟದಲ್ಲಿ ಏರು–ಪೇರುಗಳಾಗುತ್ತಾ ಹೋದವು. ಈಗಿನ ಸಮಾಜದಲ್ಲಿ ಹಿಂದಿನ ಜಾತಿಸೂಚಕವನ್ನು 'ಸುಲಭದ ಕೆಲಸ' (ಓದು–ಬರಹ ಆಧಾರವುಳ್ಳ ಕೆಲಸ) ಮಾಡುವ ಕೆಲವರು ಲಾಭಕ್ಕಾಗಿ ಒಪ್ಪಿಕೊಂಡು ಬೆಂಬಲಿಸಿದರೆ, 'ದೈಹಿಕ ಕೆಲಸ' ಮಾಡುವ ಬಹುತೇಕರು ಶಿಕ್ಷಣದಿಂದ ವಂಚಿತರಾಗಿ ಅನ್ಯಾಯವನ್ನು ಎದುರಿಸುವಂತಾಯಿತು. ಇಂತಹ ಜಾತಿಸೂಚಕ ಹಣೆಪಟ್ಟಿ ಅರ್ಥಹೀನ ಮತ್ತು ಭೇದಕಾರಕ ಎಂದು ಎಲ್ಲರೂ ಒಪ್ಪಿದರೂ ವ್ಯವಸ್ಥೆಯ ಬದಲಾವಣೆಗೆ ಯಾರೂ ದಿಟ್ಟ ನಿಲುವನ್ನು

ತಾಳುತ್ತಿಲ್ಲ. ಆಗಿಂದಾಗ್ಗೆ ಪ್ರತಿಭಟನೆಗಳು, ಹೋರಾಟಗಳು ನಡೆದರೂ ಆಮೂಲಾಗ್ರ ಬದಲಾವಣೆಗೆ ಅವಕಾಶ ಸಿಗಲಿಲ್ಲ.

ಆದ್ದರಿಂದ ಸಮಾಜದ ಹಿತದೃಷ್ಟಿಯಿಂದ ಈಗ ನಾವೇನು ಮಾಡಬೇಕು? ಸರ್ಕಾರ ಏನು ಮಾಡಬೇಕು? ಸುಲಭವಾದ, ಸರಳವಾದ ಮತ್ತು ಯಾವುದೇ ಬಂಡವಾಳವಿಲ್ಲದ ಉತ್ತರ : ಅರ್ಥಹೀನ ಹಣೆಪಟ್ಟಿಯಾದ 'ಜಾತಿಸೂಚಕ'ವನ್ನು ಎಲ್ಲ ಅಧಿಕೃತ ದಾಖಲಾತಿಗಳಿಂದ ತೆಗೆದುಹಾಕುವುದು ಅಥವಾ ಇನ್ನು ಮುಂದೆ ಬರೆಸದಿರುವುದು. ನಿವೃತ್ತಿ ಹೊಂದಿದ ಜನರನ್ನು ಈ ವ್ಯಾಪ್ತಿಯಿಂದ ಹೊರಗಿಡಬಹುದು. ಅಂದರೆ ವ್ಯಕ್ತಿಯ 'ಜಾತಿ' ಎಂಬ ಕಾಲಂನಲ್ಲಿ ತಂದೆ ಅಥವಾ ಪೋಷಕರ ಉದ್ಯೋಗ ಅಥವಾ ಕಸುಬನ್ನು ಮಾತ್ರ ನಮೂದಿಸುವುದು. ಜೊತೆಗೆ ವಾರ್ಷಿಕ ಆದಾಯ ಮತ್ತು ಅವರ ವಿದ್ಯಾರ್ಹತೆಗಳನ್ನು ಕಸುಬಿನ ಜೊತೆಗೆ ನಮೂದಿಸುವುದರಿಂದ, ಸರ್ಕಾರ ಮತ್ತು ಸಮಾಜ ನಿಜವಾಗಿಯೂ ಹಿಂದುಳಿದ ಜನರಿಗೆ ಸೂಕ್ತ ಸಹಾಯ ನೀಡಲು ಅನುಕೂಲ ವಾಗುವುದು. ಇಂತಹ ಸುಲಭವಾದ ಕಾನೂನಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸಿದರೆ ಕೆಲವೇ ದಶಕಗಳಲ್ಲಿ ಗಣನೀಯ ಬದಲಾವಣೆ ತರಬಹುದೆಂಬುದು ನನ್ನ ನಂಬಿಕೆ! ಖಂಡಿತವಾಗಿಯೂ ಈ ಬದಲಾವಣೆಯನ್ನು ಯಾರೂ ವಿರೋಧಿಸಲಾರರು.

ಅಲ್ಲದೆ, ಅರ್ಥಹೀನ 'ಜಾತಿಸೂಚಕ'ವನ್ನು ವ್ಯಕ್ತಿಗಳ ದಾಖಲೆಗಳಿಂದ ತೆಗೆದುಹಾಕಿ, ಮುಂದೆ ಬರುವ ಪೀಳಿಗೆಗೆ ಕೇವಲ ತಂದೆ, ತಾಯಿ ಅಥವಾ ಪೋಷಕರ ಉದ್ಯೋಗ, ಆದಾಯ, ಶಿಕ್ಷಣ, ವಾಸವಿರುವ ಸ್ಥಳ ಇತ್ಯಾದಿಗಳನ್ನು ಮಾತ್ರ ಕಡ್ಡಾಯಗೊಳಿಸುವುದರಿಂದ ಅನರ್ಹ ವ್ಯಕ್ತಿಗಳು 'ಹಿಂದುಳಿದ ಜಾತಿ' ಹೆಸರಿನಲ್ಲಿ ವಂಚನೆಯಿಂದ ಮೀಸಲಾತಿ ಪಡೆಯುವುದನ್ನು ಕೂಡ ತಡೆಯಬಹುದಲ್ಲದೆ, ಸಮಾಜದಲ್ಲಿ ಐಕ್ಯತೆ ಮತ್ತು ಚಲನಶೀಲತೆ ಮೂಡಲು ಸಹಾಯವಾಗಬಹುದು. ನಮ್ಮ ಪ್ರದೇಶದಲ್ಲಿ ಈ ಹಿಂದೆ ಬಸವಾದಿ ಶರಣರು ಮತ್ತು ದಾಸರು ಮೇಲೆ ಹೇಳಿದ ಅರ್ಥಹೀನ ಜಾತಿಸೂಚಕದ ವಿರುದ್ಧ ತಮ್ಮದೇ ರೀತಿಯಲ್ಲಿ ಹೋರಾಡಿ ಸಮಾಜದ ನೈತಿಕ ಮಟ್ಟವನ್ನು ಮೇಲೇರಿಸುವ ಕೆಲಸ ಮಾಡಿದರು – ಆದರೆ ರಾಜಾಶ್ರಯ ಇಲ್ಲದಿದ್ದ ಕಾರಣ ಕಾನೂನಾತ್ಮಕ ಬದಲಾವಣೆ ತರಲು ಸಾಧ್ಯವಾಗಲಿಲ್ಲ. ಪ್ರಜಾಪ್ರಭುತ್ವದ ಇಂದಿನ ಕಾಲದಲ್ಲಿ ನಮ್ಮ ಶಾಸಕರು, ಸಮಾಜದ ಮುಖಂಡರು, ನ್ಯಾಯವಾದಿಗಳು ಹಾಗೂ ಜನಸಾಮಾನ್ಯರು ಒಟ್ಟುಗೂಡಿ ಕೂಡಲೆ ಕಾರ್ಯಪ್ರವೃತ್ತರಾದರೆ ಈ ನಿಟ್ಟಿನಲ್ಲಿ ಗಣನೀಯ ಸುಧಾರಣೆ ತರಬಹುದು. ಈ ಬಗ್ಗೆ ಗಂಭೀರ ಚರ್ಚೆಗಳು ಅಗತ್ಯವಾಗಿ ನಡೆಯಬೇಕಿವೆ. 'ಜಾತಿಸೂಚಕ'ಕ್ಕೆ ಅರ್ಥಪೂರ್ಣ ವ್ಯಾಖ್ಯೆಯನ್ನು ನೀಡಬೇಕಿದೆ. ಅವಶ್ಯವಿದ್ದರೆ ನ್ಯಾಯಾಲಯದ ಮೆಟ್ಟಿಲನ್ನೂ ಏರಬೇಕಾಗಬಹುದು!

□

# ಶರಣ ಮಾದಾರ ಧೂಳಯ್ಯನವರ ವೈಚಾರಿಕತೆ

ನಗರ್ಲೆ ಶಿವಕುಮಾರ

ಸತ್ಯಶುದ್ಧ ಕಾಯಕವ ಮಾಡಿ ತಂದು
ವಂಚನೆಯಿಲ್ಲದೆ ಪ್ರಪಂಚಳಿದು
ನಿಚ್ಚ ಜಂಗಮಕ್ಕೆ ದಾಸೋಹವ ಮಾಡುವ
ಸದ್ಭಕ್ತನ ಹೃದಯದೊಳಗೆ ಅಜ್ಯೋತಿದಂತಿಪ್ಪ
ಕಾಮಧೂಮ ಧೂಳೇಶ್ವರ

**ಭಾ**ರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಿಧ ಶ್ರೇಣಿಗಳಿಂದ ಕೂಡಿದ ಜಾತಿ ವ್ಯವಸ್ಥೆಯು ಅಸ್ತಿತ್ವದಲ್ಲಿತ್ತು. ಮೇಲು ಮತ್ತು ಕೀಳುಜಾತಿಗಳಿಗೆ ಅವರವರ ಸ್ಥಾನಮಾನಗಳಿಗೆ ತಕ್ಕಂತೆ ವೃತ್ತಿ ಅಥವಾ ಕಸಬುಗಳು ಮೀಸಲಾಗಿರುತ್ತಿತ್ತು. ಬ್ರಾಹ್ಮಣರು ವೇದಾಧ್ಯಯನ, ಬೋಧನೆ ಮತ್ತು ಪೌರೋಹಿತ್ಯ ಕಾರ್ಯಗಳನ್ನು ಮಾಡುತ್ತಿದ್ದರು. ಹಾಗೆಯೇ ಕ್ಷತ್ರಿಯರು ರಾಜ್ಯಾಡಳಿತ ಮತ್ತು ದೇಶ ರಕ್ಷಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಮೂರನೆಯ ವರ್ಣದವರಾದ ವೈಶ್ಯರು ಕೃಷಿ, ಪಶುಪಾಲನೆ ಮತ್ತು ವ್ಯಾಪಾರಗಳನ್ನು ನಡೆಸುತ್ತಿದ್ದರು. ಉಳಿದಂತೆ ಶೂದ್ರರು ಮೇಲಿನ ಮೂರು ವರ್ಣದವರ ಸೇವೆಯನ್ನು ಮಾಡಿಕೊಂಡು ಹೋಗುತ್ತಿದ್ದರು. ಕಸಗುಡಿಸುವುದು, ಮೇಲುವರ್ಗದವರ ಬಟ್ಟೆಗಳನ್ನು ಶುಚಿ ಮಾಡುವವರು ಮಡಿವಾಳರು, ಹಡಪದ ಕಾಯಕ ಮಾಡುವ ಕ್ಷೌರಿಕರು, ದನಕಾಯುವ ತುರುಗಾಹಿಗಳು, ಚರ್ಮ ಹದಮಾಡುವ ಡೋಹರರು, ಚರ್ಮದ ವಸ್ತುಗಳನ್ನು ತಯಾರಿಸುವ ಸಮಗಾರರು, ಮಾದಿಗರು – ಹೀಗೆ ವಿವಿಧ ಕಾಯಕಜೀವಿಗಳನ್ನು ಅಂದಿನಿಂದಲೂ ಕಾಣುತ್ತಾ ಬಂದಿದ್ದೇವೆ.

ಶತಶತಮಾನಗಳಿಂದ ಬೇರುಬಿಟ್ಟಿದ್ದ ಭೇದಭಾವವನ್ನು ತೊಡೆದುಹಾಕಿ, ಸಾಮಾಜಿಕ ಮೌಲ್ಯವನ್ನು ಹುಟ್ಟುಹಾಕಿದವರು ಹನ್ನೆರಡನೆಯ ಶತಮಾನದ ಬಸವಾದಿ ಶರಣರು. ಬಸವಣ್ಣನವರ ಕಾಲದಲ್ಲಿ ಕಾಯಕವೇ ಕಲೆಯಾಯಿತು. ಕನ್ನಡ ನಾಡಿನಲ್ಲಿ ಸಮಾನತೆಯ ಪರಿಕಲ್ಪನೆಯನ್ನು ಪ್ರಪ್ರಥಮ ಬಾರಿಗೆ ಹುಟ್ಟುಹಾಕಿದ ಕೀರ್ತಿ, ವಚನಕಾರರಾದ ಶಿವಶರಣರಿಗೆ ಸಲ್ಲುತ್ತದೆ. 'ಕಾಯಕ'ದ ಚಿಂತನೆ ಬಸವಾದಿ ಶರಣರ ಬಹು ದೊಡ್ಡ ಪರಿಕಲ್ಪನೆಯಾಗಿತ್ತು. ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ,

ನುಲಿಯ ಚಂದಯ್ಯ, ಮೇದರ ಕೇತಯ್ಯ, ಮಾದಾರ ಧೂಳಯ್ಯ, ಆಯ್ದಕ್ಕಿ ಮಾರಯ್ಯ, ಹೆಂಡದ ಮಾರಯ್ಯ, ಸೂಳೆ ಸಂಕವ್ವೆ, ಕದಿರು ಕಾಯಕದ ರೆಮ್ಮವ್ವೆ ಹೀಗೆ ಹಲವಾರು ಶರಣರ ಹೆಸರುಗಳಲ್ಲಿಯೇ ವ್ಯಕ್ತಿ–ಜಾತಿಗಳ ಸಂಬಂಧವಿರುವುದನ್ನು ಕಾಣುತ್ತೇವೆ. ಇಂತಹ ಮಹಾನ್ ಶರಣರೆಲ್ಲ ಕಾಯಕದಲ್ಲೇ ಕೈಲಾಸವನ್ನು ಕಂಡರು.

**ಪೀಠಿಕೆ :** ಮಾದಾರ ಧೂಳಯ್ಯನವರು ಪಾದರಕ್ಷೆ ಸಿದ್ಧಪಡಿಸುವ ಕಾಯಕವನ್ನು ಕೈಗೊಂಡಿದ್ದರು. ಇವರ ತಂದೆ ತಾಯಿ ಕಕ್ಕಯ್ಯ ಮತ್ತು ನುಲಿದೇವಿ, ಧರ್ಮಪತ್ನಿ ದಾರುಕಿ. ವಾಸಸ್ಥಳ ಕಲ್ಯಾಣ ಊರಾಗಿತ್ತು. ಬದುಕಿದ್ದ ಕಾಲ 1160. ಕಾಮಧೂಮ ಧೂಳೇಶ್ವರ ಅಂಕಿತದಲ್ಲಿ 106 ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳಲ್ಲಿ ಕಾಯಕದ ಮಹತ್ವ, ಜ್ಞಾನ ಮೋಕ್ಷಗಳ ಸ್ವರೂಪ, ಭಕ್ತಿಯ ಶ್ರೇಷ್ಠತೆಯನ್ನು ಕಾಣುತ್ತೇವೆ. ವೃತ್ತಿ ಪರಿಭಾಷೆ, ಬೆಡಗಿನ ಭಾಷೆ, ಅಲಂಕಾರಿಕ ಶೈಲಿ ಇವುಗಳ ವಿಶೇಷತೆಯನ್ನು ಒಳಗೊಂಡಿದೆ. ಉಚ್ಚಕುಲದವರೊಬ್ಬರ ಕುಷ್ಠರೋಗ ನಿವಾರಿಸಿದ ಸಂಗತಿ ಇವರ ಚರಿತ್ರೆಯಿಂದ ತಿಳಿದುಬರುತ್ತದೆ. ಕಾಯಕದಲ್ಲಿಯೇ ಶಿವನನ್ನು ಸಾಕ್ಷಾತ್ಕರಿಸಿಕೊಂಡ ನಿಷ್ಠಾವಂತ ಭಕ್ತನೆನಿಸಿಕೊಂಡಿದ್ದರು. ಇವರು ಸಂಸ್ಕೃತವನ್ನು ಆಧಾರವಾಗಿ ಕೊಟ್ಟು ತಮ್ಮ ಚಿಂತನೆಗಳನ್ನು ವಿವರಿಸಬಲ್ಲವರಾಗಿದ್ದರು. ಅರಿವು–ಮರವೆಯ ಬಗೆಗಿನ ಇವರ ಆಲೋಚನೆಗಳು ಚಿಂತನಾರ್ಹವಾಗಿವೆ. ಕಾಯಕದ ಮಹತ್ವವನ್ನು ಹೇಳುತ್ತಲೇ ಅದನ್ನು ಬೇರೊಂದು ಅರ್ಥವಲಯಕ್ಕೆ ತೆಕ್ಕೆ ಹಾಕುವ ಗುಣವಿಶೇಷ ಇವರಲ್ಲಿ ಕಂಡುಬರುತ್ತದೆ.

**ಕಾಯಕನಿಷ್ಠೆ :** ಮಾದಾರ ಧೂಳಯ್ಯನವರ ಕಾಯಕನಿಷ್ಠೆಯ ಪರಿಚಯಕ್ಕೆ ಅವರದೇ ಒಂದು ಸಾಕ್ಷಿ ವಚನ ಇಂತಿದೆ.

ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ
ಪ್ರತ್ಯಕ್ಷನಾದ ಪರಮೇಶ್ವರನ ಕಂಡು
ಇತ್ತಲೇಕಯ್ಯಾ ಕಾಯದ ತಿತ್ತಿಯ ಹೊತ್ತಾಡುವನ ಮುಂದೆ?
ನಿನ್ನ ಭಕ್ತರ ತಾವಿನಲ್ಲಿ ಹೋಗಿ ಮುಕ್ತಿಯ ಮಾಡು.
ನೀ ಹೊತ್ತ ಬಹುರೂಪದಿ ತಪ್ಪದೆ ರಜತಬೆಟ್ಟದ ಮೇಲಕ್ಕೆ
ಹೋಗು, ನಿನ್ನ ಭಕ್ತರ ಮುಕ್ತಿಯ ಮಾಡು.
ಕಾಮಧೂಮ ಧೂಳೇಶ್ವರನ ಕರುಣದಿಂದ ನೀನೇ ಬದುಕು!

ಧೂಳಯ್ಯನವರು ತಮ್ಮ ಕಾಯಕದಲ್ಲಿ ತೊಡಗಿದ್ದಾರೆ. ಅವರ ಏಕಾಗ್ರತೆಯನ್ನು ಗಮನಿಸಿ, ಅವರಿಗೆ ದರ್ಶನ ನೀಡಿ, ಮುಕ್ತಿ ಪದವಿ ಕರುಣಿಸಬೇಕೆಂದು ಈಶ್ವರನಿಗೇ ಪ್ರೇರಣೆಯಾಗುತ್ತದೆ. ಕಾಯಕನಿರತ ಧೂಳಯ್ಯನವರ ಬಳಿಗೆ ತಾನೇ ಬಂದು ನಿಲ್ಲುತ್ತಾನೆ.

ಪಾದರಕ್ಷೆಗಾಗಿ ಚರ್ಮವನ್ನು ಕತ್ತರಿಸುತ್ತಿದ್ದ ಧೂಳಯ್ಯನವರು ತನ್ನ ಕತ್ತೆತ್ತಿಯೂ ನೋಡಲಿಲ್ಲ. ಈಶ್ವರ ಕಾದು ನೋಡಿದ. ಆದರೂ ಧೂಳಯ್ಯ ಅತ್ತ ಗಮನಹರಿಸಲೇ ಇಲ್ಲ. ತನ್ನಷ್ಟಕ್ಕೆ ತಾನು ತನ್ನ ಕೆಲಸದಲ್ಲಿ ನಿರತರಾಗಿದ್ದರು. ಉಳಿಯ ಮೊನೆಯಲ್ಲೇ

ಗಮನವಿಟ್ಟಿದ್ದ ಧೂಳಯ್ಯನವರು ಹಾಗೆ ಪ್ರತ್ಯಕ್ಷನಾದ ಈಶ್ವರನನ್ನು ಕಂಡು, ಇತ್ತಲೇಕಯ್ಯ ಬಂದೆ? ನನ್ನ ಕಾಯಕಕ್ಕೆ ತೊಂದರೆಯಾಯಿತು. ಇದು ನಿನಗೆ ಒಳ್ಳೆಯದಲ್ಲ ಎಂದಾಗ, ಈಶ್ವರನು ನಿನ್ನ ಕಾಯಕನಿಷ್ಠೆ ಮತ್ತು ಶ್ರದ್ಧೆಗಳನ್ನು ಕಂಡು ಸುಮ್ಮನಿರಲು ನನಗೆ ಮನಸ್ಸಾಗಲಿಲ್ಲ. ನಿನಗೆ ದರ್ಶನ ನೀಡಿ ಮುಕ್ತಿ ಕರುಣಿಸಬೇಕೆನಿಸಿತು ಅದಕ್ಕಾಗಿ ಬಂದೆ. ಅದಕ್ಕೆ ಧೂಳಯ್ಯನವರು 'ನಾನು ಹೊಟ್ಟೆಯನ್ನು ತುಂಬಿಸಲು ಪಾದರಕ್ಷೆ ಹೊಲಿಯುತ್ತಿದ್ದೇನೆ. ಯಾರಿಗಾದರೂ ಮುಕ್ತಿಯ ಮಾಡಬೇಕೆಂದಿದ್ದರೆ ನಿನ್ನ ಭಕ್ತರಲ್ಲಿಗೆ ಹೋಗು. ಮುಕ್ತಿಗಾಗಿ ಹಂಬಲಿಸಿ ಬೆಟ್ಟಗುಡ್ಡಗಳಲ್ಲಿ ಜಪ-ತಪ ಮಾಡುವವರಿದ್ದಾರೆ. ಅವರಲ್ಲಿಗೆ ಹೋಗಿ ಅವರನ್ನು ಮುಕ್ತಿಗೊಳಿಸು ಎನ್ನುತ್ತ ಈಶ್ವರ ನೀನು ಇಲ್ಲಿಂದ ಹೋಗು. ಕಾಮಧೂಮ ಧೂಳೇಶ್ವರನ ಕರುಣದಿಂದ ನೀನೆ ಬದುಕು ಎಂದು ಧೂಳಯ್ಯನವರು ಹೇಳುತ್ತಾರೆ. ಮರುಮಾತಾಡದೆ ಅಲ್ಲಿಂದ ಈಶ್ವರ ನಿರ್ಗಮಿಸುತ್ತಾನೆ. ಕಾಯವಿಡಿದು ಬಂದ ಜೀವಿಗೆ ಶ್ರದ್ಧೆಯಿದ್ದರೆ ಕಾಯಕದಲ್ಲೇ ಶಿವದರ್ಶನವಾಗುತ್ತದೆ ಎಂಬುದು ಈ ವಚನದಿಂದ ತಿಳಿಯುತ್ತದೆ.

**ಕಾಮಧೂಮ :** ಏಳುನೂರಾ ಎಪ್ಪತ್ತು ಅಮರಗಣಂಗಳಲ್ಲಿಯೇ ಮಾದಾರ ಧೂಳಯ್ಯನವರಂತೆ ವಿಚಾರವಾದವನ್ನೇ ಅಂಕಿತವಾಗಿಟ್ಟುಕೊಂಡ ಶರಣ ಮತ್ತೊಬ್ಬರು ಸಿಗುವುದಿಲ್ಲವೆನಿಸುತ್ತದೆ. 'ಕಾಮಧೂಮ ಧೂಳೇಶ್ವರ' ವಚನದ ಅಂಕಿತ ಅರ್ಥವನ್ನು ತಮ್ಮ ವಚನದ ಮೂಲಕ ಧೂಳಯ್ಯನವರೇ ವಿವರಿಸಿದ್ದಾರೆ.

ಕಾಮವೆಂದರೆ ಕುರಿತು ಕಾಂಬುದೊಂದು
ಧೂಮವೆಂದರೆ ಅದರಲ್ಲಿ ಉದಿಸಿ ತೋರುವ ತಮ
ಇಂತೀ ಕಾಮಧೂಮವೆಂಬೆರಡೂ ಪುಡಿಗುಟ್ಟಿ
ಧೂಳಿ ಧೂಳೇಶ್ವರನಾದೆ ಎಲೆ ಕಾಮಧೂಮ ಧೂಳೇಶ್ವರಾ!

ಭಾರತದ ಯಾವ ಕಡೆಯೂ ಧೂಳೇಶ್ವರ ಎಂಬ ಲಿಂಗ ಕಂಡುಬರುವುದಿಲ್ಲ ಎನ್ನುತ್ತಾರೆ. ಸದ್ವಿಚಾರಗಳಿಂದ ಮೂಡಿ ಎದೆಯಲ್ಲಿ ನೆಲೆಗೊಂಡವನೇ ಧೂಳೇಶ್ವರ. ಆದರೂ ಧೂಳಪ್ಪ, ಧೂಳೇಶ, ಧೂಳವ್ವ ಹೆಸರಿನ ವ್ಯಕ್ತಿಗಳು ಉತ್ತರ ಕರ್ನಾಟಕದಲ್ಲಿ ಸಿಗುತ್ತಾರೆ. ಇದಕ್ಕೆ ಮಾದಾರ ಧೂಳಯ್ಯನವರ ಹೆಸರೇ ಆದರ್ಶವಾಗಿದೆ.

ಧೂಳಯ್ಯನವರ ಪ್ರಕಾರ ಕಾಮವೆಂದರೆ ತದೇಕಚಿತ್ತದಿಂದ ನೋಡುವುದು. ಹೆಣ್ಣಾಗಲಿ, ಹೊನ್ನಾಗಲಿ, ಮಣ್ಣಾಗಲಿ ನೋಡಿದ ಬಳಿಕ ತಾನೇ ಬಯಸುವುದು. ಹೀಗೆ ಶರಣರು ಸಂಪ್ರದಾಯಕ್ಕೆ ಶರಣರಾಗದೆ ಮೂಲ ಚಿಂತಕರಾಗಿ ಹೊಸ ರೀತಿಯಲ್ಲಿ ಆಲೋಚಿಸಿದರು. ಬಯಕೆ ಕೇವಲ ಬಯಕೆಯಾಗಿ ಮೂಡುವುದಿಲ್ಲ. ಅದರ ಹಿಂದೆ ಅದನ್ನು ಪಡೆಯಬೇಕೆಂಬ ನೂರಾರು ಅಡ್ಡಮಾರ್ಗಗಳು ತೆರೆದುಕೊಳ್ಳುತ್ತವೆ. ತಮ ಬೇರೆಯಲ್ಲ, ಧೂಮ ಬೇರೆಯಲ್ಲ. ಇವೆರಡನ್ನೂ ಕುಟ್ಟಿ ಪುಡಿ ಮಾಡಿ ಉಫ್ಫೆಂದು ಊದಿದುದರಿಂದ ಧೂಳು ಧೂಳೇಶ್ವರನಾದ ಎಂಬುದನ್ನು ವಚನ ತಿಳಿಸುತ್ತದೆ.

21ನೆಯ ಶತಮಾನದವರಾದ ನಾವು ಇಂದಿನ ವಿಜ್ಞಾನ ಯುಗದಲ್ಲಿ ಮಾದಾರ ಧೂಳಯ್ಯನವರ ವಿಚಾರಧಾರೆಗೆ ಮನಸೋಲಬೇಕಾಗುತ್ತದೆ. ಅಂತಹ ಕಾವ್ಯಸತ್ವ ಈ ವಚನದಲ್ಲಿದೆ. ಇದು ಅದ್ಭುತ ತರ್ಕಕ್ಕೊಂದು ಉದಾಹರಣೆಯಾಗಿದೆ.

ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತಪ್ಪ ಘನವನರಿತಲ್ಲಿ
ಮಣಿಮಾಲೆಯ ತಿರುಹಿ ತೋಳಲಲೇತಕ್ಕೆ?
ಅತ್ಯತಿಷ್ಠದಶಾಂಗುಲ ವಸ್ತುವಿಪ್ಪ ನೆಲೆಯನರಿತ ಮತ್ತೆ
ಹತ್ತಿಹಿತು ಹಾವಸೆಯೆಂದು ಒರಸಲೇತಕ್ಕೆ?

**ಅಂಗೋದಕ ಮಹಿಮೆ :** ಮಾದಾರ ಧೂಳಯ್ಯನವರ ಬಗ್ಗೆ ಇರುವ ಅಂಗೋದಕ ಮಹಿಮೆಯ ವರ್ಣನೆ ಅನೇಕ ಕಾವ್ಯಗಳಲ್ಲಿ ನಿರೂಪಿತವಾಗಿದೆ. ಧೂಳಯ್ಯ ಮತ್ತು ಕುಟುಂಬದವರು ಸ್ನಾನ ಮಾಡಿದ ನೀರು ಚರಂಡಿಯ ಮೂಲಕ ಹರಿದು ಇವರ ಮನೆಯ ಹಿಂದೆ ಇದ್ದ ತಿಪ್ಪೆಗುಂಡಿಯೆಲ್ಲ ಕೆಸರಾಗಿತ್ತು. ಕಲ್ಯಾಣದ ಬ್ರಾಹ್ಮಣನಾದ ಕೃಷ್ಣಪೆದ್ದಿ ಆಕಳು ಧೂಳಯ್ಯನವರ ತಿಪ್ಪೆಗುಂಡಿಯಲ್ಲಿ ಹೋಗಿ ನಿಲ್ಲುತ್ತದೆ. ಕೃಷ್ಣಪೆದ್ದಿ ರಾತ್ರಿಯಾದರೂ ತಮ್ಮ ಹಸು ಬಾರದಿರುವುದನ್ನು ನೋಡಿ, ಕೊನೆಗೆ ಹುಡುಕಿಕೊಂಡು ಹೊರಗೇರಿಗೆ ಬಂದನು. ಆಕಳೇನೋ ಕಾಣಿಸಿತು. ಆದರದು ಕೆಸರಿನಲ್ಲಿ ನಿಂತಿದ್ದರಿಂದ ಕೂಗಿ ಕರೆದರೂ ಹೊರಗೆ ಬರಲಿಲ್ಲ. ಕತ್ತಲೆಯಲ್ಲಿ ತನ್ನನ್ನು ಇನ್ನಾರು ನೋಡುವರೆಂದು ಭಾವಿಸಿದ ಕೃಷ್ಣಪೆದ್ದಿ ಕೆಸರಿನಲ್ಲಿ ಕಾಲಿಟ್ಟುಕೊಂಡೇ ಹೋಗಿ ಆಕಳನ್ನು ಹೊಡೆದು ತಂದ. ಮನೆಗೆ ಬಂದು ಕಾಲನ್ನು ತೊಳೆದುಕೊಂಡಾಗ ಕೃಷ್ಣಪೆದ್ದಿಗೆ ಅಚ್ಚರಿವೊಂದು ಕಾದಿತ್ತು. ಶರಣ ಧೂಳಯ್ಯನವರ ಅಂಗೋದಕದ ಮಹಿಮೆಯಿಂದ ಆತನ ಕುಷ್ಟವ್ರಣಗಳೆಲ್ಲವೂ ವಾಸಿಯಾಗಿ ಕಾಲುಗಳೆರಡೂ ಹೊಳೆಯುತ್ತಿದ್ದವು. ಇದರಿಂದ ಸಂತೋಷಗೊಂಡ ಕೃಷ್ಣಪೆದ್ದಿ ಅದೇ ರಾತ್ರಿ ತಿಪ್ಪೆಗುಂಡಿಗೆ ಹೋಗಿ, ಮೈಗೆಲ್ಲಾ ಮೋರಿಯ ಕೆಸರನ್ನು ಪೂಸಿಕೊಂಡು ಹಿಂತಿರುಗಿದ. ತನಗಾದ ಅನುಭಾವವನ್ನು ಇತರ ಬ್ರಾಹ್ಮಣರಿಗೂ ತಿಳಿಸಿದನು. ತೊನ್ನು ಹಾಗೂ ಕುಷ್ಟರೋಗಪೀಡಿತರಾದ ಅನೇಕರು ತಮ್ಮ ಚರ್ಮರೋಗ ವನ್ನು ಶರಣರು ಸ್ನಾನ ಮಾಡಿದ ಬಚ್ಚಲ ನೀರಿನಿಂದ ವಾಸಿಮಾಡಿಕೊಂಡರೆಂದು ಅಂಗೋದಕದ ಮಹಿಮೆಯಿಂದ ತಿಳಿದುಬರುತ್ತದೆ.

ಅಂಗೋದಕ ಮಹಿಮೆಯನ್ನು ಅಲ್ಲಗಳೆಯಲಾಗದು, ಏಕೆಂದರೆ ಇಂದು ಎಲ್ಲಾ ಕಡೆ ಪ್ರಕೃತಿಚಿಕಿತ್ಸಾ ಕೇಂದ್ರಗಳಿದ್ದು, ಅಲ್ಲಿ 'ಮಣ್ಣಿನ ಸ್ನಾನ' (Mud Bath) ಪ್ರಾಯೋಗಿಕವಾಗಿರುವುದರಿಂದ ಮಣ್ಣಿನ ಗುಣಧರ್ಮದಿಂದ ರೋಗ ನಿವಾರಣೆಯಾಗಿದೆ ಎನ್ನಬಹುದು.

**ಸಗಣಿಯಿಂದ ಭಸ್ಮ :** ಮಾದಾರ ಧೂಳಯ್ಯನವರು ಕಲ್ಯಾಣದ ಅನುಭವ ಮಂಟಪದಲ್ಲಿ ಅಲ್ಲಮಪ್ರಭುದೇವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಚರ್ಚೆಯಲ್ಲಿ ಭಾಗವಹಿಸಿ

ವಿಚಾರಪೂರ್ಣ ವಚನಗಳನ್ನು ರಚಿಸಿದ್ದಾರೆ.

ಅಪ್ಪು ಉಳ್ಳನ್ನಕ್ಕ ತೊಪ್ಪೆ ಕಿಚ್ಚಿಗೊಳಗಪ್ಪುದೇ ?
ಅಪ್ಪುವಾರಿ, ಕಿಚ್ಚು ಮುಟ್ಟಿದ ಮತ್ತೆ
ತೊಪ್ಪೆಯೆಂಬ ನಾಮ ಎತ್ತ ಹೋಯಿತ್ತು ?
ಈ ಕಷ್ಟವ ಮುಟ್ಟಿದ ತನು, ದೃಷ್ಟವ ಕಂಡಿದ್ದ ಚಿತ್ತ
ಈ ಉಭಯದ ಗೊತ್ತ ಕಂಡು
ಈ ಗುಣ ಮುಕ್ತಿಯಹ ಭೇದವೆಂದು ಅರಿ ಮತ್ತೆ
ಕಣ್ಣ ಬಿಟ್ಟು ನೋಡಿ, ವಸ್ತುವ ಕಂಡೆಹೆನೆಂಬುದು
ಎತ್ತಣ ಸುದ್ದಿ ಹೇಳಾ, ಕಾಮಧೂಮ ಧೂಳೇಶ್ವರಾ ?

ನೀರಿನ ತೇವಾಂಶ ಇರುವವರೆಗೆ ಸಗಣಿ ಬೆಂಕಿಗೆ ಒಳಗಾಗುವುದಿಲ್ಲ. ನೀರಿನ ಅಂಶ ಆರಿದ ಬಳಿಕ ಅದು ಸಗಣಿಯೂ ಅನಿಸಿಕೊಳ್ಳುವುದಿಲ್ಲ. ಆಗಲೇ ಅದಕ್ಕೆ ಕಾಡುಕುಳ್ಳು ಎಂಬ ಹೆಸರು ಬಂದಿರುತ್ತದೆ. ಅದು ಭಸ್ಮ ಎಂಬ ಹೆಸರು ಪಡೆಯುತ್ತದೆ. ಮನುಷ್ಯ ಕರ್ಮಬಂಧನ ಕಳಚಿಕೊಂಡು ಸಜ್ಜನನಾಗುತ್ತಾನೆ. ಮನುಷ್ಯನಿಗೆ ವಿವೇಕದ ಸಂಸ್ಕಾರ ದೊರೆತಾಗ ಶರಣನಾಗಿ, ಆ ಶರಣ ಸಾಧನಾಮಾರ್ಗದಲ್ಲಿ ಮುಂದುವರೆದಾಗ ಮುಕ್ತನಾಗುತ್ತಾನೆ ಎಂಬುದನ್ನು ವಚನದ ಮೂಲಕ ಧೂಳಯ್ಯನವರು ನಿರೂಪಿಸಿದ್ದಾರೆ.

**ವೈಶಿಷ್ಟ್ಯತೆ–ಧನ್ಯತೆ :** ಬಸವಾದಿ ಶರಣರ ಸಾಲಿನಲ್ಲಿರುವ ಮಾದಾರ ಚೆನ್ನಯ್ಯನವರಲ್ಲಿ ಮುಗ್ಧತೆಯನ್ನೂ, ಹೊಲೆಯರ ಶಿವನಾಗಮಯ್ಯನವರಲ್ಲಿ ಕೀಳರಿಮೆಯನ್ನೂ, ಗಾಳದ ಕನ್ನಪ್ಪನವರಲ್ಲಿ ತಾರ್ಕಿಕತೆಯನ್ನೂ, ಡೋಹರ ಕಕ್ಕಯ್ಯನವರಲ್ಲಿ ಔದಾರ್ಯವನ್ನೂ, ನುಲಿಯ ಚೆಂದಯ್ಯನವರಲ್ಲಿ ಅಸದೃಶ ಧೈರ್ಯವನ್ನೂ, ಮಾದಾರ ಧೂಳಯ್ಯನವರಲ್ಲಿ ವೈಚಾರಿಕತೆಯನ್ನೂ ಕಾಣುತ್ತೇವೆ. ಧೂಳಯ್ಯನವರಲ್ಲಿ ಬಸವಾದಿ ಶಿವಶರಣರ ಬಗ್ಗೆ ಅಪಾರ ಭಕ್ತಿ ಗೌರವಗಳನ್ನು ಕಾಣುತ್ತಿರುವುದರಿಂದ ನಾಸ್ತಿಕನೆಂದು ಹೇಳಲಿಕ್ಕೆ ಬರುವುದಿಲ್ಲವಾದರೂ ಶಿವಧ್ಯಾನದಲ್ಲಿಯೇ ಸದಾ ನಿರತನಾಗಿದ್ದು ಬಡತನ, ದೈನ್ಯತೆಗಳನ್ನು ಆಹ್ವಾನಿಸಿದವರೂ ಅಲ್ಲ. ತಮ್ಮ ಒಂದು ವಚನದಲ್ಲಿ ಬಸವ–ಅಲ್ಲಮ–ಚೆನ್ನಬಸವಣ್ಣನವರನ್ನು ಸ್ತುತಿಸಿದ್ದಾರೆ.

ಎನ್ನ ತನುವ ನಿರ್ಮಲ ಮಾಡಿದನಯ್ಯಾ, ಬಸವಣ್ಣನು.
ಎನ್ನ ಮನವ ನಿರ್ಮಲ ಮಾಡಿದನಯ್ಯಾ, ಚೆನ್ನಬಸವಣ್ಣನು.
ಎನ್ನ ಪ್ರಾಣವ ನಿರ್ಮಲ ಮಾಡಿದನಯ್ಯಾ, ಪ್ರಭುದೇವರು.
ಇಂತೆನ್ನ ತನುಮನ ಪ್ರಾಣವ ನಿರ್ಮಲ ಮಾಡಿ,
ತಮ್ಮೊಳಿಂಬಿಟ್ಟುಕೊಂಡ ಕಾರಣ, ಕಾಮಧೂಮ ಧೂಳೇಶ್ವರಾ
ನಿಮ್ಮ ಶರಣರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

ಮಾದಾರ ಧೂಳಯ್ಯನವರು ತನ್ನ ತನು, ಮನ, ಪ್ರಾಣವ ನಿರ್ಮಲ ಮಾಡಿ

ತಮ್ಮರಿವಿಗಾಸರೆ ನೀಡಿದ ಬಸವಣ್ಣ, ಅಲ್ಲಮಪ್ರಭು ಚೆನ್ನಬಸವಣ್ಣನಂತಹ ಮಹಾಶರಣರ ಪಾದಗಳಿಗೆ ನಮೋ ನಮೋ ಎಂದಿದ್ದಾರೆ.

770 ಜನ ಅಮರಗಣಂಗಳಲ್ಲಿ ಎರಡು ನೂರಾ ಎಪ್ಪತ್ತು ಜನರಾದರೂ ಒಂದೊಂದು ಕಾಯಕ ವರ್ಗಕ್ಕೆ ಸೇರಿದವರಾಗಿರಬಹುದು. ಮಹಾನುಭವ ಬಸವಣ್ಣನವರ ಬಹುಮುಖ ಕ್ರಾಂತಿಯಲ್ಲಿ ಊರ ಹೊರಗಿನ ಜನಾಂಗದವರು, ಯಾವುದೇ ಭೇದಭಾವ ವಿಲ್ಲದೆ, ಸಹಜವಾಗಿಯೇ ಕಲ್ಯಾಣದ ಅನುಭವಮಂಟಪದಲ್ಲಿ ಭಾಗವಹಿಸಿ, ಆ ಕ್ರಾಂತಿಯ ಭಾಗವಾದರಷ್ಟೇ ಅಲ್ಲ, ಅನುಭವಮಂಟಪದ ಪರಮಗಂತವ್ಯವಾದ ಆತ್ಮೋದ್ಧಾರವನ್ನು ಸಾಧಿಸಿದರು. ಅಂತಹ ಶರಣರಲ್ಲಿ ಮಾದಾರ ಧೂಳಯ್ಯನವರು ಒಬ್ಬರಾಗಿದ್ದರು. ಅವರನ್ನು ಈ ಮೂಲಕ ನೆನೆಯುವುದು ಶರಣಪರಂಪರೆಗೆ ಗೌರವ ಸಲ್ಲಿಸಿದಂತಾಗುತ್ತದೆ. □

ಉಂಡು ಉಪವಾಸಿಯಾದನಾಗಿ,
ಬಳಸಿ ಬ್ರಹ್ಮಚಾರಿಯಾದನಾಗಿ,
ಕಂಡೂ ಕಾಣದಂತೆ ಇದ್ದನಾಗಿ.
ಅಂಗವೆಂಬ ಭಾವ, ಲಿಂಗವೆಂಬ ಕುರುಹು,
ನಿರಂಗವೆಂಬ ಅರಿವು, ತ್ರಿವಿಧದ ಕುರುಹು
ಅಲ್ಲಿಯೆ ಅಡಗಿತ್ತು. ಉರಿಯ ತುದಿಯ
ಕರ್ಪುರದಂತೆ, ಅಡಗಿದ ಭೇದವ ಸಡಗರಿಸಿದಲ್ಲಿ,
ಕಾಮಧೂಮ ಧೂಳೇಶ್ವರನೆಂಬ ಭಾವ ಕಲ್ಪಿತವಿಲ್ಲ.

**– ಮಾದಾರ ಧೂಳಯ್ಯ**

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

### ಸಾಧನೆಯಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ

ಪ್ರತಿಯೊಬ್ಬರು ಲೌಕಿಕ ಜೀವನದ ಜೊತೆಗೆ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಸೆಪ್ಟೆಂಬರ್ 3ರಂದು ಅಮೆರಿಕದ ಟೆನೆಸ್ಸಿಯ ಮೆಂಫೀಸ್‌ನಲ್ಲಿ ನಡೆದ ಸತ್ಸಂಗದಲ್ಲಿ ಮಾತನಾಡುತ್ತಾ ತಿಳಿಸಿದರು. ಬದುಕು ಕಟ್ಟಿಕೊಳ್ಳಲು ಭಾರತದ ವಿವಿಧ ಭಾಗಗಳಿಂದ ಬಂದು ಭಾರತೀಯತೆ ಇಲ್ಲಿಯೂ ಗಟ್ಟಿಗೊಳ್ಳುವಂತೆ ಮಾಡಲಾಗುತ್ತಿದೆ. ಎಲ್ಲರ ಪರಿಶ್ರಮದಿಂದ ಇಲ್ಲಿಯೂ ಒಂದು ಭಾರತವೇ ರೂಪುಗೊಳ್ಳುತ್ತಿದೆ. ಭಾರತೀಯ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಶ್ರೀಮಂತಗೊಳಿಸಲಾಗುತ್ತಿದೆ. ಹಿಂದೂಧರ್ಮ ಎಲ್ಲರನ್ನೂ ಅಪ್ಪಿಕೊಳ್ಳುವಂಥದ್ದು, ಸರ್ವೇ ಜನಾಃ ಸುಖಿನೋಭವಂತು ಎಂಬ ಸಾರ್ವಕಾಲಿಕ ಸತ್ಯವನ್ನು ಹಿಂದೂಧರ್ಮ ಜಗತ್ತಿಗೆ ನೀಡಿದೆ. ಮನುಷ್ಯನ ವೈಯಕ್ತಿಕ ಬದುಕು ಶುದ್ಧವಾಗಿರಬೇಕು. ಆಗ ಮಾತ್ರ ಸಾಧನೆ ಸಾಧ್ಯವಾಗುತ್ತದೆ. ಸದಾ ದೇವರ ಸ್ಮರಣೆಯನ್ನು ಮಾಡಬೇಕು. ಇತರ ವಿಷಯಗಳಿಗೆ ಸಮಯ ನೀಡುವಂತೆ ಧ್ಯಾನ-ಪೂಜೆಗಳಿಗೂ ಸಮಯವನ್ನು ಮೀಸಲಿಡಬೇಕು. ಬಹಿರಂಗದ ಬದುಕಿನಷ್ಟೇ ಅಂತರಂಗದ ಬದುಕು ಸಹ ಮುಖ್ಯ. ಮನಸ್ಸನ್ನು ಅಂತರಂಗದ ಗುರಿಯತ್ತ ಕೇಂದ್ರೀಕರಿಸಬೇಕು. ಅಮೇರಿಕಾದಲ್ಲಿಯೂ ದೇವಾಲಯಗಳ ಸ್ಥಾಪನೆ, ಜೀರ್ಣೋದ್ಧಾರ, ಗೋಶಾಲೆಗಳ ಸ್ಥಾಪನೆಯಂತಹ ಕಾರ್ಯಗಳು ನಡೆಯುತ್ತಿರುವುದು ಶ್ಲಾಘನೀಯ. ಇವೆಲ್ಲ ಭಾರತೀಯ ಪರಂಪರೆಯ ಪ್ರತೀಕಗಳು. ಶ್ರೀ ಪುರುಷೋತ್ತಮರವರು ಎಸ್-3 ಫೌಂಡೇಶನ್ ಸ್ಥಾಪಿಸಿ ಭಾರತೀಯತೆಯ ಅಸ್ಮಿತೆಗಾಗಿ ಸಾವಯವ ಕೃಷಿ, ಗೋಶಾಲೆ, ಧ್ಯಾನ, ಜಪ, ತಪ ವಿಶೇಷ ಪೂಜೆಗಳು ಇತ್ಯಾದಿಗಳಿಗಾಗಿ ಅವರ ಜೀವನವನ್ನು ಮುಡಿಪಾಗಿಟ್ಟಿರುವುದು ಅತ್ಯಂತ ಶ್ಲಾಘನೀಯ ಎಂದು ತಿಳಿಸಿದರು.

ಗ್ಲೋಬಲ್ ಹಿಂದು ಹೆರಿಟೇಜ್ ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ಪ್ರಕಾಶ್ ವಲಗುಪುಡಿಯವರು ಸ್ವಾಗತಿಸಿ, ಗುರುವಿನ ಮಹತ್ವವನ್ನು ವಿವರಿಸಿದರು. ಎಸ್-3 ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ಪುರುಷೋತ್ತಮ್‌ರವರು ಅವರ ಕೋರಿಕೆಯಂತೆ ಪೂಜ್ಯರು ಆಗಮಿಸಿರುವುದಕ್ಕೆ ಕೃತಜ್ಞತೆ ವ್ಯಕ್ತಪಡಿಸಿ, ಶ್ರೀಮಠ ಹಾಗೂ ಸಂಸ್ಥೆಯ

ಸೇವಾಕಾರ್ಯಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿದರು. ಶ್ರೀ ಕುಮಾರ್ ರಾಜಶೇಖರವರು ಜೆಎಸ್ಎಸ್ ಸಿರಿಚ್ಯುಯಲ್ ಮಿಷನ್‌ನ ಚಟುವಟಿಕೆಗಳು, ನಿರ್ಮಾಣವಾಗಲಿರುವ ದೇವಾಲಯದ ವಿವರಗಳನ್ನು ತಿಳಿಸಿದರು. ಡಾ. ಸಜ್ಜನ್ ಶಿವರವರು, ಶ್ರೀ ಜಯರಾಜೇಂದ್ರ ರವರು, ಆಲಮಟ್ಟಿ ಶ್ರೀ ರುದ್ರಮುನಿದೇವರುರವರು ಹಾಗೂ ಟೆನೆಸ್ಸಿಯ ವಿವಿಧ ಭಾಗಗಳಿಂದ ಆಗಮಿಸಿದ್ದ ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಭಕ್ತಾದಿಗಳು ಸತ್ಸಂಗದಲ್ಲಿ ಭಾಗವಹಿಸಿದ್ದರು.

**ಪ್ರತಿಯೊಬ್ಬರು ಅಂತರ್ಮುಖಿಗಳಾಗಬೇಕು**

ಪ್ರತಿಯೊಬ್ಬರು ಅಂತರ್ಮುಖಿಗಳಾದಾಗ ಅಂತರಂಗ ಪರಿಶುದ್ಧಗೊಳ್ಳುತ್ತದೆ ಎಂದು ಪರಪಮಪೂಜ್ಯ ಜಗದ್ಗುರುಗಳವರು ಅಮೆರಿಕದ ನ್ಯೂಜೆರ್ಸಿಯ ವೀರಶೈವ ಸಮಾಜದಿಂದ ಸೆಪ್ಟೆಂಬರ್10ರಂದು ಏರ್ಪಡಿಸಿದ್ದ ಸತ್ಸಂಗದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಸಂಗೀತ, ನೃತ್ಯ, ಶಿಲ್ಪ ಇತ್ಯಾದಿ ಕಲೆಗಳು ಅರಿವಿಲ್ಲದಂತೆಯೇ ಮನುಷ್ಯನನ್ನು ಆವರಿಸಿಕೊಳ್ಳುತ್ತವೆ. ಅಂತಹ ಶಕ್ತಿ ಅವುಗಳಲ್ಲಿದೆ. ಅವು ಮನುಷ್ಯನ ಮನಸ್ಸು ಮತ್ತು ಹೃದಯವನ್ನು ಅರಳಿಸುತ್ತವೆ. ಮನುಷ್ಯ ಸುಖವಾಗಿರಲೆಂದೇ ದುಡಿಮೆಯನ್ನು ಮಾಡುತ್ತಾನೆ. ಎಲ್ಲರೂ ಸುಖವನ್ನೇ ಬಯಸುತ್ತಾರೆ. ಕಷ್ಟ–ಸುಖಗಳು ಎಲ್ಲರಿಗೂ ಇರುತ್ತವೆ. ಬಹಿರಂಗದ ಸುಖಕ್ಕಿಂತ ಅಂತರಂಗದ ಸುಖ ಮುಖ್ಯ. ಅದು ಭಗವಂತನ ಧ್ಯಾನ, ಪೂಜೆ, ಭಕ್ತಿಗಳಲ್ಲಿ ದೊರೆಯುತ್ತದೆ. ಮನುಷ್ಯ ಅಂತರ್ಮುಖಿಯಾದಾಗ ನಿಜವಾದ ಸುಖ ದೊರೆಯಲು ಸಾಧ್ಯವಾಗುತ್ತದೆ. ಭಾರತದ ಋಷಿಮುನಿಗಳು ಮತ್ತು ಸಂತರು ಜಗತ್ತಿನ ಸಾರ್ವತ್ರಿಕ ಸತ್ಯಗಳನ್ನು ಕಂಡುಕೊಂಡುವರು ಎಂಬುದು ಹೆಮ್ಮೆಯ ವಿಷಯ. ಅನೇಕ ವೈಜ್ಞಾನಿಕ ಸತ್ಯಗಳನ್ನು ಭಾರತೀಯರು ಅವರ ದಿವ್ಯಶಕ್ತಿಯಿಂದಲೇ ಕಂಡುಕೊಂಡರು. ಎಲ್ಲರೂ ಅಂತರಂಗವನ್ನು ಪರಿಶುದ್ಧಗೊಳಿಸಿಕೊಳ್ಳಬೇಕು. ಮನಸ್ಸನ್ನು ಸ್ಥಿರವಾಗಿಟ್ಟುಕೊಂಡು ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು. ಪ್ರತಿಫಲ ನಿರೀಕ್ಷಿಸುತ್ತಲೇ ಕೆಲಸ ಮಾಡಬೇಕು. ಆಗ ಆದರಲ್ಲಿ ಯಶಸ್ಸು ದೊರೆಯುತ್ತದೆ. ನಿಷ್ಕಾಮವಾದ ಭಕ್ತಿಯಿಂದ ಭಗವಂತನನ್ನು ಧ್ಯಾನಿಸಬೇಕು. ಮನುಷ್ಯ ತನ್ನನ್ನು ತಾನು ಭಗವಂತನಿಗೆ ಸಮರ್ಪಣೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ವಿಎಸ್‌ಎನ್‌ಜೆ ಅಧ್ಯಕ್ಷರಾದ ಶ್ರೀ ಓಂಕಾರಮೂರ್ತಿ ಮುರುಂಡಿ, ಬೃಂದಾವನ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀಮತಿ ಪದ್ಮಿನಿ, ಹೆಚ್‌ಎಸ್‌ಬಿಬಿ ಉಪಾಧ್ಯಕ್ಷರಾದ ಡಾ. ಬಾಬು ಕಿಲಾರೆ ವೀರೇಗೌಡರವರುಗಳು ಶ್ರೀಮಠ ಹಾಗೂ ಸಂಸ್ಥೆಗಳ ಬಗ್ಗೆ ಅಭಿಮಾನಪೂರ್ವಕವಾಗಿ ಮಾತಾಡಿದರು. ಶ್ರೀ ಕುಮಾರ ರಾಜಶೇಖರ್ ಹಾಗೂ ಶ್ರೀ ಸಂಜಾತ್ ಸೂಲಕುಂಟೆರವರುಗಳು ಜೆಎಸ್ಎಸ್ ಸ್ಪಿರಿಚ್ಯುಯಲ್ ಮಿಷನ್ ನಡೆದು ಬಂದ ದಾರಿ ಹಾಗೂ ಮುಂದಿನ ಯೋಜನೆಗಳ ಬಗ್ಗೆ ವಿವರಗಳನ್ನು ಮಂಡಿಸಿದರು.

ಶ್ರೀಮತಿ ಅನು ಕುರವತ್ತಿ ಸ್ವಾಗತಿಸಿದರು. ತ್ರಿಷಾ ಮತ್ತು ಜಿಯಾ ಹುಲಿಕೆರೆ ಪ್ರಾರ್ಥನೆ ಮಾಡಿದರು. ಸಚಿ ನಿಂಬೆಕಾಯಿ ಲಿಂಗಾಷ್ಟಕಂ ಹಾಡಿದರು. ಮಾನ್ಯ ಕವಿ ಕೊಳಲು ವಾದನ ಪ್ರಸ್ತುತಿಪಡಿಸಿದರು. ಸೌಮ್ಯ ಜಗಳೂರು ಸಾಮೂಹಿಕ ಭಜನೆ ಮಾಡಿಸಿದರು. ಬಿಯಾಂಕಾ ರಾಧಾಕೃಷ್ಣ ಭರತನಾಟ್ಯ ಪ್ರದರ್ಶಿಸಿದರು. ಶ್ರೀ ಶಿವಶಂಕರ್ ಸಾಣಿಕೊಪ್ಪ ಕಾರ್ಯಕ್ರಮ ನಿರೂಪಿಸಿದರು.

**ಪರಹಿತ ಬಯಸುವವರು ಭಾರತೀಯರು**

ಯಾವುದೇ ಸ್ವಾರ್ಥವಿಲ್ಲದೆ ಇನ್ನೊಬ್ಬರಿಗೆ ಸಹಾಯ ಮಾಡುವ ಮನೋಭಾವವನ್ನು ಭಾರತೀಯರು ಹೊಂದಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳವರು ಸೆಪ್ಟೆಂಬರ್ 11ರಂದು ಅಮೆರಿಕದ ನ್ಯೂಯಾರ್ಕ್‌ನ ಬಸವ ಇಂಟರ್‌ನ್ಯಾಷನಲ್ ಕಾರ್ಪೊರೇಷನ್ ವತಿಯಿಂದ ಆಯೋಜಿಸಿದ್ದ ಸತ್ಸಂಗದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಬಸವೇಶ್ವರರು ಜಗತ್ತಿನ ಶ್ರೇಷ್ಠ ಸಂತರಲ್ಲಿ ಒಬ್ಬರು. ಅವರ ಸ್ಮರಣೆ ನಿರಂತರವಾಗಿ ನಡೆಯುತ್ತಿರುವುದು ಶ್ಲಾಘನೀಯ. ಎಲ್ಲರೂ ಎಲ್ಲ ಕಾಲಕ್ಕೂ ಸುಖ ಸಂತೋಷದಿಂದರ ಬೇಕೆಂದು ಬಯಸುತ್ತಾರೆ. ಭಾರತ ಆಧ್ಯಾತ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಂಪತ್ಭರಿತ ರಾಷ್ಟ್ರ. ಋಷಿಮುನಿಗಳು, ಸಂತರು, ಶರಣರು, ದಾರ್ಶನಿಕರು ಅದನ್ನು ಶ್ರೀಮಂತ ಗೊಳಿಸಿದರು. ಮುಂದಿನ ಪೀಳಿಗೆಗೆ ಇದನ್ನೆಲ್ಲ ತಿಳಿಸುವ ಅಗತ್ಯವಿದೆ. ಭಾರತದಿಂದ ಬಂದು ಇಲ್ಲಿ ನೆಲೆಸಿದ್ದರೂ, ನಮ್ಮ ದೇಶದ ಸಂಸ್ಕೃತಿ, ಪರಂಪರೆಯನ್ನು ಮರೆಯದೇ ಉಳಿಸಿ ಬೆಳೆಸಿಕೊಂಡು ಬರುತ್ತಿರುವುದು ವಿಶೇಷವಾದುದು. ಭಗವಂತ ಮನುಷ್ಯನಿಗೆ ಆಲೋಚನಾ ಶಕ್ತಿಯನ್ನು ನೀಡಿದ್ದಾನೆ. ಅದನ್ನು ಬಳಸಿಕೊಂಡು ಜೀವನದ ಸಮಸ್ಯೆಗಳನ್ನು ಎದುರಿಸಬೇಕು. ಜೀವನದಲ್ಲಿ ಅನೇಕ ದ್ವಂದ್ವಗಳಿರುತ್ತವೆ. ಅವುಗಳನ್ನು ಸರಿದೂಗಿಸಿಕೊಂಡು ಹೋಗುವುದು ಅಗತ್ಯ. ಜಾಣನು ಲೌಕಿಕ–ಪಾರಮಾರ್ಥ ಎರಡನ್ನು ಸರಿದೂಗಿಸಿಕೊಂಡು ಬಾಳಬೇಕೆಂದು ನಿಜಗುಣ ಶಿವಯೋಗಿಗಳು ಹೇಳಿದ್ದಾರೆ. ಮಾಡುವ ಕಾರ್ಯವೆಲ್ಲ ಭಗವಂತನ ಸೇವೆ ಎಂದು ಮಾಡಬೇಕೆಂದು ಶಂಕರಾಚಾರ್ಯರು ತಿಳಿಸಿದ್ದಾರೆ. ಹಾಗಾದಾಗ ಮಾತ್ರ ಅದು ನಿಸ್ವಾರ್ಥ ಸೇವೆ ಎನಿಸುತ್ತದೆ ಎಂದು ಹೇಳಿದರು.

ಕ್ಷೇವಿಯರ್ ಸ್ಕೂಲ್ ಆಫ್ ಮೆಡಿಸಿನ್‌ನ ಅಧ್ಯಕ್ಷರಾದ ಶ್ರೀ ರವಿ ಬೋಪಲಾಪುರ ಹಾಗೂ ಡಾ. ಅನಿಲ್ ಪಾಟೀಲ್‌ರವರುಗಳು ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನ ಎಲ್ಲ ಕಾರ್ಯ ಚಟುವಟಿಕೆಗಳಿಗೆ ಎಲ್ಲರ ಸಹಾಯ ಸಹಕಾರಗಳು ಅಗತ್ಯ ಎಂದು ಕೋರಿದರು. ಶ್ರೀಮತಿ ಸತ್ಯ ವಿಶ್ವನಾಥ್‌ರವರು ಅವರಿಂದಾಗುವ ಎಲ್ಲ ರೀತಿಯ ಸಹಕಾರವನ್ನು ನೀಡುವುದಾಗಿ ತಿಳಿಸಿದರು. ಶ್ರೀ ಕುಮಾರ್ ರಾಜಶೇಖರ್ ಹಾಗೂ ಶ್ರೀ ಸಂಜಾತ್ ಸೂಲಕುಂಟೆರವರುಗಳು ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ ನಡೆದು ಬಂದ ದಾರಿ ಹಾಗೂ ಮುಂದಿನ ಯೋಜನೆಗಳ ಬಗ್ಗೆ ವಿವರಗಳನ್ನು ಮಂಡಿಸಿದರು.

ಪೂಜ್ಯರು ಕಾರ್ಯಕ್ರಮಕ್ಕೂ ಮೊದಲು ಶ್ರೀ ಮಹಾವಲ್ಲಭ ಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ಅಧ್ಯಕ್ಷರಾದ ಶ್ರೀಮತಿ ಉಷಾ ಮೈಸೂರ್‌ಕರ್, ಸಮಿತಿಯ ಪದಾಧಿಕಾರಿಗಳು, ಆಗಮಿಕರು ಪೂಜ್ಯರನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಿದರು. ದೇವಸ್ಥಾನದ ಕಾರ್ಯ ಚಟುವಟಿಕೆಗಳನ್ನು ಶ್ರೀಮತಿ ಉಷಾ ಮೈಸೂರ್‌ಕರ್‌ರವರು ಪೂಜ್ಯರಿಗೆ ವಿವರಿಸಿದರು.

ಶ್ರೀಮತಿ ಸ್ವರೂಪ ಚಿನ್ನಪ್ಪಾಳ ಸ್ವಾಗತಿಸಿದರು. ವಿದ್ಯಾರ್ಥಿಗಳು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು. ಶ್ರೀ ಸುಧೀಂದ್ರ ಕಾರ್ಯಕ್ರಮ ನಿರೂಪಿಸಿದರು.

**ಹೃದಯಶ್ರೀಮಂತಿಕೆಯಿಂದ ಕೂಡಿದುದು ಭಾರತೀಯ ಸಂಸ್ಕೃತಿ**

ಭಾರತೀಯ ಸಂಸ್ಕೃತಿ ಅಪೂರ್ವವಾದ ಹೃದಯ ಶ್ರೀಮಂತಿಕೆಯಿಂದ ರೂಪುಗೊಂಡಿರುವ ಶ್ರೇಷ್ಠ ಸಂಸ್ಕೃತಿ ಎಂದು ಪರಮಪೂಜ್ಯ ಜಗದ್ಗುರುಗಳವರು ಸೆಪ್ಟೆಂಬರ್ 13ರಂದು ಅಮೆರಿಕದ ನ್ಯೂ ಇಂಗ್ಲೆಂಡ್‌ನ ವೀರಶೈವ ಸಮಾಜದ ವತಿಯಿಂದ ಬಾಸ್ಟನ್‌ನಲ್ಲಿ ಏರ್ಪಡಿಸಿದ್ದ ಸತ್ಸಂಗದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಆದಿ–ಅಂತ್ಯವಿಲ್ಲದ, ಜಗತ್ತಿನ ಎಲ್ಲರನ್ನೂ ಪ್ರೀತಿಸುವ ಸನಾತನ ಸಂಸ್ಕೃತಿ ಭಾರತದ್ದು. ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಮಹಾತ್ಮ ಗಾಂಧೀಜಿಯವರು ಅಹಿಂಸೆ ಮತ್ತು ಶಾಂತಿಯುತ ಹೋರಾಟಕ್ಕೆ ಕರೆ ನೀಡಿದರು. ಆಯುಧಗಳನ್ನು ಬಳಸದೇ ಅಹಿಂಸಾತ್ಮಕ ಹೋರಾಟಕ್ಕೆ ಪ್ರೇರೇಪಿಸಿದರು. ಈ ಮೂಲಕ ಜಗತ್ತಿಗನಲ್ಲಿ ಶಾಂತಿ ಮತ್ತು ಅಹಿಂಸೆಯ ಮೂಲಕ ಏನನ್ನಾದರೂ ಸಾಧಿಸಬಹುದು ಎಂಬುದನ್ನು ತೋರಿಸಿಕೊಟ್ಟರು. ಇನ್ನೊಬ್ಬರ ಹೃದಯವನ್ನು ಗೆಲ್ಲುವ ಅಂತಃಸತ್ವ ಭಾರತೀಯರಲ್ಲಿದೆ. ಸಾಮ್ರಾಜ್ಯ ವಿಸ್ತರಣೆಗಾಗಿ ಜಗತ್ತಿನಲ್ಲಿ ಇಂದಿಗೂ ಯುದ್ಧಗಳು ನಡೆಯುತ್ತಿವೆ. ಹಾಗೆಯೇ ಮನಸ್ಸಿನಲ್ಲಿಯೂ ಜೀವನದ ಜಂಜಾಟಗಳ ಒಂದು ಯುದ್ಧ ನಡೆಯುತ್ತಿರುತ್ತದೆ. ಅಂತಹ ತೊಳಲಾಟಗಳಿಂದ ಮುಕ್ತಿ ಹೊಂದಬೇಕಾದರೆ ಧರ್ಮಪಾಲನೆ ಅಗತ್ಯ. ಪ್ರಾರ್ಥನೆಯಿಂದ ಬ್ರಹ್ಮಾನಂದವನ್ನು ಪಡೆಯಲು ಸಾಧ್ಯ. ಮನಸ್ಸಿಗೆ ಅತ್ಯಂಕಿಕ ಸುಖವನ್ನು ಅದು ನೀಡುತ್ತದೆ. ಜೀವನದ ಏರಿಳಿತಗಳನ್ನು ಸಮಾನವಾಗಿ ಸ್ವೀಕರಿಸುವ ಗುಣವನ್ನು ಮನುಷ್ಯ ಬೆಳೆಸಿಕೊಳ್ಳಬೇಕು. ಇರುವುದರಲ್ಲೇ ಹೇಗೆ ಸುಖವಾಗಿ ಬಾಳಬೇಕು ಎಂಬುದನ್ನು ಯೋಚಿಸಬೇಕು. ದೇವರು ಅಂತರಂಗ ಮತ್ತು ಬಹಿರಂಗ ಎರಡಲ್ಲೂ ಇದ್ದಾನೆ. ಅದನ್ನು ಅರ್ಥ ಮಾಡಿಕೊಂಡರೆ ಜೀವನದಲ್ಲಿ ಉತ್ತಮವಾದುದನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಶ್ರೀ ರಾಜಣ್ಣ ಮತ್ತು ಶ್ರೀಮತಿ ಪುಷ್ಪ ದಂಪತಿಗಳ ನಿವಾಸದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನಿವೃತ್ತ ಪ್ರಾಂಶುಪಾಲರಾದ ಪ್ರೊ. ಎಸ್. ಮಲ್ಲಣ್ಣನವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಎಸ್‌ಎನ್‌ಇ ಅಧ್ಯಕ್ಷರಾದ ಶ್ರೀ ರುದ್ರೇಶ್ ಕಾರ್ಯಕ್ರಮ

ನಿರೂಪಿಸಿದರು. ಕು. ಪ್ರಕೃತಿ ಪ್ರಾರ್ಥನೆ ಸಲ್ಲಿಸಿದರು. ಶ್ರೀ ಮಧು ಅಕ್ಕಿಹೆಬ್ಬಾಳ್, ಶ್ರೀಮತಿ ಲಕ್ಷ್ಮೀ ರಮೇಶ್ ಗಾಯನ ಮತ್ತು ಭಜನೆ ಮಾಡಿದರು. ಶ್ರೀ ರಾಜೇಶ್ ಪೈ ಮತ್ತು ಶ್ರೀ ರಮೇಶ್ ಯಾಲಕ್ಕಿಶೆಟ್ಟರ್‌ರವರು ಪಕ್ಕವಾದ್ಯ ಸಹಕಾರ ನೀಡಿದರು. ಶ್ರೀ ರಾಜೇಂದ್ರ ಮತ್ತು ಶ್ರೀ ಆರ್. ಮಹೇಶ್‌ರವರು ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ ನಡೆದು ಬಂದ ದಾರಿ ಹಾಗೂ ಮುಂದಿನ ಯೋಜನೆಗಳ ಬಗ್ಗೆ ವಿವರಗಳನ್ನು ಮಂಡಿಸಿದರು. ನ್ಯೂ ಇಂಗ್ಲೆಂಡ್‌ನ ವಿವಿಧ ಭಾಗಗಳಿಂದ ಆಗಮಿಸಿದ್ದ ಆಧ್ಯಾತ್ಮಿಕ ಜಿಜ್ಞಾಸುಗಳು ಸತ್ಸಂಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

**ಭಾರತ ಹಾಗೂ ಷಿಕಾಗೋಗಳಿಗೆ ಅವಿನಾಭಾವ ಸಾಂಸ್ಕೃತಿಕ ಸಂಬಂಧವಿದೆ**

ಭಾರತ ಹಾಗೂ ಷಿಕಾಗೋಗಳಿಗೆ ಅವಿನಾಭಾವ ಸಾಂಸ್ಕೃತಿಕ ಸಂಬಂಧವಿದೆ ಎಂದು ಪರಮಪೂಜ್ಯ ಜಗದ್ಗುರುಗಳು ಸೆಪ್ಟೆಂಬರ್ 15ರಂದು ಅಮೆರಿಕದ ಷಿಕಾಗೋದ ಅರೋರಾ ಬಡವಾಣೆಯಲ್ಲಿ ಏರ್ಪಡಿಸಿದ್ದ ಸತ್ಸಂಗದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಸ್ವಾಮಿ ವಿವೇಕಾನಂದರ ಸಿಕಾಗೋ ಭಾಷಣದ ಸಾರವನ್ನು ನೆನಪಿಸಿಕೊಳ್ಳದೆ ಭಾರತದಲ್ಲಿ ಇಂದಿಗೂ ಯಾವುದೇ ಸಂಸ್ಕೃತಿ, ಸಾಹಿತ್ಯ, ಪರಂಪರೆಯ ಕುರಿತಾದ ಉಪನ್ಯಾಸಗಳು, ಭಾಷಣಗಳು ಪೂರ್ಣಗೊಳ್ಳುವುದಿಲ್ಲ. ಭಾರತದ ಸಂಸ್ಕೃತಿಯ ಮಹತ್ತನ್ನು ಜಗತ್ತಿಗೆ ತೋರಿಸಿಕೊಟ್ಟ ನೆಲವಿದು. ಭಾರತದ ಭಾತೃತ್ವ ಭಾವನೆಯನ್ನು ವಿಶ್ವಕ್ಕೆ ಪರಿಚಯಿಸಿ ಜಗತ್ತಿನ ಜನರನ್ನು ಮಂತ್ರಮುಗ್ಧಗೊಳಿಸಿದ ವಿಶೇಷ ಸ್ಥಳ. ದೇವನೊಬ್ಬ ನಾಮ ಹಲವು. ಜಗತ್ತಿನ ಎಲ್ಲ ದಾರ್ಶನಿಕರು, ಸಂತರು, ಶರಣರ ಸಂದೇಶವೂ ಅದೇ ಅಗಿದೆ. ಹರಿಹರ ಕವಿ ಸತ್ಯವೆಂಬುದೇ ಹರನು, ಹರನೆಂಬುದೇ ಸತ್ಯ ಎಂದು ಹೇಳಿದ್ದಾರೆ. ಭಗವಂತ ಸದ್ಗುಣ ಸಾಕಾರನು ಹೌದು. ನಿರ್ಗುಣ ನಿರಕಾರನೂ ಹೌದು. ಆತ ಸರ್ವಶಕ್ತ ಮತ್ತು ಸರ್ವಾಂತರ್ಯಾಮಿ. ಎಲ್ಲೆಡೆಯೂ ಭಗವಂತನ ಅಸ್ತಿತ್ವವಿದೆ. ಕೆಲವು ಸಂದರ್ಭದಲ್ಲಿ ಪ್ರಕೃತಿಯ ಮುಂದೆ ಮನುಷ್ಯ ಪ್ರಯತ್ನಗಳೆಲ್ಲವೂ ನಗಣ್ಯವಾಗಿಬಿಡುತ್ತವೆ. ಅಂತಹ ಅದ್ಭುತ ಶಕ್ತಿ ಪ್ರಕೃತಿಗಿದೆ. ಮನುಷ್ಯನಿಗೆ ಜೀವನದಲ್ಲಿ ನಂಬಿಕೆ ಮುಖ್ಯ. ಎಲ್ಲರೂ ನಂಬಿಕೆಯ ಮೇಲೆ ಇಂದು ಜೀವನವನ್ನು ಸಾಗಿಸುವುದು. ನಿಷ್ಠೆಯಿಂದ ಭಗವಂತನನ್ನು ನೆನೆಯಬೇಕು. ಶ್ರದ್ಧೆಯಿಂದ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು. ನಾನು ಎನ್ನುವುದನ್ನು ಬಿಟ್ಟು ನಾವು ಎನ್ನುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಇನ್ನೊಬ್ಬರ ಮಾತುಗಳನ್ನು, ಅಭಿಪ್ರಾಯವನ್ನು ಗೌರವಿಸಬೇಕು. ಧರ್ಮ ಮತ್ತು ಆಧ್ಯಾತ್ಮವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಸಂತೋಷವಾಗಿರಬಹುದು ಎಂದು ಹೇಳಿದರು.

ನಿವೃತ್ತ ನ್ಯಾಯಾಧೀಶರಾದ ಶ್ರೀ ಈಶ್ವರ್ ಅಂಟಿನರವರು ಮಾತನಾಡಿದರು. ಶ್ರೀ ಆರ್. ಮಹೇಶ್‌ರವರು ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನ್ನಿನ ಕಾರ್ಯಚಟುವಟಿಕೆ

ಗಳನ್ನು ವಿವರಿಸಿದರು. ಶ್ರೀ ಸುಪ್ರಿಯಾ ಅಂಟಿನರವರು ಸ್ವಾಗತಿಸಿದರು. ಶ್ರೀ ಅಮಿತ್ ಕಜ್ಜರಗಿಯವರು ವಂದನೆ ಸಲ್ಲಿಸಿದರು. ಶ್ರೀ ಶಶಿಧರ್ ಕಲ್ಲೂರು, ಕು. ಧ್ಯಾನ, ಕು. ಧನ್ಯುನ್‌ರವರು ವಚನ ಗಾಯನ ಮಾಡಿದರು. ಚಿ. ಋಷಿ ರುದ್ರಮಂತ್ರ ಪಠಿಸಿದರು.

**ತಾಯ್ನಾಡಿನ ಪ್ರೇಮ ಶ್ಲಾಘನೀಯ**

ಕನ್ನಡಿಗರು ವಿವಿಧ ಕಾರಣಗಳಿಂದ ಅಮೆರಿಕದಲ್ಲಿ ನೆಲೆಸಿದ್ದರೂ ತಾಯ್ನಾಡಿನ ಸಂಸ್ಕೃತಿಯನ್ನು ಮರೆಯದೇ ಉಳಿಸಿ–ಬೆಳೆಸಿಕೊಂಡು ಬರುತ್ತಿರುವುದು ಶ್ಲಾಘನೀಯ ವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಸೆಪ್ಟೆಂಬರ್ 17ರಂದು ಅಮೆರಿಕದ ಷಿಕಾಗೋದಲ್ಲಿ ಏರ್ಪಡಿಸಿದ್ದ ವಿದ್ಯಾರಣ್ಯ ಕನ್ನಡ ಕೂಟದ ಸುವರ್ಣ ಮಹೋತ್ಸವವನ್ನು ಉದ್ಘಾಟಿಸಿ ಆಶೀರ್ವಚನ ನೀಡುತ್ತಾ ತಿಳಿಸಿದರು. ನಮ್ಮತನವನ್ನು ಮರೆಯದೇ ಕನ್ನಡಿಗರೆಲ್ಲರೂ ಒಂದೆಡೆ ಸೇರಿದಾಗ ಇಲ್ಲಿಯೂ ಒಂದು ಕರ್ನಾಟಕವೇ ರೂಪು ಗೊಂಡಂತೆ ಭಾಸವಾಗುತ್ತದೆ. ಕನ್ನಡಕ್ಕೆ 1500 ವರ್ಷಗಳ ಇತಿಹಾಸವಿದೆ. ಪ್ರಾಚೀನ ಭಾಷೆಗಳಲ್ಲಿ ಕನ್ನಡವೂ ಒಂದು. ಜಗತ್ತಿನ ಅತಿಹೆಚ್ಚು ಮಾತನಾಡುವ ಭಾಷೆಗಳಲ್ಲಿ ಕನ್ನಡ ಕೂಡ ಒಂದಾಗಿದೆ. ಅಮೆರಿಕದಲ್ಲಿ ಎಲ್ಲೆಡೆ ಕನ್ನಡ ಸಂಘಗಳಿವೆ. ಅವುಗಳೆಲ್ಲದರ ಧ್ಯೇಯ ನಾವೆಲ್ಲ ಒಂದೇ ಎಂಬುದಾಗಿದೆ. ವಿನೋಬಾ ಭಾವೆಯವರು ಕನ್ನಡ ಲಿಪಿಯನ್ನು ರಾಣಿ ಲಿಪಿ ಎಂದು ಕರೆದರು. ಕನ್ನಡ ಭಾಷೆ ಬೆಳೆದು ಬಂದ ರೀತಿಯೇ ವಿಶಿಷ್ಟವಾಗಿದೆ. ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂಬ ಮೂರು ಹಂತಗಳಲ್ಲಿ ಇದರ ಬೆಳವಣಿಗೆಯನ್ನು ಗುರುತಿಸಲಾಗುತ್ತದೆ. ಕನ್ನಡ ಮೃದು ಮಧುರವಾದ ಭಾಷೆ. ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ ಕೀರ್ತಿ ವಚನಕಾರರು ಮತ್ತು ದಾಸರಿಗೆ ಸಲ್ಲುತ್ತದೆ. ಕನ್ನಡ ಸಾಮಾನ್ಯರ ಭಾಷೆ. ಭಗವಂತನಲ್ಲಿ ತನ್ನನ್ನು ಸಮರ್ಪಣೆ ಮಾಡಿಕೊಳ್ಳಲು ಕನ್ನಡ ಭಾಷೆ ನೆರವಾಯಿತು. ಕನ್ನಡದ ರಾಜಮನೆತನಗಳಲ್ಲಿ ಒಂದಾದ ವಿಜಯನಗರ ಸಾಮ್ರಾಜ್ಯದ ಸ್ಥಾಪಕ ಮಾರ್ಗದರ್ಶಕರಾದ ವಿದ್ಯಾರಣ್ಯರ ಹೆಸರಿನಲ್ಲಿ ಕನ್ನಡ ಸಂಘವನ್ನು ಸ್ಥಾಪಿಸಿರುವುದು ವಿಶೇಷ. ಅದು ಐವತ್ತು ವರ್ಷಗಳನ್ನು ಪೂರೈಸಿ ಸುವರ್ಣ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿ. ಅದು ಹೀಗೆಯೇ ಕನ್ನಡದ ಕಂಪನ್ನು ಇನ್ನೂ ಹೆಚ್ಚುಹೆಚ್ಚು ಪಸರಿಸುತ್ತಿರಲಿ ಎಂದು ಹಾರೈಸಿದರು.

ಉಡುಪಿ ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದಂಗಳು ಭಾರತದ ಸಂಸ್ಕೃತಿಯ ಪತಾಕೆಯನ್ನು ಸ್ವಾಮಿ ವಿವೇಕಾನಂದರು ಹಾರಿಸಿದ ಜಾಗದಲ್ಲಿ ವಿದ್ಯಾರಣ್ಯ ಕನ್ನಡ ಕೂಟ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವುದು ಸಂತಸದ ಸಂಗತಿ. ಅನೇಕ ರೀತಿಯ ವಿಶೇಷವಾದ ಕೆಲಸಗಳನ್ನು ವಿದ್ಯಾರಣ್ಯ ಕನ್ನಡ ಕೂಟ ಮಾಡುತ್ತಿದೆ. ಅಮೆರಿಕದ ನೆಲದಲ್ಲಿ ಕನ್ನಡದ ಡಿಂಡಿಮವನ್ನು ಬಾರಿಸುವ ಕೆಲಸವನ್ನು ಇಲ್ಲಿ ಕನ್ನಡ ಸಂಘಗಳು ಮಾಡಿಕೊಂಡು ಬರುತ್ತಿವೆ. ಕನ್ನಡದ ಬೆಳವಣಿಗೆಗೆ ವಿಶೇಷವಾದ

ಕಾಣಿಕೆಯನ್ನು ನೀಡುತ್ತಿವೆ. ಮಧ್ವಾಚಾರ್ಯ, ಶಂಕರಾಚಾರ್ಯ ಮತ್ತು ಬಸವಣ್ಣನಂತಹವರ ಅನೇಕ ಸಾಧು, ಸಂತರ ಶರಣರ ಕಾರ್ಯಕ್ಷೇತ್ರವಾಗಿದ್ದು ಕರ್ನಾಟಕ ಎಂಬುದು ಹೆಮ್ಮೆಯ ವಿಷಯ ಎಂದು ಹೇಳಿದರು.

ಖ್ಯಾತ ಗಾಯಕರಾದ ಶ್ರೀ ರಾಜೇಶ್ ಕೃಷ್ಣನ್‌ರವರು ಈ ಸಂದರ್ಭದಲ್ಲಿ ಒಂದರೆಡು ಗೀತೆಗಳನ್ನು ಪ್ರಸ್ತುತಿ ಪಡಿಸಿದರು. ಕೂಟದ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್ ಭಟ್ಟ, ಉಪಾಧ್ಯಕ್ಷರಾದ ಶ್ರೀಮತಿ ಆಶಾ ಗುರುದತ್ತ ಉಪಸ್ಥಿತರಿದ್ದರು. ಸಾಖ್ಯಂ ಕಜೆ ಪ್ರಾರ್ಥನೆ ಸಲ್ಲಿಸಿದರು. ಸೋಹಂ ಕಜೆ ಪಕ್ಕವಾದ್ಯ ಸಹಕಾರ ನೀಡಿದರು. ಶ್ರೀಮತಿ ರಮ್ಯಾ ರಾವ್ ಕಾರ್ಯಕ್ರಮ ನಿರೂಪಿಸಿದರು.

**ಮನ ಮೆಚ್ಚುವ ರೀತಿಯಲ್ಲಿ ಬದುಕಬೇಕು**

ಪ್ರತಿಯೊಬ್ಬರೂ ಅವರ ಮನಸ್ಸು ಮೆಚ್ಚುವಂತೆ ಬದುಕಬೇಕು ಎಂದು ಶ್ರೀ ಸುತ್ತೂರು ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸೆಪ್ಟೆಂಬರ್ 19ರಂದು ಅಮೆರಿಕದ ವರ್ಜಿನಿಯಾದಲ್ಲಿ ಏರ್ಪಡಿಸಿದ್ದ ಸತ್ಸಂಗದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಜನಪದರು ಆಚಾರ ಮತ್ತು ನೀತಿಗಳಿಂದ ಜಗತ್ತಿನಲ್ಲಿ ಜ್ಯೋತಿಯಂತೆ ಬಾಳಬೇಕು ಆಶಯ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಅಗತ್ಯವಾದ ಸಂಸ್ಕಾರ, ಸಂಸ್ಕೃತಿ, ಉತ್ತಮ ಶಿಕ್ಷಣವನ್ನು ನೀಡಬೇಕಾದುದು ಅಗತ್ಯ. ದುಡಿಮೆ ಮತ್ತು ಧಾರ್ಮಿಕತೆಗಳನ್ನು ಜೀವನದಲ್ಲಿ ಸರಿದೂಗಿಸಿಕೊಂಡು ಹೋಗಬೇಕು. ಜೀವನದಲ್ಲಿ ಎಲ್ಲ ಕರ್ತವ್ಯಗಳು, ಸುಖ ಸೌಲಭ್ಯಗಳನ್ನು ಅನುಭವಿಸುವುದರ ಜೊತೆಗೆ ಧಾರ್ಮಿಕತೆಯನ್ನು ಸದಾ ಅಳವಡಿಸಿಕೊಳ್ಳಬೇಕು. ನಡೆನುಡಿಗಳಲ್ಲಿ ಸಂಯೋಗವಿರಬೇಕು. ಅಮೆರಿಕದಲ್ಲಿ ಎಲ್ಲಿಯೇ ಕನ್ನಡಿಗರ ಕಾರ್ಯಕ್ರಮಗಳನ್ನು ಆಯೋಜಿಸಿದರು ಕರ್ನಾಟಕದ ಎಲ್ಲ ಭಾಗಗಳವರೂ ಒಟ್ಟಾಗಿ ಭಾಗವಹಿಸುವುದು ಕನ್ನಡಿಗರ ತಾಯ್ನಾಡಿನ ಅಭಿಮಾನವನ್ನು ಬಿಂಬಿಸುತ್ತದೆ ಎಂದು ಹೇಳಿದರು.

ಶ್ರೀ ಜಗದೀಶ್ ಮತ್ತು ಶ್ರೀಮತಿ ಮಮತರವರ ನಿವಾಸದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಶ್ರೀ ಸಂಜಾತ್ ಸೂಲಕುಂಟೆಯವರು ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನ ಚಟುವಟಿಕೆಗಳು ಹಾಗೂ ದೇವಾಲಯ ಸಂಕೀರ್ಣದ ವಿವರಗಳನ್ನು ನೀಡಿದರು. ಕು. ತ್ರಿಷಿಕ ಜಗದೀಶ್ ಪ್ರಾರ್ಥನೆ ಸಲ್ಲಿಸಿದರು. ಶ್ರೀ ಲೋಕೇಶ್ ಗುರುಮಲ್ಲಯ್ಯ ಹಾಗೂ ಶ್ರೀ ಜಯಂತ್‌ರವರು ವಚನಗಾಯನ ಮಾಡಿದರು. ಶ್ರೀ ಲೋಕೇಶ್ ಗುರುಮಲ್ಲಯ್ಯ ಕಾರ್ಯಕ್ರಮ ನಿರೂಪಿಸಿದರು.

**ಶ್ರೀರಂಗಪಟ್ಟಣ ದಸರಾ ಉತ್ಸವಕ್ಕೆ ಐತಿಹಾಸಿಕ ಮಹತ್ವವಿದೆ**

ಶ್ರೀರಂಗಪಟ್ಟಣ ದಸರಾ ಉತ್ಸವಕ್ಕೆ ಐತಿಹಾಸಿಕ ಮಹತ್ವವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಸೆಪ್ಟಂಬರ್ 28ರಂದು ಶ್ರೀರಂಗಪಟ್ಟಣ ದಸರಾ ಮಹೋತ್ಸವದ

ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡಿ ಮತ್ತು ನಂತರ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಪೌರಾಣಿಕವಾಗಿ ಮತ್ತು ಐತಿಹಾಸಿಕವಾಗಿ ನವರಾತ್ರಿ ಮತ್ತು ವಿಜಯದಶಮಿಗೆ ವಿಶೇಷ ಪಾರಂಪರಿಕ ಮಹತ್ವವಿದೆ. ಶ್ರೀರಂಗಪಟ್ಟಣ ಒಂದು ಕಾಲಕ್ಕೆ ಮೈಸೂರು ಸಾಮ್ರಾಜ್ಯದ ರಾಜಧಾನಿಯಾಗಿದ್ದಂತಹ ಸ್ಥಳ. ವಿಜಯನಗರದ ನಂತರ ದಸರಾ ಉತ್ಸವ ಆರಂಭವಾದ ಕೀರ್ತಿ ಶ್ರೀರಂಗಪಟ್ಟಣಕ್ಕೆ ಸಲ್ಲುತ್ತದೆ. ಇಲ್ಲಿಯ ಶ್ರೀ ರಂಗನಾಥಸ್ವಾಮಿಯ ಸಾನ್ನಿಧ್ಯದಿಂದಾಗಿ ಶ್ರೀರಂಗಪಟ್ಟಣ ಎಂಬ ಹೆಸರು ಬಂದಿದೆ. ಮನುಷ್ಯ ತನ್ನ ಬದುಕಿನಲ್ಲಿ ಧಾರ್ಮಿಕ ಆಚರಣೆಗಳನ್ನು ಅಳವಡಿಸಿಕೊಂಡು ಬಾಳಬೇಕು. ಎಷ್ಟೇ ಭೌತಿಕ ಸುಖ, ಸಂತೋಷಗಳಿದ್ದರೂ ಸಹ ಅವು ಶಾಶ್ವತವಾದ ನೆಮ್ಮದಿ ಕೊಡಲು ಸಾಧ್ಯವಿಲ್ಲ. ಭಕ್ತಿಮಾರ್ಗ ಮತ್ತು ಜ್ಞಾನಮಾರ್ಗಗಳಲ್ಲಿ ಮನುಷ್ಯ ಸಾಗಬೇಕು ಎಂದು ತಿಳಿಸಿದರು.

ಸಚಿವರಾದ ಶ್ರೀ ಆರ್. ಅಶೋಕ್‌ರವರು ಶ್ರೀರಂಗಪಟ್ಟಣ ಒಂದು ಐತಿಹಾಸಿಕ ಸ್ಥಳ. ನಾಡಿನ ಅಭಿವೃದ್ಧಿಯಲ್ಲಿ ಮೈಸೂರು ಒಡೆಯರ ಕೊಡುಗೆ ಅಪಾರವಾದುದು. ದುಷ್ಟ ಶಕ್ತಿಗಳನ್ನು ನಾಶ ಮಾಡುವುದೇ ವಿಜಯದಶಮಿಯ ವಿಶೇಷ. ಎದುರಾಗುವ ಎಲ್ಲ ಅಡ್ಡಿಗಳನ್ನು ತೊಡೆದುಹಾಕಿ ನಾಡಿನ ಅಭಿವೃದ್ಧಿಗೆ ಎಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ಪ್ರತಿವರ್ಷವೂ ಶ್ರೀರಂಗಪಟ್ಟಣ ದಸರಾ ಹೀಗೆಯೇ ವಿಜೃಂಭಣೆಯಿಂದ ಜರುಗಬೇಕು ಎಂದು ಆಶಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಕೆ. ಗೋಪಾಲಯ್ಯನವರು ಶ್ರೀರಂಗಪಟ್ಟಣದ ಐತಿಹಾಸಿಕ ದಸರಾ ಉತ್ಸವವನ್ನು ಆಚರಿಸಲು ಸರ್ಕಾರ ತುಂಬಾ ಉತ್ಸುಕವಾಗಿದೆ. ಹಿಂದೆ ನಡೆಯುತ್ತಿದ್ದ ರೀತಿಯಲ್ಲಿ ಸಾಂಪ್ರದಾಯಿಕ ದಸರಾ ಮಹೋತ್ಸವವನ್ನು ಪ್ರತಿವರ್ಷವೂ ಆಚರಿಸಲಾಗುವುದು ಎಂದು ತಿಳಿಸಿದರು.

ಸಚಿವರಾದ ಡಾ. ಕೆ.ಸಿ. ನಾರಾಯಣಗೌಡ ಮತ್ತು ಶಾಸಕರಾದ ಶ್ರೀ ರವೀಂದ್ರ ಶ್ರೀಕಂಠಯ್ಯ ಮಾತನಾಡಿದರು. ಪುರಸಭೆ ಉಪಾಧ್ಯಕ್ಷರಾದ ಶ್ರೀ ಕೃಷ್ಣಪ್ಪ, ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ಎಸ್. ಗೋವಿಂದಪ್ಪ, ವೇದಬ್ರಹ್ಮ ಡಾ. ಭಾನುಪ್ರಕಾಶ್ ಶರ್ಮಾ, ಜಿಲ್ಲಾಧಿಕಾರಿಗಳಾದ ಶ್ರೀಮತಿ ಎಸ್. ಅಶ್ವಥಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಎನ್. ಯತೀಶ್, ಶ್ರೀಮತಿ ಶಾಂತಾ ಎಲ್. ಹುಲ್ಮನಿ ಉಪಸ್ಥಿತರಿದ್ದರು.

**ಶಿಸ್ತುಬದ್ಧವಾದ ಜೀವನ ರೂಢಿಸಿಕೊಳ್ಳಬೇಕು**

ಶಿಸ್ತುಬದ್ಧವಾದ ಜೀವನ ರೂಢಿಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಸೆಪ್ಟೆಂಬರ್ 28ರಂದು ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಯುಕ್ತ ಅರಮನೆ ಆವರಣದಲ್ಲಿ ಆಯೋಜಿಸಿದ್ದ ಯೋಗ ದಸರಾ ಉದ್ಘಾಟಿಸಿ

ಮಾತನಾಡುತ್ತಾ ತಿಳಿಸಿದರು. ಮಾನಸಿಕ ಮತ್ತು ದೈಹಿಕ ಆರೋಗ್ಯದ ಜೊತೆಗೆ ಜೀವನದಲ್ಲಿ ಶಿಸ್ತು ಅಳವಡಿಸಿಕೊಳ್ಳಲು ಯೋಗಾಭ್ಯಾಸ ಮಾಡುವುದು ಸಹಕಾರಿಯಾಗುತ್ತದೆ. ದಸರಾ ಮಹೋತ್ಸವದಲ್ಲಿ ಯೋಗ ದಸರಾ ಆಚರಿಸುತ್ತಿರುವುದು ಶ್ಲಾಘನೀಯ ಎಂದರು.

ಶಾಸಕರಾದ ಶ್ರೀ ಎಸ್.ಎ. ರಾಮದಾಸ್ ನಮ್ಮ ದೇಶದಲ್ಲಿ ಪ್ರವರ್ಧಮಾನಕ್ಕೆ ಬಂದ ಯೋಗವನ್ನು ಇದೀಗ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಅನುಸರಿಸಲಾಗುತ್ತಿದೆ. ಅನೇಕ ಆರೋಗ್ಯ ಸಮಸ್ಯೆಗಳನ್ನು ಯೋಗದಿಂದ ಪರಿಹರಿಸಿಕೊಳ್ಳಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಸರ್ಕಾಜಿ ತಜಮುಲ್ ತನ್ವೀರ್, ಉಪಮೇಯರರಾದ ಶ್ರೀಮತಿ ರೂಪ, ಪಾಲಿಕೆ ಸದಸ್ಯರಾದ ಶ್ರೀ ಬಿ.ವಿ. ಮಂಜುನಾಥ್ ಮೊದಲಾದವರು ಉಪಸ್ಥಿತರಿದ್ದರು.

**3ಡಿ ಎಕ್ಸ್‌ಪೀರಿಯೆನ್ಸ್ ನಾವೀನ್ಯತಾ ಕೇಂದ್ರದ ಸ್ಥಾಪನೆಗೆ ಒಡಂಬಡಿಕೆ**

ಭಾರತದಲ್ಲಿ ವಿದ್ಯುತ್ ವಾಹನ ಮತ್ತು ಭವಿಷ್ಯದಲ್ಲಿ ಮೊಬಿಲಿಟಿ ಕ್ಷೇತ್ರದಲ್ಲಿ ಸಮರ್ಥ ಕಾರ್ಯಪಡೆಯನ್ನು ರೂಪಿಸುವ ಸಲುವಾಗಿ ಜೆಎಸ್ಎಸ್ ಮಹಾವಿದ್ಯಾಪೀಠ ಹಾಗೂ ಫ್ರಾನ್ಸ್ ದೇಶದ ಡಸಾಲ್ಟ್ ಸಿಸ್ಟಮೆಸ್ ಸಹಯೋಗದಲ್ಲಿ '3ಡಿ ಎಕ್ಸ್‌ಪೀರಿಯನ್ಸ್ ನಾವೀನ್ಯತಾ ಕೇಂದ್ರದ ಸ್ಥಾಪನೆಯ ಪರಸ್ಪರ ಒಡಂಬಡಿಕೆಗೆ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸೆಪ್ಟೆಂಬರ್ 28ರಂದು ಸಹಿ ಹಾಕಲಾಯಿತು.

ಪರಮಪೂಜ್ಯ ಜಗದ್ಗುರುಗಳವರು 3ಡಿ ಎಕ್ಸ್‌ಪೀರಿಯನ್ಸ್ ನಾವೀನ್ಯತಾ ಕೇಂದ್ರದ ಸ್ಥಾಪನೆಗಾಗಿ ಪ್ರಸ್ತುತ ಮಾಡಿಕೊಂಡಿರುವ ಒಡಂಬಡಿಕೆಯು ಮುಂದಿನ ಪೀಳಿಗೆಯು ಭವಿಷ್ಯದಲ್ಲಿ ಬೆಳೆಯಲು ಮತ್ತು ಜಬಾಬ್ದಾರಿಯುತ ನಾಗರಿಕರಾಗಿ ಮುಂದುವರಿಯಲು ಬೆಂಬಲವಾಗಿ ನಿಲ್ಲುತ್ತದೆ. ಸುಸ್ಥಿರ ವಾತಾವರಣವನ್ನು ನಿರ್ಮಿಸಲು ದಾರಿ ಮಾಡಿಕೊಡುತ್ತದೆ. ಈ ಕೇಂದ್ರವು ಇಂಗಾಲದ ಮಾಲಿನ್ಯವನ್ನು ಕಡಿಮೆ ಮಾಡಿ, ಹಸಿರು ಪರಿಸರದತ್ತ ಸಾಗಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಡಸಾಲ್ಟ್ ಸಿಸ್ಟಮೆಸ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎನ್.ಜಿ. ದೀಪಕ್‌ರವರು ಈ ನಾವೀನ್ಯತಾ ಕೇಂದ್ರವು ಭವಿಷ್ಯದ ಡಿಜಿಟಲ್ ಆರ್ಥಿಕತೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅಗತ್ಯವಾದ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದಲ್ಲದೇ ಹೊಸ ತಂತ್ರಜ್ಞಾನ ಮತ್ತು ಉತ್ಪನ್ನದ ಆವಿಷ್ಕಾರವನ್ನು ಬೆಂಬಲಿಸುವಲ್ಲಿ ಬಹುಮುಖ್ಯವಾದ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ಸಲಹೆಗಾರರಾದ ಪ್ರೊ. ಎಂ.ಎಚ್. ಧನಂಜಯ ಒಡಂಬಡಿಕೆಯ ಕುರಿತು ತಿಳಿಸಿದರು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಮತ್ತು

ನಿರ್ದೇಶಕರಾದ ಡಾ. ಬಿ. ಸುರೇಶ್‌ರವರುಗಳು ಮಾತನಾಡಿದರು. ಜಂಟಿ ನಿರ್ದೇಶಕರಾದ ಡಾ. ಎಚ್.ಆರ್. ಮಹದೇವಸ್ವಾಮಿ ಸ್ವಾಗತಿಸಿದರು. ಕುಲಪತಿಗಳಾದ ಡಾ. ಎ.ಎನ್. ಸಂತೋಷಕುಮಾರ್, ಪ್ರಾಂಶುಪಾಲರಾದ ಡಾ. ಎಸ್.ಬಿ. ಕಿವಡೆ ಮೊದಲಾದವರು ಉಪಸ್ಥಿತರಿದ್ದರು. ಡಾ. ಭೀಮಸೇನ್ ಸೊರಗಾಂವ್ ವಂದಿಸಿದರು.

**ಯುವ ವಕೀಲರು ಸದಾ ಅಧ್ಯಯನಶೀಲರಾಗಿರಬೇಕು**

ಯುವ ವಕೀಲರು ಸದಾ ಅಧ್ಯಯನಶೀಲರಾಗಿರಬೇಕು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಗೌ.ನ್ಯಾ. ಶ್ರೀ ಎ.ಎಸ್. ಬೋಪಣ್ಣರವರು ಅಕ್ಟೋಬರ್ 1ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜಿನ 14ನೇ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಬದಲಾಗುತ್ತಿರುವ ಜಗತ್ತಿನಲ್ಲಿ ಯುವ ವಕೀಲರು ಸಾಕಷ್ಟು ಆಧ್ಯಯನಶೀಲ ರಾಗಬೇಕು. ಸಾರ್ವಜನಿಕ ವಲಯದಲ್ಲಿ ಶಿಸ್ತು, ಸಂಯಮ ವೃತ್ತಿಗೌರವ ಪ್ರಾಮಾಣಿಕತೆ ಯೊಂದಿಗೆ ಕಕ್ಷಿದಾರರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಗಮನಹರಿಸಬೇಕು. ಜಗತ್ತಿನಲ್ಲಿ ಕಾನೂನು ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳು ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಸುತ್ತೂರು ಮಠದ ವತಿಯಿಂದ ಸ್ಥಾಪಿತವಾಗಿರುವ ಈ ಕಾನೂನು ಕಾಲೇಜು ಮತ್ತು ಇತರ ಶಿಕ್ಷಣ ಸಂಸ್ಥೆಗಳಲ್ಲೂ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವ ಅಂಶ ಈ ಸಮಾರಂಭದಿಂದ ತಿಳಿದುಬರುತ್ತದೆ ಎಂದರು.

ಹೈಕೋರ್ಟ್ ನ್ಯಾಯಮೂರ್ತಿಗಳಾದ ಗೌ.ನ್ಯಾ. ಶ್ರೀ ಪಿ.ಎಸ್. ದಿನೇಶ್ ಕುಮಾರ್ ಮಾತನಾಡಿದರು. ಪ್ರಶಸ್ತಿ ಪುರಸ್ಕೃತ ಪದವೀಧರರು ಹಾಗೂ ಪದವಿ ಪೂರೈಸಿದವರುಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಡಾ. ಸಿ.ಜಿ. ಬೆಟಸೂರಮಠ ಪ್ರತಿಜ್ಞಾ ವಿಧಿ ಬೋಧಿಸಿದರು. ಪ್ರೊ. ಕೆ.ಎಸ್. ಸುರೇಶ್ ಸ್ವಾಗತಿಸಿದರು. ಕು. ವಿದ್ಯಾ ಪಿ. ಹೆಗ್ಡೆ ಪ್ರಾರ್ಥಿಸಿದರು ಡಾ. ಎಸ್. ನಟರಾಜು ವಂದಿಸಿದರು. ಡಾ. ಶಿವಾನಂದ ಭಾರತಿ ಉಪಸ್ಥಿತರಿದ್ದರು. ಶ್ರೀ ಎ.ಟಿ. ಜಗದೀಶ್ ಕಾರ್ಯಕ್ರಮ ನಿರೂಪಿಸಿದರು.

**ಸಮಸ್ಯೆಗಳು ಬಂದಾಗ ದುಶ್ಚಟಗಳಿಗೆ ಬಲಿಯಾಗಬೇಡಿ**

ಜೀವನದಲ್ಲಿ ಏನೇ ಸಮಸ್ಯೆ ಎದುರಾದರೂ ದುಶ್ಚಟಗಳಿಗೆ ದಾಸರಾಗದೆ ತಾಳ್ಮೆಯಿಂದ ಉತ್ತಮ ಜೀವನ ರೂಪಿಕೊಂಡಾಗ ಮಾತ್ರ ಬದುಕನ್ನು ಯಶಸ್ವಿಯಾಗಿ ನಡೆಸಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 3ರಂದು ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ 10 ದಿನಗಳು ಹೆಚ್.ಡಿ. ಕೋಟೆಯ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಆಯೋಜಿಸಿದ್ದ ಕುಡಿತ ಬಿಡಿಸುವ 13ನೇ ಉಚಿತ ಶಿಬಿರದ ಸಮಾರೋಪ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಮದ್ಯಪಾನ ಮನುಷ್ಯನನ್ನು ಸುಲಭವಾಗಿ ದುರ್ಮಾರ್ಗಕ್ಕೆ

ದೂಡುತ್ತದೆ. ಕುಟುಂಬದ ನಿರ್ವಹಣೆ ಮತ್ತು ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತದೆ. ವ್ಯಸನದಿಂದ ಹೊರಬರಲು ಒಳ್ಳೆಯ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಬಿ. ತುಬಾಕಿರವರು ನಮ್ಮ ದೇಶ, ನ್ಯಾಯ, ನೀತಿ, ಧರ್ಮದ ನೆಲೆಗಟ್ಟಿನಲ್ಲಿ ಕಟ್ಟಿದ ದೇಶವಾಗಿದೆ. ಈಗಲೂ ದೇಶದ ಜನರು ಧರ್ಮದ ನೆಲೆಗಟ್ಟಿನಲ್ಲೇ ಬದುಕುತ್ತಿದ್ದಾರೆ. ಆದರೆ ಪಾಶ್ಚಿಮಾತ್ಯ ಸಂಸ್ಕೃತಿ ನುಸುಳಿ ಹೊಸವರ್ಷ, ಹುಟ್ಟುಹಬ್ಬ ಮುಂತಾದ ಕಾರ್ಯಕ್ರಮಗಳು ಕುಡಿತದ ದಿನಗಳಾಗಿ ಮಾರ್ಪಾಡುಗುತ್ತಿವೆ. ಒಬ್ಬರಿಗೊಬ್ಬರು ಸಹಾಯಹಸ್ತ ಚಾಚುವ ಮೂಲಕ ಉತ್ತಮ ಬದುಕು ನಡೆಸುವ ಅಗತ್ಯವಿದೆ ಎಂದರು.

ಪಡವಲು ಮಠ, ದಡದಹಳ್ಳಿ, ಮಾದಾಪುರ, ಹುಲಿಯೂರುದುರ್ಗ, ಚುಂಚನಹಳ್ಳಿ ಮಠಗಳ ಶ್ರೀಗಳು ಹಾಗೂ. ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರಾದ ಶ್ರೀ ಕೋಟೆ ಎಂ. ಶಿವಣ್ಣ ಪಾಲ್ಗೊಂಡಿದ್ದರು. ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದು ಅಧ್ಯಕ್ಷತೆ ವಹಿಸಿದ್ದರು ಶ್ರೀ ಪರಶಿವಮೂರ್ತಿ ಪ್ರಾರ್ಥಿಸಿದರು. ಶ್ರೀ ಗಿರೀಶ್‌ಮೂರ್ತಿ ಸ್ವಾಗತಿಸಿದರು. ಶ್ರೀ ಬಿ.ವಿ. ಬಸವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಸ್ವಾಮಿ ವರದಿ ಮಂಡಿಸಿದರು. ಶಿಬಿರಾರ್ಥಿಗಳಾದ ಶ್ರೀ ಪಾಲಾಕ್ಷ, ಶ್ರೀ ಶಿವಣ್ಣೇಗೌಡ, ಶ್ರೀ ಪರಶಿವಮೂರ್ತಿ, ಶ್ರೀ ಲಿಂಗರಾಜು, ಶ್ರೀ ಸಿದ್ದಪ್ಪ ನರಗುಂದ ಅನಿಸಿಕೆ ಹಂಚಿಕೊಂಡರು. ಹಿಂದಿನ ಶಿಬಿರದಲ್ಲಿ ಭಾಗವಹಿಸಿದ್ದ ಶ್ರೀ ಕಾಂತರಾಜು, ಶ್ರೀ ಮಹೇಶ್ ಹಾಗೂ ಶ್ರೀ ರಮೇಶ್ ಅಭಿಪ್ರಾಯ ತಿಳಿಸಿದರು. ಡಾ. ನಾಗೇಂದ್ರ ವಂದಿಸಿದರು. ಡಾ. ಎಂ.ಪಿ. ಸೋಮಶೇಖರ್ ಕಾರ್ಯಕ್ರಮ ನಿರೂಪಿಸಿದರು.

**ಮಹಿಳೆಯರು ಆತ್ಮವಿಶ್ವಾಸ ಬೆಳೆಸಿಕೊಳ್ಳುವುದು ಅಗತ್ಯ**

ಇಂದಿನ ಮಹಿಳೆಯರು ಆತ್ಮವಿಶ್ವಾಸ ಬೆಳೆಸಿಕೊಳ್ಳುವುದು ಅಗತ್ಯವಿದೆ ಎಂದು ಅದಮ್ಯ ಚೇತನ ವ್ಯವಸ್ಥಾಪಕ ಟ್ರಸ್ಟಿಗಳಾದ ಡಾ. ತೇಜಸ್ವಿನಿ ಅನಂತಕುಮಾರ್‌ರವರು ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಖಿಲ ಭಾರತ ಸರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆಯು ಅಕ್ಟೋಬರ್ 10ರಂದು ಪರಮಪೂಜ್ಯ ಜಗದ್ಗುರುಗಳವರು ಮತ್ತು ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಮೈಸೂರು ಜಿಲ್ಲಾ ಕದಳಿ ಮಹಿಳಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಮಹಿಳೆಯರು ಸಮಾಜದ ಬದಲಾವಣೆಯನ್ನು ಗುರುತಿಸಿಕೊಂಡು ನಾವು ಹೇಗೆ ಮುನ್ನಡೆಯಬೇಕು ಎಂಬುದನ್ನು ತಿಳಿಯಬೇಕು. ಸಣ್ಣ ಬದಲಾವಣೆ ಕೂಡ ದೊಡ್ಡ ಸಮಸ್ಯೆಗಳನ್ನು ನಿವಾರಿಸುತ್ತವೆ. ಇಂದು ಬಹುದೊಡ್ಡ ಪಿಡುಗಾಗಿರುವ ಪರಿಸರ ಮಾಲಿನ್ಯವನ್ನು ತಡೆಯುವ ನಿಟ್ಟಿನಲ್ಲಿ ಮಹಿಳೆಯರು ಮನೆಯಲ್ಲಿ ಏನೆಲ್ಲ ಸಾಧ್ಯವೋ ಅಂತಹ ಬದಲಾವಣೆಗಳನ್ನು ಮಾಡಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಹಿರಿಯ ಸಾಹಿತಿಗಳಾದ ಡಾ. ಗೊ.ರು. ಚನ್ನಬಸಪ್ಪನವರು 'ಧಾರಿಣಿ' ಸವಿ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಮಲೆಯೂರು ಗುರುಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಸುಶೀಲಾ ಸೋಮಶೇಖರ್, ಶ್ರೀ ಹೆಳವರಹುಂಡಿ ಸಿದ್ದಪ್ಪ, ಶ್ರೀ ಮ.ಗು. ಸದಾನಂದಯ್ಯ ಉಪಸ್ಥಿತರಿದ್ದರು. ಶ್ರೀಮತಿ ಶೈಲಾ ಸಿದ್ಧರಾಮಪ್ಪ ಪ್ರಾರ್ಥಿಸಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ಸ್ವಾಗತಿಸಿದರು. ಶ್ರೀಮತಿ ವಿಮಲಾಮೂರ್ತಿ ವಂದಿಸಿದರು. ಶ್ರೀಮತಿ ಸುಧಾ ಮೃತ್ಯುಂಜಯಪ್ಪ ಕಾರ್ಯಕ್ರಮ ನಿರೂಪಿಸಿದರು.

## ಹೃದಯದಲ್ಲೇ ದೇವರಿದ್ದಾನೆ

ಮನೆಯಲ್ಲಿ ದೇವರ ಮನೆ ಇರುವಂತೆ ಮನುಷ್ಯನ ಹೃದಯದಲ್ಲೇ ದೇವರಿದ್ದಾನೆ ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 10ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಗಬಾಳದ ಶ್ರೀ ಸೋಮೇಶ್ವರ ಸ್ವಾಮಿ ನೂತನ ದೇವಾಲಯ, ರಾಜಗೋಪುರ, ವಿಮಾನಗೋಪುರ ಸಂಪ್ರೋಕ್ಷಣ ಮತ್ತು ಮಹಾಕುಂಭಾಭೀಷೇಕ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಈ ದೇವಾಲಯ ಪುರಾತನವಾಗಿದ್ದು, ಚೋಳರ ಕಾಲದಲ್ಲಿ ನಿರ್ಮಿಸಿದ ಕುರುಹುಗಳು ಇಲ್ಲಿವೆ. ಭಗವಂತ ಜಗತ್ತನ್ನೆಲ್ಲಾ ಆವರಿಸಿ ಅವ್ಯಕ್ತನಾಗಿ ಅನೇಕ ರೂಪಗಳಲ್ಲಿ ಇರುತ್ತಾನೆ. ಎಲ್ಲರೂ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯಬೇಕು. ಸಂತರು ಋಷಿಗಳು ದೇವಾಲಯಗಳನ್ನು ದೇವರ ಧ್ಯಾನಕ್ಕಾಗಿ ನೆಮ್ಮದಿಯ ತಾಣಗಳಾಗಿ ಕಂಡುಕೊಂಡಿದ್ದರು ಎಂದು ಹೇಳಿದರು.

ಸಚಿವರಾದ ಶ್ರೀ ಎಂ.ಟಿ.ಬಿ. ನಾಗರಾಜುರವರು ಭಕ್ತರು ದೈಹಿಕ ಮತ್ತು ಮಾನಸಿಕ ಆರೋಗ್ಯದ ಹಿತದೃಷ್ಟಿಯಿಂದ ಭಕ್ತಿ ಶ್ರದ್ಧೆಯಿಂದ ಪೂಜೆ ಮಾಡಬೇಕು. ಆಗ ಸುಖ, ಶಾಂತಿ, ನೆಮ್ಮದಿಯಿಂದ ಜೀವಿಸಬಹುದು. ಶ್ರೀ ಸೋಮೇಶ್ವರ ಸ್ವಾಮಿ ದೇವಾಲಯ ಇತಿಹಾಸ ಪ್ರಸಿದ್ಧವಾಗಿದ್ದು, 500 ವರ್ಷಗಳ ಹಿಂದೆ ವಿಜಯನಗರ ಅರಸ ವೀರಬಲ್ಲಾಳರ ಕಾಲದಲ್ಲಿ ನಿರ್ಮಿತವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಬೆಳ್ಳಾವಿ ಶ್ರೀಗಳು, ತಹಶೀಲ್ದಾರರಾದ ಶ್ರೀ ಕೆ.ಎನ್. ಮಹೇಶ್ ಕುಮಾರ್, ಶ್ರೀ ಶಂಕರ ಸ್ಥಪತಿ ಉಪಸ್ಥಿತರಿದ್ದರು. ಶ್ರೀ ಎನ್.ಆರ್. ಜ್ಞಾನಮೂರ್ತಿ ಪ್ರಾರ್ಥನೆ ಸಲ್ಲಿಸಿದರು. ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಸ್ವಾಗತಿಸಿದರು. ಶ್ರೀ ಮಂಜುನಾಥ್ ಶ್ರಾಫ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ವೀರಸ್ವಾಮಿಗೌಡ ವಂದಿಸಿದರು.

## ನೀರು ಬಹಳ ಅಮೂಲ್ಯ : ಅರಿತು ಬಳಸಿ

ನೀರು ಬಹಳ ಅಮೂಲ್ಯವಾದುದು. ಅದರ ಮಹತ್ವವನ್ನು ಎಲ್ಲರೂ ಅರಿತು ಬಳಸಬೇಕಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿಗಳು ಹಾಗೂ ರಾಜ್ಯಸಭಾ

ಸದಸ್ಯರಾದ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಅಕ್ಟೋಬರ್ 14ರಂದು ಪರಮಪೂಜ್ಯ ಜಗದ್ಗುರುಗಳವರು ಮತ್ತು ಶ್ರೀ ಆದಿಚುಂಚನಗಿರಿ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು ಅಂಬಿಗರಹಳ್ಳಿ, ಸಂಗಾಪುರ, ಪುರ ಗ್ರಾಮಗಳ ಸಮೀಪದ ತ್ರಿವೇಣಿ ಸಂಗಮದಲ್ಲಿ ಶ್ರೀ ಮಲೆ ಮಹದೇಶ್ವರ ಮಹಾಕುಂಭಮೇಳ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ನೀರಿನ ಮಿತಿಮೀರಿದ ಬಳಕೆಯಿಂದ ಪ್ರಕೃತಿ ಎಚ್ಚರಿಕೆಯ ಗಂಟೆಯನ್ನು ಮೊಳಗಿಸಿದೆ. ಎಲ್ಲೆಡೆ ಮಳೆಯಾಗಿ ಅತಿವೃಷ್ಟಿ ಸಂಭವಿಸಿದೆ. ಆ ನೀರನ್ನು ಹೇಗೆ ಉಳಿಸಿಕೊಂಡು ಬಳಸುತ್ತೇವೆ ಎನ್ನುವುದು ಮುಖ್ಯವಾಗುತ್ತದೆ. ಅನಾವೃಷ್ಟಿ ಸಂಭವಿಸಿದ ಸಂದರ್ಭದಲ್ಲಿ ಪ್ರತಿ ಹನಿ ನೀರಿನ ಬೆಲೆ ನಮಗೆ ತಿಳಿದಿದೆ. ಜೀವಜಲಕ್ಕೆ ನಮ್ಮ ಸಂಸ್ಕೃತಿಯಲ್ಲಿ ಮಹತ್ವದ ಸ್ಥಾನವಿದೆ. ಜಲದಿಂದ ಜೀವವನ್ನು ಉಳಿಸಿಕೊಂಡು ಬದುಕುತ್ತಿರುವ ನಾವೆಲ್ಲರೂ ಅದಕ್ಕೆ ಕೃತಜ್ಞತೆ ಸಲ್ಲಿಸಬೇಕು. ಕುಂಭಮೇಳದ ಮೂಲ ಉದ್ದೇಶವೇ ಜಲಶಕ್ತಿಗೆ ಗೌರವ ಸಮರ್ಪಣೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಮುಕ್ತಿದಾನಂದಜೀ, ಕಾಗಿನೆಲೆ ಕನಕ ಗುರುಪೀಠದ ಕೆ.ಆರ್. ನಗರದ ಶ್ರೀ ಶಿವಾನಂದಪುರಿ ಸ್ವಾಮಿಗಳು ಮತ್ತು ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಸಚಿವರಾದ ಶ್ರೀ ಕೆ. ಗೋಪಾಲಯ್ಯ, ಡಾ. ಸಿ.ಎನ್. ಅಶ್ವಥ್ ನಾರಾಯಣ್ ಮತ್ತು ಶ್ರೀಮತಿ ಶಶಿಕಲಾ ಜೊಲ್ಲೆಯವರುಗಳು ಮಾತನಾಡಿದರು. ಡಾ. ಕೆ.ಸಿ. ನಾರಾಯಣಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಬೇಬಿಮಠದ ಡಾ. ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳು, ಜಿಲ್ಲಾ ಪಂಚಾಯತಿ ಸಿಇಒ ಶ್ರೀಮತಿ ಶಾಂತಾ ಹುಲ್ಮನಿ, ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಎನ್. ಯತೀಶ್, ತಹಸೀಲ್ದಾರರಾದ ಶ್ರೀಮತಿ ರೂಪ, ಅಂಬಿಗರಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ಸಣ್ಣಸ್ವಾಮಿಗೌಡ ಉಪಸ್ಥಿತರಿದ್ದರು. ಜಿಲ್ಲಾಧಿಕಾರಿಗಳಾದ ಶ್ರೀಮತಿ ಎಸ್. ಅಶ್ವಥಿ ಸ್ವಾಗತಿಸಿದರು. ಉಪವಿಭಾಗಾಧಿಕಾರಿಗಳಾದ ಶ್ರೀ ಬಿ.ಸಿ. ಶಿವಾನಂದಮೂರ್ತಿ ವಂದಿಸಿದರು. ಶ್ರೀ ಶಂಕರ್ ಪ್ರಕಾಶ್ ಮತ್ತು ಶ್ರೀಮತಿ ದಿವ್ಯ ಆಲೂರು ಕಾರ್ಯಕ್ರಮ ನಿರೂಪಿಸಿದರು.

### ಅಂತರಂಗದಿಂದ ಭಗವಂತನನ್ನು ಆರಾಧಿಸಬೇಕು

ಅಂತರಂಗದಿಂದ ಭಗವಂತನನ್ನು ಪ್ರೀತಿಪೂರ್ವಕವಾಗಿ ಆರಾಧಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 16ರಂದು ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕು ಅಂಬಿಗರಹಳ್ಳಿ, ಸಂಗಾಪುರ, ಪುರ ಗ್ರಾಮಗಳ ಸಮೀಪದ ತ್ರಿವೇಣಿ ಸಂಗಮದಲ್ಲಿ ಏರ್ಪಡಿಸಿದ್ದ ಶ್ರೀ ಮಲೆ ಮಹದೇಶ್ವರ ಮಹಾಕುಂಭಮೇಳದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಭಗವಂತ ಮತ್ತು ಭಕ್ತನ ಸಂಬಂಧ ತಂದೆ ಮತ್ತು ಮಗುವಿನ ಸಂಬಂಧವಿದ್ದಂತೆ. ಭಕ್ತ ಭಂಗವಂತನಲ್ಲಿ ಶ್ರದ್ಧೆ ಮತ್ತು

ನಂಬಿಕೆಯನ್ನಿಡಬೇಕು. ಪುಣ್ಯಕ್ಷೇತ್ರಗಳು ಭಕ್ತಿ ಸಂಪನ್ನತೆಯನ್ನು ಬೆಳೆಸುತ್ತವೆ. ಭಾರತೀಯರು ಸಂಸ್ಕಾರಯುತವಾದ ಜೀವನ ನಡೆಸುವಂಥವರು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸಾಕಷ್ಟು ಪುಣ್ಯಕ್ಷೇತ್ರಗಳಿವೆ. ಅವೆಲ್ಲವುಗಳು ಪವಿತ್ರವಾದ ಭಾವನೆಯನ್ನು ಮೂಡಿಸುತ್ತವೆ. ಅಂತಹ ಕ್ಷೇತ್ರಗಳಲ್ಲಿ ಅಂಬಿಗರಹಳ್ಳಿಯ ತ್ರಿವೇಣಿ ಸಂಗಮವೂ ಒಂದು. ಲೋಕ ಸಂಚಾರಿಗಳಾದ ಶ್ರೀ ಮಲೆ ಮಹದೇಶ್ವರರು ಆಗಮಿಸಿ ಮೊದಲು ಪಾದ ಸ್ಪರ್ಶ ಮಾಡಿದ ಸ್ಥಳ ಎಂಬ ಪ್ರತೀತಿ ಈ ಸಂಗಮ ಸ್ಥಳಕ್ಕಿದೆ. ದಕ್ಷಿಣ ಭಾರತದ ಎರಡನೇ ಮಹಾಕುಂಭಮೇಳ ಇಲ್ಲಿ ಜರುಗುತ್ತಿರುವುದು ಸಂತೋಷದ ಸಂಗತಿ ಎಂದು ಹೇಳಿದರು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಪ್ರತಿ 12 ವರ್ಷಗಳಿಗೊಮ್ಮೆ ಮಹಾಕುಂಭಮೇಳ ನಿಗದಿತವಾಗಿ ನಡೆಯಲು ಸರ್ಕಾರಿ ಆದೇಶ ಹೊರಡಿಸಲಾಗುವುದು. ಕಾವೇರಿ, ಲಕ್ಷ್ಮಣತೀರ್ಥ, ಹೇಮಾವತಿ ಮೂರು ಪವಿತ್ರ ನದಿಗಳ ಸಂಗಮದ ಪುಣ್ಯಸ್ಥಳ ತ್ರಿವೇಣಿ ಸಂಗಮದಲ್ಲಿ ಈ ವರ್ಷ ಮಹಾಕುಂಭಮೇಳ ಪರಮಪೂಜ್ಯರುಗಳ ನೇತೃತ್ವದಲ್ಲಿ ಬಹಳ ಉತ್ತಮವಾಗಿ ನಡೆದಿದೆ. ವೈಶಿಷ್ಟ್ಯಪೂರ್ಣ ದೇಶವಾದ ಭಾರತದಲ್ಲಿ ನಡೆದಂತಹ ಭಕ್ತಿ ಚಳವಳಿ ಬೇರೆ ಯಾವ ದೇಶದಲ್ಲಿಯೂ ಆಗಿಲ್ಲ. ಸಾಮಾಜಿಕ ಸಂಬಂಧಗಳನ್ನು ವೃದ್ಧಿ ಮಾಡಿರುವ ಮೌಲ್ಯಗಳನ್ನು ಕಟ್ಟಿಕೊಟ್ಟಿರುವ ಮಹಾನ್ ಬದುಕು ಭಾರತದಲ್ಲಿದೆ. ಇದನ್ನು ಉಳಿಸಿಕೊಳ್ಳುವುದು ಮುಖ್ಯ. ನಮ್ಮ ಸಂಸ್ಕಾರ, ಸಂಸ್ಕೃತಿ, ಧರ್ಮ, ಪರಂಪರೆಯನ್ನು ಒಡೆದು ನಾಶ ಮಾಡಬೇಕೆಂದು ಅನೇಕ ದಾಳಿಗಳಾಗಿವೆ. ಈ ದಾಳಿಯನ್ನು ಸಂಪೂರ್ಣವಾಗಿ ಎದುರಿಸಿ ಭಾರತಾಂಬೆ ಸುಸಂಸ್ಕೃತ ಜನರನ್ನು ಎತ್ತಿ ಹಿಡಿದಿದ್ದಾಳೆ ಎಂದು ತಿಳಿಸಿದರು.

ಶ್ರೀ ಆದಿಚುಂಚನಗಿರಿ ಮಠದ ಜಗದ್ಗುರು ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಮನುಷ್ಯನಿಗೆ ಕಷ್ಟ ಬರುವುದು ಸಹಜ. ಕಷ್ಟದ ಸಮಯದಲ್ಲಿ ನಿಂತಲ್ಲೇ ನಿಲ್ಲದೆ ನದಿಯ ನೀರಿನಂತೆ ಮುಂದೆ ಸಾಗಿದರೆ ಕಷ್ಟಗಳು ಪರಿಹಾರವಾಗುತ್ತವೆ. ಮನುಷ್ಯ ಪಂಚಭೂತಗಳಿಂದ ನಿರ್ಮಾಣವಾಗಿದ್ದಾನೆ. ಹಾಗಾಗಿ ಪ್ರಕೃತಿಯನ್ನು ಪೂಜಿಸುತ್ತ ಬಂದಿದ್ದಾನೆ. ಪ್ರಕೃತಿಯನ್ನು ಪೂಜಿಸಿದರೆ ನಮ್ಮ ಬದುಕು ಸ್ವಚ್ಛವಾಗಿರುತ್ತದೆ. ತ್ರಿವೇಣಿ ಸಂಗಮ ಮಹದೇಶ್ವರರ ತಪೋಭೂಮಿ. ಭಾರತಕ್ಕೆ ಆಧ್ಯಾತ್ಮಿಕತೆ ಮತ್ತು ಧಾರ್ಮಿಕತೆಯೇ ಶಕ್ತಿ ಎಂದು ತಿಳಿಸಿದರು.

ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳು ಪ್ರಕೃತಿಯನ್ನು ಮಾತೆಯಂತೆ ಪೂಜಿಸುವುದು ನಮ್ಮ ಸಂಸ್ಕೃತಿ, ಅದನ್ನು ಯಾವಾಗಲೂ ಜಾಗೃತವಾಗಿಟ್ಟುಕೊಳ್ಳಬೇಕು. ನೆಲ, ಜಲವನ್ನು ತಾಯಿಯಂತೆ ಪ್ರೀತಿಸಬೇಕು. ಶರೀರದ ಕೊಳೆ ಹೋಗುವಂತೆ ಮನದ ಕೊಳೆಯನ್ನು ತೊಳೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಹಿಂದೂ ಧರ್ಮ ಆಚಾರ್ಯ ಸಭಾದ ಶ್ರೀ ಪರಮಾತ್ಮಾನಂದ ಸರಸ್ವತಿ ಸ್ವಾಮಿಗಳು ಸಂಸದರಾದ ಶ್ರೀಮತಿ ಸುಮಲತಾ ಅಂಬರೀಶ್, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಸಿ.ಟಿ ರವಿ ಮಾತನಾಡಿದರು. ಸಚಿವರಾದ ಡಾ. ಕೆ.ಸಿ. ನಾರಾಯಣಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಂದ್ರವನ ಆಶ್ರಮದ ಡಾ. ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮಿಗಳು, ಶ್ರೀ ಸಾಲೂರು ಬೃಹನ್ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಮಾದರ ಚೆನ್ನಯ್ಯ ಗುರುಪೀಠದ ಡಾ. ಶ್ರೀ ಬಸವಮೂರ್ತಿ ಮಾದರ ಚೆನ್ನಯ್ಯ ಸ್ವಾಮಿಗಳು, ಸಚಿವರಾದ ಶ್ರೀ ಕೆ. ಗೋಪಾಲಯ್ಯ, ಶ್ರೀ ಬಿ.ಸಿ. ನಾಗೇಶ್, ಶ್ರೀ ಬಿ.ಎ ಬಸವರಾಜ, ಶಾಸಕರಾದ ಶ್ರೀ ಸಿ.ಎಸ್. ನಿರಂಜನ್ ಕುಮಾರ್, ಶ್ರೀ ಬಿ. ಹರ್ಷವರ್ಧನ್, ಜಿ.ಪಂ. ಸಿಇಒ ಶ್ರೀಮತಿ ಶಾಂತ ಎಲ್. ಹುಲ್ಮನಿ, ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಎನ್. ಯತೀಶ್, ಪ್ರಾದೇಶಿಕ ಆಯುಕ್ತರಾದ ಡಾ. ಜಿ.ಸಿ.ಪ್ರಕಾಶ್, ತಹಶೀಲ್ದಾರರಾದ ಶ್ರೀಮತಿ ಎಂ.ವಿ. ರೂಪ ಉಪಸ್ಥಿತರಿದ್ದರು. ಡಾ. ಅನರ್ಘ್ಯ ಮಾರಪಳ್ಳಿ ಮತ್ತು ಡಾ. ಸಂಜನಾ ಶ್ರೀನಿವಾಸ್ ಪ್ರಾರ್ಥನೆ ಸಲ್ಲಿಸಿದರು. ಜಿಲ್ಲಾಧಿಕಾರಿಗಳಾದ ಶ್ರೀಮತಿ ಎಸ್. ಅಶ್ವಥಿ ಸ್ವಾಗತಿಸಿದರು. ಉಪವಿಭಾಗಾಧಿಕಾರಿಗಳಾದ ಶ್ರೀ ಬಿ.ಸಿ ಶಿವಾನಂದಮೂರ್ತಿ ವಂದಿಸಿದರು. ಶ್ರೀಮತಿ ದಿವ್ಯ ಆಲೂರು ಕಾರ್ಯಕ್ರಮ ನಿರೂಪಿಸಿದರು.

## ಸ್ವಂತ ಆಸ್ತಿ ಮಾರಿ ಸಮಾಜಕ್ಕೆ ಧಾರೆ ಎರೆದ ಗುಬ್ಬಿ ತೋಟದಪ್ಪನವರು

ಆರ್ಥಿಕವಾಗಿ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ಅಕ್ಷರ ಮತ್ತು ಅನ್ನ ದಾಸೋಹಕ್ಕಾಗಿ ತಮ್ಮ ಸ್ವಂತ ಆಸ್ತಿಯನ್ನು ಮಾರಿ, ಅದರಿಂದ ಬಂದ ಹಣವನ್ನು ಸಮಾಜಕ್ಕೆ ಧಾರೆ ಎರೆದವರು ಶ್ರೀ ಗುಬ್ಬಿ ತೋಟದಪ್ಪನವರು ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 17ರಂದು ಕೆ.ಆರ್. ನಗರದಲ್ಲಿ ವೀರಶೈವ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಚಾರಿಟಬಲ್ ಟ್ರಸ್ಟ್‌ನ ವೀರಶೈವ ವಿದ್ಯಾರ್ಥಿನಿಯರ ವಸತಿ ನಿಲಯದ ನೂತನ ಕಟ್ಟಡದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಲಕ್ಷಾಂತರ ಮಂದಿ ವಿದ್ಯಾರ್ಥಿಗಳು ಜ್ಞಾನದ ಬೆಳಕು ಪಡೆಯಲು ಅವಕಾಶ ಕಲ್ಪಿಸಿಕೊಟ್ಟ ತೋಟದಪ್ಪ ನವರಂತಹವರನ್ನು ಸ್ಮರಿಸಬೇಕು. ಧರ್ಮದ ಮೂಲ ಉದ್ದೇಶವೇ ಸಮಾಜ ಸೇವೆ ಮಾಡುವುದಾಗಿದೆ. ಸೇವಾಗುಣವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕೆಂದು ತಿಳಿಸಿದರು.

ಮಾಜಿ ಸಚಿವರು ಮತ್ತು ಶಾಸಕರಾದ ಶ್ರೀ ಸಾ.ರಾ.ಮಹೇಶ್, ಶ್ರೀ ಎ.ಎಚ್. ವಿಶ್ವನಾಥ್, ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಲ್. ರೇವಣಸಿದ್ದಯ್ಯ, ಟ್ರಸ್ಟ್ ಅಧ್ಯಕ್ಷರಾದ ವೈ.ಎನ್. ಚಂದ್ರಶೇಖರ್‌ರವರುಗಳು ಮಾತನಾಡಿದರು. ಬೆಟ್ಟದಪುರ, ಮಾದಹಳ್ಳಿ, ಗಾವಡಗೆರೆ, ಅರಕೆರೆ, ಅಂಕನಹಳ್ಳಿ, ಸರಗೂರು,

ಎಲೆಮುದ್ದನಹಳ್ಳಿ ಶ್ರೀಗಳು, ಲಾಳನಹಳ್ಳಿ ಮಾತಾಜಿ, ವಿಧಾನಪರಿಷತ್ ಮಾಜಿ ಸದಸ್ಯರಾದ ಶ್ರೀ ತೋಂಟದಾರ್ಯ, ಪುರಸಭೆ ಸದಸ್ಯರಾದ ಶ್ರೀಮತಿ ವೀಣಾ ವೃಷಭೇಂದ್ರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಶ್ರೀ ಮಹೇಶ್, ಶ್ರೀಮತಿ ಬಿಂದ್ಯಾ ಮೊದಲಾದವರು ಉಪಸ್ಥಿತರಿದ್ದರು.

**ಪರಿಶ್ರಮದಿಂದ ಓದಿ ವಿದ್ಯಾರ್ಥಿಗಳು ಔನ್ನತ್ಯವನ್ನು ಸಾಧಿಸಬೇಕು**

ಪರಿಶ್ರಮದಿಂದ ಓದಿ ವಿದ್ಯಾರ್ಥಿಗಳು ಔನ್ನತ್ಯವನ್ನು ಸಾಧಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 19ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ ಡಾ. ವಸಂತ್ ಬೆಟ್‌ಕೆರೂರ್ ಮತ್ತು ಡಾ. ಮಂಗಳ ಬೆಟ್‌ಕೆರೂರ್‌ರವರು ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಸ್ಥಾಪಿಸಿರುವ ದತ್ತಿನಿಧಿಯ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಅಮೆರಿಕದಂತಹ ದೇಶಗಳಲ್ಲಿ ವಿದ್ಯಾರ್ಥಿಗಳು ಅವರೇ ಸ್ವತಃ ದುಡಿದು ತಮ್ಮ ವಿದ್ಯಾಭ್ಯಾಸದ ಖರ್ಚನ್ನು ಭರಿಸಿಕೊಳ್ಳಲು ಇಚ್ಛಿಸುತ್ತಾರೆ. ಭಾರತದಲ್ಲಿ ವಿದ್ಯಾರ್ಥಿಗಳಿಗೆ ಓದುವ ಆಸಕ್ತಿಯಿರುತ್ತದೆ ಆದರೆ ಪೋಷಕರುಗಳು ಆರ್ಥಿಕವಾಗಿ ಸದೃಢರಾಗಿರುವುದಿಲ್ಲ. ಹೀಗಾಗಿ ಅನೇಕ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸುತ್ತಾರೆ. ಅಂತಹ ಸ್ಥಿತಿ ಉಂಟಾಗಬಾರದೆಂದು ಡಾ. ವಸಂತ್ ಬೆಟ್‌ಕೆರೂರ್ ಮತ್ತು ಡಾ. ಮಂಗಳ ಬೆಟ್‌ಕೆರೂರ್‌ರಂತಹ ಉದಾರ ಮನೋಭಾವವುಳ್ಳ ದಾನಿಗಳು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿಯೇ ದತ್ತಿನಿಧಿ ಸ್ಥಾಪಿಸಿದ್ದಾರೆ. ಓದಿಗೆ ಬಡತನದಂತಹ ಸಮಸ್ಯೆಗಳು ಎಂದಿಗೂ ಅಡ್ಡಿಬರಬಾರದು. ಬಡತನದಲ್ಲಿಯೇ ಓದಿ ಉನ್ನತ ಸ್ಥಾನವನ್ನು ಗಳಿಸಿದ ಅನೇಕ ನಿದರ್ಶನಗಳು ಕಣ್ಣಮುಂದೆಯೇ ಇವೆ. ರಾಜೇಂದ್ರ ಶ್ರೀಗಳು ನಿರಾಶ್ರಿತರಿಗೆ, ವಿದ್ಯಾರ್ಥಿಗಳಿಗೆ ಆಶ್ರಯವನ್ನು ಕಲ್ಪಿಸಿ ವಿದ್ಯಾಭ್ಯಾಸ ಮಾಡಲು ಅವಕಾಶ ಕಲ್ಪಿಸಿಕೊಟ್ಟರು. ಅಂತಹ ವಿದ್ಯಾರ್ಥಿಗಳು ಇಂದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಗಳಿಸಿದ್ದಾರೆ. ದೊರೆತ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಓದುವ ಆಕಾಂಕ್ಷೆ ವಿದ್ಯಾರ್ಥಿಗಳಲ್ಲಿ ಬಲವಾಗಿರಬೇಕು ಎಂದು ಹೇಳಿದರು. ದತ್ತಿ ಸ್ಥಾಪಿಸಿದ ಡಾ. ವಸಂತ್ ಬೆಟ್‌ಕೆರೂರ್ ಮತ್ತು ಡಾ. ಮಂಗಳ ಬೆಟ್‌ಕೆರೂರ್‌ರವರನ್ನು ಅಭಿನಂದಿಸಿದರು.

ದತ್ತಿದಾನಿಗಳಾದ ಡಾ. ವಸಂತ್ ಬೆಟ್‌ಕೆರೂರ್ ಮತ್ತು ಡಾ. ಮಂಗಳ ಬೆಟ್‌ಕೆರೂರ್‌ರವರು ಮನುಷ್ಯನಿಗೆ ಶಿಕ್ಷಣ ಬಹಳ ಮುಖ್ಯ. ಶಿಕ್ಷಣದಿಂದಲೇ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ. ನಮ್ಮ ಯಶಸ್ಸಿನ ನಂತರ ಇನ್ನೊಬ್ಬರಿಗೆ ಸಹಾಯ ಮಾಡುವ ಮನೋಭಾವವನ್ನು ನಾವು ಬೆಳೆಸಿಕೊಳ್ಳಬೇಕು. ಗಳಿಸಿದ ಹಣವನ್ನು ನಾವು ಕಳೆದುಕೊಳ್ಳಬಹುದು ಆದರೆ ಸಂಪಾದಿಸಿದ ವಿದ್ಯೆಯನ್ನು ನಾವು ಎಂದಿಗೂ

ಕಳೆದುಕೊಳ್ಳುವುದಿಲ್ಲ. ವಿದ್ಯಾರ್ಥಿಗಳಿಗೆ ನೆರವಾಗಲು ಅವಕಾಶ ಮಾಡಿಕೊಟ್ಟ ಪೂಜ್ಯರಿಗೆ ನಾವು ಆಭಾರಿಗಳಾಗಿದ್ದೇವೆ. ವಿದ್ಯಾರ್ಥಿಗಳು ಉನ್ನತ ಗುರಿಯನ್ನಿಟ್ಟುಕೊಂಡು ಉತ್ತಮ ಅಧ್ಯಯನ ಮಾಡಬೇಕು. ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಜೀವನವನ್ನು ವಿಕಾಸಗೊಳಿಸಿಕೊಳ್ಳಬೇಕು ಎಂದು ತಿಳಿಸಿದರು.

ಡಾ. ಜಯದೇವ್ ಬೆಟ್‌ಕೆರೂರ್ ಮತ್ತು ಡಾ. ರಾಜ್ ಬೆಟ್‌ಕೆರೂರ್‌ರವರು ದಾನ, ಸಹಾಯದಂತಹ ಕಾರ್ಯಗಳನ್ನು ಮಾಡುವುದು ಹೆಮ್ಮೆಯ ವಿಷಯ. ವಿದ್ಯಾರ್ಥಿಗಳು ಇಂತಹ ಅವಕಾಶಗಳನ್ನು ಸದ್ವಿನಿಯೋಗಿಸಿಕೊಂಡು ಅಧ್ಯಯನ ಮಾಡಬೇಕು ಎಂದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಮಾತನಾಡಿದರು. ನಿರ್ದೇಶಕರಾದ ಶ್ರೀ ಆರ್. ಮಹೇಶ್ ಸ್ವಾಗತಿಸಿದರು. ಪೋಷಕರಾದ ಶ್ರೀ ನಂಜುಂಡಸ್ವಾಮಿ, ರಾಧಿಕರವರು ಹಾಗೂ ವಿದ್ಯಾರ್ಥಿಗಳಾದ ಕು. ನಿಶ್ಚಿತ, ಕು. ವಿಕಾಸ್, ಕು. ರಾಧಿಕರವರುಗಳು ಅನಿಸಿಕೆಗಳನ್ನು ಹಂಚಿಕೊಂಡರು. ಕು. ರಾಣಿ ಮತ್ತು ಕು. ಸ್ನೇಹರವರುಗಳು ಪ್ರಾರ್ಥನೆ ಸಲ್ಲಿಸಿದರು. ಶ್ರೀಮತಿ ರಶ್ಮಿ ಕಾರ್ಯಕ್ರಮ ನಿರೂಪಿಸಿದರು. ಮಹಾವಿದ್ಯಾಪೀಠದ ಅಧಿಕಾರಿಗಳು, ಸಂಸ್ಥೆಗಳ ಮುಖ್ಯಸ್ಥರು, ವಿದ್ಯಾರ್ಥಿಗಳು ಮತ್ತು ಪೋಷಕರುಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಗ್ರಾಮೀಣ ಪ್ರದೇಶದಲ್ಲಿ ಬೆಳೆದು ಉನ್ನತಿ ಸಾಧಿಸಿದ ಸೋಮಣ್ಣನವರು**

ಶ್ರೀ ವಿ. ಸೋಮಣ್ಣನವರು ಗ್ರಾಮೀಣ ಪ್ರದೇಶದಿಂದ ಬೆಳೆದು ಬಂದು ಉನ್ನತಿಯನ್ನು ಸಾಧಿಸಿದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 20ರಂದು ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಸಚಿವರಾದ ಶ್ರೀ ವಿ. ಸೋಮಣ್ಣನವರಿಗೆ ಅಭಿನಂದನೆ ಮತ್ತು ವಿಜಯಪಥ ಕೃತಿ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಅವರ ಜೀವನದ ಆರಂಭದಿಂದಲೂ ಕೃತಜ್ಞತಾ ಭಾವವನ್ನು ಬೆಳೆಸಿಕೊಂಡು ಬಂದಿದ್ದಾರೆ. ಜೀವನದ ಯಶಸ್ಸಿಗೆ ಕಾರಣರಾದವರನ್ನು ಇಂದಿಗೂ ಸ್ಮರಿಸಿಕೊಳ್ಳುವುದು ಅವರ ದೊಡ್ಡಗುಣ. ಅವರಿಗೆ ವಹಿಸಿದ ಯಾವುದೇ ಕೆಲಸಗಳನ್ನು ಯಶಸ್ವಿಯಾಗಿ ನಿಭಾಯಿಸುವಲ್ಲಿ ಅವರು ನಿಪುಣರು. ಹಿಡಿದ ಕೆಲಸವನ್ನು ಬಿಡದೇ ಪೂರೈಸುವ ಛಾತಿಯುಳ್ಳವರು. ಸದಾಕಾಲ ಎಲ್ಲ ಜನರ ಒಳಿತಿಗಾಗಿ ಶ್ರಮಿಸುತ್ತಿದ್ದಾರೆ. ಅವರ ಎಲ್ಲ ಸಹೋದ್ಯೋಗಿಗಳೊಂದಿಗೆ ಅತ್ಯಂತ ಆತ್ಮೀಯವಾದ ಸಂಬಂಧವನ್ನು ಹೊಂದಿದ್ದಾರೆ ಎಂದು ಹೇಳಿದರು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರು ಪ್ರಜಾಪ್ರಭುತ್ವದಲ್ಲಿ ಕ್ರಿಯಾಶೀಲ ಜನಪ್ರತಿನಿಧಿಗಳ ಅಗತ್ಯವಿದೆ. ಅಂತಹವರ ಸಾಲಿನಲ್ಲಿ ಮುಂಚೂಣಿಯಲ್ಲಿರುವ ಸಚಿವರಾದ ಶ್ರೀ ವಿ. ಸೋಮಣ್ಣನವರು ಯುವ

ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ. ಕ್ರಿಯಾಶೀಲ ವ್ಯಕ್ತಿತ್ವವೇ ಸೋಮಣ್ಣನವರ ಯಶಸ್ಸಿಗೆ ಕಾರಣ. ಸಾರ್ವಜನಿಕ ಹಿತಕ್ಕೆ ಪ್ರಾಮುಖ್ಯತೆ ನೀಡುವುದು ಅವರ ಗುಣ. ಅವರನ್ನು ಜನಪ್ರಿಯ ಮಂತ್ರಿಗಳು ಎನ್ನುವುದಕ್ಕಿಂತ ಜನೋಪಯೋಗಿ ಮಂತ್ರಿಗಳು ಎನ್ನಬಹುದು ಎಂದರು.

ಶ್ರೀ ಆದಿಚುಂಚನಗಿರಿ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಕೇಂದ್ರದ ಸಚಿವರಾದ ಶ್ರೀ ಪ್ರಲ್ಹಾದ್ ಜೋಶಿ, ಸಚಿವರುಗಳಾದ ಶ್ರೀ ವಿ. ಸೋಮಣ್ಣ, ಶ್ರೀ ಆರ್. ಅಶೋಕ್‌ರವರು ಮಾತನಾಡಿದರು. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಸ್ವಾಗತಿಸಿದರು. ಡಾ. ಬೈರಮಂಗಲ ರಾಮೇಗೌಡ ಕೃತಿಯ ಕುರಿತು ಮಾತನಾಡಿದರು. ಸಂಸದರಾದ ಶ್ರೀ ಜಿ.ಎಸ್. ಬಸವರಾಜು, ಶ್ರೀ ಪ್ರತಾಪ್ ಸಿಂಹ ಮೊದಲಾದವರುಗಳು ಉಪಸ್ಥಿತರಿದ್ದರು. ಶ್ರೀಮತಿ ದಿವ್ಯ ಆಲೂರು ಕಾರ್ಯಕ್ರಮ ನಿರೂಪಿಸಿದರು.

**ನಾಡಿಗೆ ಜ್ಞಾನದ ಬೆಳಕು ನೀಡಿದವರು ವರದಾಚಾರ್ಯರು**

ನಾಡಿಗೆ ಜ್ಞಾನದ ಬೆಳಕು ನೀಡಿದವರು ಶ್ರೀ ಕೆ.ಎಸ್. ವರದಾಚಾರ್ಯರು ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 22ರಂದು ಮೈಸೂರು ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಪಂಡಿತರತ್ನಂ ಕೆ.ಎಸ್. ವರದಾಚಾರ್ಯರ ಶತಮಾನೋತ್ಸವದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ವರದಾಚಾರ್ಯರು ವಿದ್ವತ್ ವಲಯದಲ್ಲಿ ಮೈಸೂರಿನ ಕೀರ್ತಿಯನ್ನು ಎತ್ತಿ ಹಿಡಿದರು. ಅವರು ಸ್ವಯಂಪ್ರಭೆಯಿಂದ ದೇಶ–ವಿದೇಶಗಳ ವಿದ್ವಾಂಸರನ್ನು ತಮ್ಮ ಕಡೆಗೆ ಆಕರ್ಷಿಸಿದ್ದರು ಎಂದು ಹೇಳಿದರು.

ವಿಧಾನಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಪರಕೀಯರ ಕಾರಣದಿಂದಾಗಿ ಹಣ ಗಳಿಕೆಯ ಶಿಕ್ಷಣವೇ ಸಿಕ್ಕಿದೆಯೇ ಹೊರತು ಜ್ಞಾನ ಗಳಿಕೆಯ ಶಿಕ್ಷಣ ಸಿಕ್ಕಿಲ್ಲ. ಈಗಿನ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಒಂದು ಆಶಾಕಿರಣವಾಗಿದೆ. ನೈತಿಕ ಶಿಕ್ಷಣದ ಮೌಲ್ಯಗಳನ್ನು ಹೆಚ್ಚಿಸಬೇಕು ಎಂದರು.

ಸೋಂದಾ ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು ಪರಸ್ಪರ ವಿರೋಧವಿಲ್ಲದ ರೀತಿಯಲ್ಲಿ ಹೊಂದಾಣಿಕೆಯಿಂದ ಜೀವನ ನಡೆಸಬೇಕು ಎನ್ನುವುದೇ ಧರ್ಮ. ವರದಾಚಾರ್ಯರ ಪ್ರಭಾವ ಉತ್ತರ ಭಾರತದಲ್ಲೂ ಸಾಕಷ್ಟು ಪ್ರಮಾಣದಲ್ಲಿತ್ತು. ಇಂತಹ ವಿದ್ವಾಂಸರ ಕೆಲಸವನ್ನು ದಾಖಲಿಸುವ ಕಾರ್ಯ ನಡೆಯಬೇಕು. ಅದರಿಂದ ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ. ಧರ್ಮದ ಬಗ್ಗೆ ತಿಳಿಸಿದಂತೆಯೂ ಆಗುತ್ತದೆ ಎಂದು ತಿಳಿಸಿದರು.

ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು, ಸಚಿವರಾದ ಶ್ರೀ ಬಿ.ಸಿ. ನಾಗೇಶ್, ಶಾಸಕರಾದ ಶ್ರೀ ಎಸ್.ಎ. ರಾಮದಾಸ್, ಶ್ರೀ ಹೆಚ್.ಎಸ್. ಸಚ್ಚಿದಾನಂದಮೂರ್ತಿಯವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ. ಸಿ. ಪರಮೇಶ್ವರ ನಾರಾಯಣ ಶಾಸ್ತ್ರಿ ಮತ್ತು ಡಾ. ಚಕ್ರವರ್ತಿ ರಂಗನಾಥನ್‌ರವರನ್ನು ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಸನ್ಮಾನಿಸಿದರು. 'ಸಮನ್ವಯ ವರದ' ಸಂಸ್ಮರಣ ಗ್ರಂಥವನ್ನು ಬಿಡುಗಡೆಗೊಳಿಸಲಾಯಿತು. ಡಾ. ಹೆಚ್.ವಿ. ನಾಗರಾಜರಾವ್‌ರವರು ಸಂಸ್ಮರಣ ಗ್ರಂಥ ಕುರಿತು ಮಾತನಾಡಿದರು. ಶ್ರೀ ಪವನ್ ಭಟ್ ಮತ್ತು ಶ್ರೀ ಅಭಿಷೇಕ್ ಪ್ರಾರ್ಥಿಸಿದರು. ಪ್ರೊ. ಟಿ.ಎನ್. ಪ್ರಭಾಕರ್ ಸ್ವಾಗತಿಸಿದರು. ಮೇಲುಕೋಟೆಯ ಶ್ರೀ ನಂಬಿಮಠದ ಶ್ರೀ ಬಿ.ವಿ. ಇಳೈ ಆಳ್ವಾರ್ ಸ್ವಾಮಿಗಳು, ಸಂಸದರಾದ ಶ್ರೀ ಪ್ರತಾಪ ಸಿಂಹ, ಶ್ರೀ ಡಿ.ಟಿ. ಪ್ರಕಾಶ್ ಮೊದಲಾದವರು ಉಪಸ್ಥಿತರಿದ್ದರು.

**ಯೋಗ ಮತ್ತು ಪ್ರಕೃತಿ ಚಿಕಿತ್ಸೆ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಬೇಕು**

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮಾತ್ರ ನಾವು ಮುಂದುವರೆದರೆ ಸಾಲದು, ಯೋಗ ಮತ್ತು ಪ್ರಕೃತಿ ಚಿಕಿತ್ಸೆ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಬೇಕು ಎಂದು ತಮಿಳುನಾಡು ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಆರ್.ಎನ್. ರವಿಯವರು ಅಕ್ಟೋಬರ್ 28ರಂದು ಕೊಯಮತ್ತೂರು ನವಕ್ಕರೈನಲ್ಲಿ ಜೆಎಸ್‌ಎಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನಗಳ ಸಂಸ್ಥೆಯ ವಿದ್ಯಾರ್ಥಿನಿಲಯ ಕಟ್ಟಡಗಳನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠವು ಭಾರತದ ಏಕತೆ, ಸೌಹಾರ್ದತೆ, ಸನಾತನ ಧಾರ್ಮಿಕತೆಯನ್ನು ಶತಶತಮಾನಗಳಿಂದಲೂ ಎತ್ತಿಹಿಡಿಯುವ ಕೆಲಸ ಮಾಡುತ್ತಿದೆ.

ಮೂರು ಶತಕಗಳ ವಸಾಹತುಶಾಹಿ ಭಾರತೀಯ ಪರಂಪರೆಯ ಔನ್ನತ್ಯವನ್ನು ನಾಶಮಾಡಿತು. ಆದರೆ ಈಗ ಅದೆಲ್ಲವೂ ಮರುಸ್ಥಾಪಿಸುತ್ತಿವೆ. ಸ್ವಾತಂತ್ರ್ಯಾನಂತರದಲ್ಲಿ ಆಧುನಿಕ ಶಿಕ್ಷಣವು ಭೌತಿಕತೆಯನ್ನೇ ಪ್ರಧಾನವಾಗಿ ಪ್ರತಿಪಾದಿಸಿತು. ಆದರೆ ಸ್ವಾಮಿ ವಿವೇಕಾನಂದರು ಭಾರತವು ಸದೃಢವೂ ವಿವೇಕಯುತವೂ ಆದ ಯುವಶಕ್ತಿಯನ್ನು ಹೊಂದಿದ ದೇಶವಾಗಬೇಕು ಎಂಬ ಕನಸು ಕಂಡರು. ನಮ್ಮ ದೇಶದ ಮೂಲಶಕ್ತಿಯಾದ ಆಧ್ಯಾತ್ಮಿಕತೆಯನ್ನು ಯಾರೂ ಮರೆಯುವಂತಿಲ್ಲ. ಇಡೀ ವಿಶ್ವಕ್ಕೆ ಇಂದು ಯೋಗವು ಹೊಸ ಶಕ್ತಿಯನ್ನು ತಂದುಕೊಟ್ಟಿದೆ. ಆಚಾರ, ವಿಚಾರ, ಆಹಾರಗಳು ನಮ್ಮ ಬದುಕನ್ನು ರೂಪಿಸುವ ಶಕ್ತಿಗಳಾಗಬೇಕು. ಭಾರತ ವಿಶ್ವಗುರುವಾಗುವ ದಾರಿಯಲ್ಲಿ ಎದುರಾಗುವ ಎಲ್ಲ ಅಡೆತಡೆಗಳನ್ನೂ ಭಯೋತ್ಪಾದನೆಯನ್ನೂ ನಿವಾರಿಸಿಕೊಂಡು ನಾವು ಮುಂದೆ ಹೋಗಬೇಕು ಎಂದು ಕರೆ ನೀಡಿದರು.

ದಿವ್ಯಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರುಗಳವರು ಮನುಷ್ಯನ ಶರೀರ ಪ್ರಾಕೃತಿಕವಾಗಿ ಅತ್ಯುತ್ತಮ ರೋಗನಿರೋಧಕ ಶಕ್ತಿಯನ್ನು ಹೊಂದಿದೆ. ವ್ಯಕ್ತಿಯಲ್ಲಿನ

ರೋಗನಿರೋಧಕ ಶಕ್ತಿಯನ್ನು ಸಬಲಗೊಳಿಸಬೇಕಾಗಿರುವುದು ವೈದ್ಯರ ಕರ್ತವ್ಯ. ಪ್ರಕೃತಿಯ ಜೊತೆ ಸಹಜೀವನವನ್ನು ಕಡೆಗಣಿಸುತ್ತಿರುವುದೇ ಹೆಚ್ಚಿನ ರೋಗಗಳಿಗೆ ಮೂಲವಾಗಿದೆ. ಭಾರತದ ಅತ್ಯಂತ ಪ್ರಾಚೀನ ವೈದ್ಯಕೀಯ ಪದ್ಧತಿಯಾದ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಯಾವುದೇ ಅಡ್ಡಪರಿಣಾಮಗಳಿಲ್ಲದ ವಿಶಿಷ್ಟ ಚಿಕಿತ್ಸಾ ಪದ್ಧತಿ. ಆಯುರ್ವೇದವೂ ಇದರಡಿಯಲ್ಲೇ ಬರುತ್ತಿದ್ದು ಇತ್ತೀಚೆಗೆ ರಷ್ಯಾ ಮುಂತಾದ ಪಾಶ್ಚಾತ್ಯ ದೇಶಗಳೊಡನೆ ಒಡಂಬಡಿಕೆಗಳಾಗುತ್ತಿವೆ. ಮನ್ನಣೆ ಗಳಿಸಿದೆ. ಭಾರತ ಸರ್ಕಾರವು ಸಹ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಮಾರ್ಗದರ್ಶನದಲ್ಲಿ ಈ ನಿಟ್ಟಿನಲ್ಲಿ ಕ್ರಿಯಾಶೀಲವಾಗಿದ್ದು ಜನರ ಆಸಕ್ತಿಯೂ ಹೆಚ್ಚಾಗುತ್ತಿರುವುದು ಶುಭ ಸೂಚನೆಯಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ತಮಿಳುನಾಡು ಡಾ. ಎಂ.ಜಿ.ಆರ್. ವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಸುಧಾ ಶೇಷಯ್ಯನ್‌ರವರು ಮಾನವ ಸಂಸ್ಕತಿ ಪ್ರಕೃತಿಯೊಂದಿಗಿನ ನಿಕಟ ಸಂಬಂಧವನ್ನು ಕಳೆದುಕೊಳ್ಳುತ್ತಿದೆ. ಮಾನವ ಸಂತತಿ ಪ್ರಕೃತಿಯ ಕೊಡುಗೆಯ ಬಗ್ಗೆ ನಿಜಕ್ಕೂ ಕೃತಜ್ಞತೆ ತೋರಿಸಬೇಕಾದ ಅಗತ್ಯವಿದೆ. ಮನುಷ್ಯ ದೇಹದ ಹೆಚ್ಚಿನ ಸಮಸ್ಯೆಗಳು ಪ್ರಾಕೃತಿಕ ನಿಯಮಗಳ ವಿರುದ್ಧದ ಅಭ್ಯಾಸದಿಂದಾಗಿಯೆ ಬರುತ್ತಿವೆ. ಜೆಎಸ್‌ಎಸ್ ಸಂಸ್ಥೆಯು ಕೋವಿಡ್‌ನಂತಹ ಸಾಂಕ್ರಾಮಿಕದ ತೊಂದರೆಯ ಸಂದರ್ಭದಲ್ಲಿ ಮಾಡಿರುವ ಅಮೂಲ್ಯಸೇವೆ ಪ್ರಶಂಸಾರ್ಹವಾಗಿದೆ ಎಂದು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ಉಪಸ್ಥಿತರಿದ್ದರು. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್‌ರವರು ಸ್ವಾಗತಿಸಿದರು. ಪ್ರಾಂಶುಪಾಲರಾದ ಡಾ. ದಿಲೀಪ್‌ರವರು ವಂದಿಸಿದರು. ಊಟಿ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಧನಬಾಲ್‌ರವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಜೆಎಸ್‌ಎಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನಗಳ ಸಂಸ್ಥೆಯ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು.

□

# ಪ್ರಸಾದ



## ಕೃತಿ-ಸ್ವೀಕೃತಿ

**ಶ್ರಾವಣ ಶುಭ ತೋರಣ**
ಪೂಜ್ಯ ಶ್ರೀ ಡಾ. ಸಿದ್ಧತೋಟೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು
ಪ್ರ.: ಶ್ರೀ ಕೋರಿ ಸಿದ್ಧೇಶ್ವರ ಮಹಾಸಂಸ್ಥಾನ ಮಠ, ಕಲಬುರಗಿ ಜಿಲ್ಲೆ.

**ಜೀವನವೇ ಕನ್ನಡಿ (ಕವನ ಸಂಕಲನ)**
ಸಿದ್ಧಾರ್ಥ ಭಾವಿಕಟ್ಟಿ
ಪ್ರ.: ಶ್ರೀ ಎನ್. ಶಿವಮೂರ್ತಿ ಜ್ಞಾನದೀಪಿಕ ಶೈಕ್ಷಣಿಕ ದತ್ತಿ
ಕುರುಬರಹಳ್ಳಿ, ಬೆಂಗಳೂರು
ಪು. 64, ಬೆಲೆ: 60/-

**ಫೇಸ್‌ಬುಕ್ ಪ್ರಪಂಚ**
**ಶ್ರೀಸಾಮಾನ್ಯರು ಬಹುಮಾನ್ಯರು**
ಜಯಪ್ರಕಾಶ್ ಪುತ್ತೂರು
ಪ್ರ.: ಸಪ್ನ ಬುಕ್‌ಹೌಸ್, ಬೆಂಗಳೂರು
ಪು. 200, ಬೆಲೆ: 160/-

**ಜಯಭಾರತ ಕಥಾ**
ಕೆ.ಆರ್. ಷಣ್ಮುಖಸ್ವಾಮಿ
ಪ್ರ.: ತನುಮನು ಪ್ರಕಾಶನ
ಶ್ರೀರಾಂಪುರ, ಮೈಸೂರು
ಪು. 276, ಬೆಲೆ: 275/-

**ವಸಂತ ಷೋಡಶಿ**
**(ಹದಿನಾರು ಯಕ್ಷಗಾನ ಕಾವ್ಯಗಳು)**
ಡಾ. ಕಬ್ಬಿನಾಲೆ ವಸಂತ ಭಾರದ್ವಾಜ
ಪ್ರ.: ಯಜ್ಞಲಕ್ಷ್ಮೀ ಪ್ರಕಾಶನ
ಶ್ರೀರಾಂಪುರ, ಮೈಸೂರು
ಪು. 316, ಬೆಲೆ: 300/-

**ಬೆಳ್ಳಿ ಶಾರದೆ**
ಎಚ್.ಎಂ. ಶಂಕರ ನಾರಾಯಣರಾವ್
ಪ್ರ.: ಮಹಿಮ ಪ್ರಕಾಶನ
ಕೃಷ್ಣಮೂರ್ತಿಪುರಂ, ಮೈಸೂರು
ಪು. 540. ಬೆಲೆ: 550/-

**ಭಾರತದ ರಾಷ್ಟ್ರಧ್ವಜ : ವಿಕಾಸ ಹಾಗೂ ಸಂಹಿತೆ**
ಡಾ. ಎಸ್.ಬಿ. ಬಸೆಟ್ಟಿ
ಪ್ರ.: ಶ್ರೀ ಬಸವರತ್ನ ಪ್ರಕಾಶನ
ಧಾರವಾಡ
ಪು. 234. ಬೆಲೆ: 225/-

**ಧೂಪದ ಮಕ್ಕಳು**
ಸ್ವಾಮಿ ಪೊನ್ನಾಚಿ
ಪ್ರ.: ಛಂದ ಪುಸ್ತಕ, ಬೆಂಗಳೂರು
ಪು. 108. ಬೆಲೆ: 110/-

**ನೆನಪಿನ ಬೊಗಸೆ (ಸವಿ ನೆನಪುಗಳ ಸಂಕಲನ)**
ಎಸ್. ರಾಮಪ್ರಸಾದ್
ಪ್ರ.: ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಕತ್ತರಗುಪ್ಪೆ, ಬೆಂಗಳೂರು
ಪು. 268. ಬೆಲೆ: 200/-

**ನನ್ನ ನಿನ್ನೆಗಳೊಡನೆ ಕಣ್ಣುಮುಚ್ಚಾಲೆ**
**(ಆತ್ಮಕಥೆ)**
ಪ್ರಸನ್ನಕುಮಾರ ಪುರಾಣಿಕ
ಪ್ರ.: ಶ್ರೀ ಗಿರಿ ಪ್ರಕಾಶನ, ಬೆಂಗಳೂರು
ಪು. 476. ಬೆಲೆ: 300/-

**ವಚನಸಿರಿ (ಆಧುನಿಕ ವಚನಗಳು)**
ಶೇಖರಯ್ಯ ಟಿ.ಹೆಚ್.ಎಂ.
ಪ್ರ.: ವಿಶ್ವಾಸ ಪ್ರಕಾಶನ
ಗೆದ್ದಲಗಟ್ಟೆ ಅಂಚೆ, ಕೂಡ್ಲಿಗಿ ತಾಲ್ಲೂಕು
ವಿಜಯನಗರ ಜಿಲ್ಲೆ
ಪು. 100. ಬೆಲೆ: 100/-

**ಸಿದ್ಧ ಕಲ್ಯಾಣ (ಅಭಿನಂದನ–ಗೌರವ ಗ್ರಂಥ)**
ಶರಣ ವೀರಶೆಟ್ಟಿ ಬಾವುಗೆ
ಪ್ರ.: ಚಿತ್ತರಗಿ ಶ್ರೀ ವಿಜಯ ಮಹಂತೇಶ್ವರ ಧರ್ಮ ಪ್ರಸಾರಕ ಮಂಡಲ, ಇಳಕಲ್ಲ
ಪು: 1072/- ಬೆಲೆ: 1000/-

**ಕಲ್ಯಾಣದ ಶರಣರು**
**(12ನೇ ಶತಮಾನದ ಬಸವಾದಿ ಶರಣರ ಸೂಚಿ)**
ಡಾ. ವೀರಣ್ಣ ದಂಡೆ
ಪ್ರ.: ನೀಲಗಂಗಾ ಪ್ರಕಾಶನ, ಗದಗ
ಪು: 360/- ಬೆಲೆ: 150/-

**ಸಮಗ್ರ ಸಾಹಿತ್ಯ ಸಂಪುಟ (ಭಾಗ–1)**
**ವಿಶ್ವಕರ್ಮಾ ಮಾಸಪತ್ರಿಕೆ ಮತ್ತು ನಿತ್ಯಕರ್ಮಾನುಷ್ಠಾನ ಸಂಗ್ರಹ**
ಕೆ.ಎಸ್. ಪ್ರಭಾಕರ್
ಪ್ರ.: ನಾ.ಭಾ. ಪ್ರಕಾಶನ
ಜಯನಗರ, ಬೆಂಗಳೂರು
ಬೆಲೆ: 300/-

**ಹಳ್ಳಿಪಥ**
ನಗರ್ಲೆ ಶಿವಕುಮಾರ
ಪ್ರ.: ಶ್ರೀ ಬಸವೇಶ್ವರ ಯುವಕರ ಸಂಘ
ನಗರ್ಲೆ ಗ್ರಾಮ, ನಂಜನಗೂಡು ತಾ.
ಪು: 196/-

**ಸಮಗ್ರ ಸಾಹಿತ್ಯ ಸಂಪುಟ (ಭಾಗ–2)**
**ಯಾಜುಷೀ ಗೃಹ್ಯಬೋಧಿನೀ ಪ್ರತಿಷ್ಠಾವಿಧಿ ಮತ್ತು ಶ್ರಾದ್ಧತರ್ಪಣಾ ವಿಧಿಃ**
ಕೆ.ಎಸ್. ಪ್ರಭಾಕರ್
ಪ್ರ.: ನಾ.ಭಾ. ಪ್ರಕಾಶನ
ಜಯನಗರ, ಬೆಂಗಳೂರು
ಪು: 776/- ಬೆಲೆ: 700/-

## ಲೇಖಕರ ವಿಳಾಸ

**ಡಾ. ರಾಜಶೇಖರ ಜಮದಂಡಿ**
ಬ್ಯಾಂಕರ್ಸ್ ಕಾಲೋನಿ
ಬಾಪೂಜಿ ನಗರ ರಸ್ತೆ
ಸ್ನೇಹಕಿರಣ ಶಾಲೆ ಎದುರು
ಬೋಗಾದಿ, ಮೈಸೂರು 570026
ಮೊ.: 94488441471


**ಪ್ರಕಾಶ ಗಿರಿಮಲ್ಲನವರ**
ಐ.ಟಿ.ಐ. ಕಾಲೇಜು
ಶಿವಬಸವನಗರ
ಬೆಳಗಾವಿ 590010
ಮೊ: 9902130041

**ಡಾ. ಬಸವರಾಜ ಎ. ಕಾಗಲಿ**
ವಿಶ್ರಾಂತ ಪ್ರಾಧ್ಯಾಪಕರು
ನಂ. 406, ಎಫ್ ರಸ್ತೆ, ಐಡಿಯಲ್ ಹೋಮ್ಸ್
2ನೇ ಹಂತ, ರಾಜರಾಜೇಶ್ವರಿನಗರ
ಬೆಂಗಳೂರು 560098
ಮೊ.: 9845271565

**ನಗರ್ಲೆ ಶಿವಕುಮಾರ**
ಬಿನ್ ಲೇಟ್ ಎನ್.ಎಸ್. ರಾಜಶೇಖರ
ನಗರ್ಲೆ ಅಂಚೆ
ನಂಜನಗೂಡು ತಾ.
ಮೊ: 9845609652

ಹಿಂಬದಿ ಪುಟದ ಚಿತ್ರ

ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕು ಅಂಬಿಗರಹಳ್ಳಿಯ ತ್ರಿವೇಣಿ ಸಂಗಮದಲ್ಲಿ ಏರ್ಪಡಿಸಿದ್ದ ಶ್ರೀ ಮಲೆ ಮಹದೇಶ್ವರ ಮಹಾಕುಂಭಮೇಳದ ಸಮಾರೋಪ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರು, ಶ್ರೀ ಆದಿಚುಂಚನಗಿರಿ ಜಗದ್ಗುರುಗಳವರು ಮತ್ತು ಪೇಜಾವರ ಶ್ರೀಪಾದಂಗಳವರ ಸಾನ್ನಿಧ್ಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಉದ್ಘಾಟಿಸಿದರು. ಶ್ರೀಮತಿ ಎಂ.ವಿ. ರೂಪ, ಶ್ರೀಮತಿ ಶಾಂತಾ ಎಲ್. ಹುಲ್ಮನಿ, ಅವಧೂತ ಶ್ರೀ ವಿನಯ್ ಗುರೂಜಿ, ಶ್ರೀ ಚಂದ್ರವನ ಆಶ್ರಮದ ಶ್ರೀಗಳು, ಶ್ರೀ ಮಾದಾರ ಚೆನ್ನಯ್ಯ ಶ್ರೀಗಳು, ಶ್ರೀ ಪರಮಾತ್ಮಾನಂದ ಸರಸ್ವತಿಯವರು, ಶ್ರೀ ಸಿ.ಟಿ. ರವಿ, ಸಂಸದರಾದ ಶ್ರೀಮತಿ ಸುಮಲತಾ ಅಂಬರೀಶ್, ಸಚಿವರಾದ ಶ್ರೀ ಬಿ.ಎ. ಬಸವರಾಜ, ಸಾಲೂರು ಮಠದ ಶ್ರೀಗಳು, ಶ್ರೀ ಬಿ.ಸಿ. ನಾಗೇಶ್, ಜಿಲ್ಲಾಧಿಕಾರಿಗಳಾದ ಶ್ರೀಮತಿ ಎಸ್. ಅಶ್ವಥಿಯವರುಗಳಿದ್ದಾರೆ (16 ಅಕ್ಟೋಬರ್ 2022)





ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಮತ್ತು ಶ್ರೀ ಆದಿಚುಂಚನಗಿರಿ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿದ ಸಚಿವರಾದ ಶ್ರೀ ವಿ. ಸೋಮಣ್ಣನವರ ಅಭಿನಂದನಾ ಗ್ರಂಥ 'ವಿಜಯಪಥ'ವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರು ಬಿಡುಗಡೆಗೊಳಿಸಿದರು. ಡಾ. ಸಿ. ಸೋಮಶೇಖರ್, ಶ್ರೀಮತಿ ಶೈಲಜಾ ಸೋಮಣ್ಣ, ಶ್ರೀ ವಿ. ಸೋಮಣ್ಣ, ಕೇಂದ್ರ ಸಚಿವರಾದ ಶ್ರೀ ಪ್ರಲ್ಹಾದ್ ಜೋಶಿ, ಸಚಿವರಾದ ಶ್ರೀ ಆರ್. ಅಶೋಕ್, ಸಂಸದರಾದ ಶ್ರೀ ಜಿ.ಎಸ್. ಬಸವರಾಜು ಮತ್ತು ಡಾ. ಬೈರಮಂಗಲ ರಾಮೇಗೌಡರವರುಗಳಿದ್ದಾರೆ (20 ಅಕ್ಟೋಬರ್ 2022)



ಕೆ.ಆರ್. ನಗರದಲ್ಲಿ ವೀರಶೈವ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಚಾರಿಟಬಲ್ ಟ್ರಸ್ಟ್ ವತಿಯಿಂದ ನಿರ್ಮಿಸಿರುವ ವೀರಶೈವ ವಿದ್ಯಾರ್ಥಿನಿಯರ ವಸತಿ ನಿಲಯದ ನೂತನ ಕಟ್ಟಡವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ತೋಂಟದಾರ್ಯ, ಶ್ರೀ ಎಲ್. ರೇವಣಸಿದ್ಧಯ್ಯ, ಮಾದಹಳ್ಳಿ, ಬೆಟ್ಟದಪುರ, ಗಾವಡಗೆರೆ ಮಠಗಳ ಶ್ರೀಗಳು, ಶಾಸಕರುಗಳಾದ ಶ್ರೀ ಸಾ.ರಾ. ಮಹೇಶ್ ಮತ್ತು ಶ್ರೀ ಎ.ಎಚ್. ವಿಶ್ವನಾಥ್‌ರವರುಗಳಿದ್ದಾರೆ (17 ಅಕ್ಟೋಬರ್ 2022)



ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಯುಕ್ತ ಅರಮನೆ ಆವರಣದಲ್ಲಿ ಆಯೋಜಿಸಿದ್ದ ಯೋಗ ದಸರಾವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶಾಸಕರಾದ ಶ್ರೀ ಎಸ್.ಎ. ರಾಮದಾಸ್, ಉಪಮೇಯರರಾದ ಶ್ರೀಮತಿ ರೂಪ ಮೊದಲಾದವರುಗಳಿದ್ದಾರೆ (28 ಸೆಪ್ಟೆಂಬರ್ 2022)



ಮೈಸೂರಿನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಪಂಡಿತರತ್ನಂ ಕೆ.ಎಸ್. ವರದಾಚಾರ್ಯರ ಶತಮಾನೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರು, ಶ್ರೀ ಪೇಜಾವರ ಮಠದ ಶ್ರೀಪಾದಂಗಳು ಮತ್ತು ಸೋಂದಾ ಶ್ರೀ ಸ್ವರ್ಣವಲ್ಲಿ ಮಠದ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಪ್ರತಾಪ ಸಿಂಹ, ಶ್ರೀ ಎಸ್.ಎ. ರಾಮದಾಸ್, ಶ್ರೀ ಹೆಚ್.ಎಸ್. ಸಚ್ಚಿದಾನಂದಮೂರ್ತಿ, ಶ್ರೀ ಇಳೈ ಆಳ್ವಾರ್ ಸ್ವಾಮಿಗಳು, ವಿಧಾನಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಸಚಿವರುಗಳಾದ ಶ್ರೀ ಬಿ.ಸಿ. ನಾಗೇಶ್, ಶ್ರೀ ಎಸ್.ಟಿ. ಸೋಮಶೇಖರ್, ಪ್ರೊ. ಹೆಚ್.ವಿ. ನಾಗರಾಜರಾವ್ ಮೊದಲಾದವರುಗಳಿದ್ದಾರೆ (22 ಅಕ್ಟೋಬರ್ 2022)




ಅಮೆರಿಕದ ನ್ಯೂಜೆರ್ಸಿಯ ವೀರಶೈವ ಸಮಾಜದಿಂದ ಏರ್ಪಡಿಸಿದ್ದ ಸತ್ಸಂಗದಲ್ಲಿ ಪೂಜ್ಯ ಶ್ರೀಗಳು ಆಶೀರ್ವಚನ ನೀಡುತ್ತಿರುವುದು. ವಿಎಸ್‌ಎನ್‌ಜೆ ಅಧ್ಯಕ್ಷರಾದ ಶ್ರೀ ಓಂಕಾರಮೂರ್ತಿ ಮುರುಂಡಿ, ಬೃಂದಾವನ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀಮತಿ ಪದ್ಮಿನಿ, ಹೆಚ್‌ಎಸ್‌ಬಿಬಿ ಉಪಾಧ್ಯಕ್ಷರಾದ ಡಾ. ಬಾಬು ಕಿಲಾರೆ ವೀರೇಗೌಡರವರುಗಳಿದ್ದಾರೆ (10 ಸೆಪ್ಟೆಂಬರ್ 2022)




ಅಮೆರಿಕದ ನ್ಯೂಯಾರ್ಕ್‌ನ ಬಸವ ಇಂಟರ್‌ನ್ಯಾಷನಲ್ ಕಾರ್ಪೊರೇಷನ್ ವತಿಯಿಂದ ಶ್ರೀ ಮಹಾ ವಲ್ಲಭ ಗಣಪತಿ ದೇವಸ್ಥಾನದಲ್ಲಿ ಏರ್ಪಡಿಸಿದ್ದ ಸತ್ಸಂಗದಲ್ಲಿ ಪೂಜ್ಯ ಶ್ರೀಗಳು ಆಶೀರ್ವಚನ ನೀಡುತ್ತಿರುವುದು. ಶ್ರೀ ರವಿಶಂಕರ್ ಬೋಪಲಾಪುರ, ಶ್ರೀಮತಿ ಸತ್ಯ ವಿಶ್ವನಾಥ್ ಹಾಗೂ ಡಾ. ಅನಿಲ್ ಪಾಟೀಲ್‌ರವರುಗಳಿದ್ದಾರೆ (11 ಸೆಪ್ಟೆಂಬರ್ 2022)




ಅಮೆರಿಕದ ಷಿಕಾಗೋದಲ್ಲಿ ಏರ್ಪಡಿಸಿದ್ದ ವಿದ್ಯಾರಣ್ಯ ಕನ್ನಡ ಕೂಟದ ಸುವರ್ಣ ಮಹೋತ್ಸವವನ್ನು ಸುತ್ತೂರು ಹಾಗೂ ಪುತ್ತಿಗೆ ಶ್ರೀಗಳವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಶ್ರೀ ಆಶಾ ಗುರುದತ್ತ, ಶ್ರೀ ಶ್ರೀನಿವಾಸ ಭಟ್ಟ ಮತ್ತು ಶ್ರೀ ರಾಜೇಶ್ ಕೃಷ್ಣನ್ ರವರುಗಳಿದ್ದಾರೆ (17 ಸೆಪ್ಟೆಂಬರ್ 2022)




ಅಮೆರಿಕದ ಷಿಕಾಗೋದ ಅರೋರಾ ಬಡಾವಣೆಯ ಶ್ರೀ ಅಮಿತ್ ಮತ್ತು ಶ್ರೀಮತಿ ಸುಪ್ರಿಯಾ ಅಂಟಿನರವರ ನಿವಾಸದಲ್ಲಿ ಏರ್ಪಡಿಸಿದ್ದ ಸತ್ಸಂಗದಲ್ಲಿ ಪರಮಪೂಜ್ಯ ಜಗದ್ಗುರುಗಳು ಆಶೀರ್ವಚನ ನೀಡುತ್ತಿರುವುದು (15 ಸೆಪ್ಟೆಂಬರ್ 2022)




ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಫ್ರಾನ್ಸ್ ದೇಶದ ಡಸಾಲ್ಟ್ ಸಿಸ್ಟಮೆಸ್ ಸಹಯೋಗದಲ್ಲಿ 3ಡಿ ಎಕ್ಸ್‌ಪೀರಿಯನ್ಸ್ ನಾವೀನ್ಯತಾ ಕೇಂದ್ರದ ಸ್ಥಾಪನೆಗೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಡಾ. ಎಚ್.ಆರ್. ಮಹದೇವಸ್ವಾಮಿ, ಪ್ರೊ. ಎಂ.ಎಚ್. ಧನಂಜಯ, ಶ್ರೀ ಎನ್.ಜಿ. ದೀಪಕ್, ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಎ.ಎನ್. ಸಂತೋಷ್‌ಕುಮಾರ್‌ರವರುಗಳಿದ್ದಾರೆ (28 ಸೆಪ್ಟೆಂಬರ್ 2022)




ಅಮೆರಿಕದ ನ್ಯೂ ಇಂಗ್ಲೆಂಡ್‌ನ ವೀರಶೈವ ಸಮಾಜದ ವತಿಯಿಂದ ಬಾಸ್ಟನ್‌ನಲ್ಲಿ ಏರ್ಪಡಿಸಿದ್ದ ಸತ್ಸಂಗದಲ್ಲಿ ಪೂಜ್ಯ ಶ್ರೀಗಳು ಆಶೀರ್ವಚನ ನೀಡುತ್ತಿರುವುದು. ಶ್ರೀ ರಾಕೇಶ್, ಆಲಮಟ್ಟಿ ಡಾ. ರುದ್ರಮುನಿದೇವರು, ಶ್ರೀ ಮಧು ಅಕ್ಕಿಹೆಬ್ಬಾಳ್ ಹಾಗೂ ವಿಎಸ್‌ಎನ್‌ಇ ಅಧ್ಯಕ್ಷರಾದ ಶ್ರೀ ರುದ್ರೇಶ್‌ರವರುಗಳಿದ್ದಾರೆ (13 ಸೆಪ್ಟೆಂಬರ್ 2022)



ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 14ನೇ ಪದವೀಧರರ ದಿನಾಚರಣೆ. ಡಾ. ಶಿವಾನಂದ ಭಾರತಿ, ಪ್ರೊ. ಕೆ.ಎಸ್. ಸುರೇಶ್, ಗೌ.ನ್ಯಾ. ಶ್ರೀ ಎ.ಎಸ್. ಬೋಪಣ್ಣ, ಗೌ.ನ್ಯಾ. ಶ್ರೀ ಪಿ.ಎಸ್. ದಿನೇಶ್ ಕುಮಾರ್, ಡಾ. ಸಿ.ಜಿ. ಬೆಟಸೂರಮಠ, ಡಾ. ಎಸ್. ನಟರಾಜು ಹಾಗೂ ರ್‍ಯಾಂಕ್ ಪಡೆದ ಪದವೀಧರರುಗಳಿದ್ದಾರೆ (1 ಅಕ್ಟೋಬರ್ 2022)



ಮೈಸೂರು ಸಿದ್ಧಾರ್ಥನಗರದ ಬ್ಯಾಂಕ್ ಆಫ್ ಬರೋಡಾ ಶಾಖೆಯನ್ನು ಪರಮಪೂಜ್ಯ ಜಗದ್ಗುರುಗಳವರು ಉದ್ಘಾಟಿಸುತ್ತಿರುವುದು. ಶ್ರೀ ಎಚ್. ರಮೇಶ್, ಶ್ರೀ ಸುಧಾಕರ್ ಡಿ. ನಾಯಕ್, ಶ್ರೀ ಅನುಜ್ ಅವಸ್ಥಿ, ಶ್ರೀ ಎಂ. ಲೋಕೇಶ್ ಮೊದಲಾದವರುಗಳಿದ್ದಾರೆ (28 ಸೆಪ್ಟೆಂಬರ್ 2022)



ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ವಿವಿಯ ಜೆನೆಟಿಕ್ಸ್ ಆ್ಯಂಡ್ ಜೆನೋಮಿಕ್ಸ್ ವಿಭಾಗದ ಮುಖ್ಯಸ್ಥರಾದ ಪ್ರೊ. ಸುತ್ತೂರು ಎಸ್. ಮಾಲಿನಿಯವರ **"ಮಾತು ವಿತ್ ಮಾಲಿನಿ"** ಯು–ಟ್ಯೂಬ್ ಚಾನಲನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಪ್ರೊ. ಎಸ್.ಎನ್. ಹೆಗ್ಡೆ, ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್, ಶ್ರೀ ಎಚ್.ಆರ್. ರಂಗನಾಥ್, ಪ್ರೊ. ಎಂ. ಪುಷ್ಪಾವತಿ ಮತ್ತು ಸಂಸದರಾದ ಶ್ರೀ ಪ್ರತಾಪ ಸಿಂಹರವರುಗಳಿದ್ದಾರೆ (1 ಅಕ್ಟೋಬರ್ 2022)



ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಮತ್ತು ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಮೈಸೂರು ಜಿಲ್ಲಾ ಕದಳಿ ಮಹಿಳಾ ಸಮಾವೇಶವನ್ನು ಅದಮ್ಯ ಚೇತನ ವ್ಯವಸ್ಥಾಪಕ ಟ್ರಸ್ಟಿಗಳಾದ ಡಾ. ತೇಜಸ್ವಿನಿ ಅನಂತಕುಮಾರ್‌ರವರು ಉದ್ಘಾಟಿಸಿದರು. ಶ್ರೀಮತಿ ಸುಶೀಲಾ ಸೋಮಶೇಖರ್, ಶ್ರೀಮತಿ ಶಾರದ ಶಿವಲಿಂಗಸ್ವಾಮಿ, ಪ್ರೊ. ಮಲೆಯೂರು ಗುರುಸ್ವಾಮಿ, ಶ್ರೀ ಮ.ಗು. ಸದಾನಂದಯ್ಯ ಮತ್ತು ಶ್ರೀ ಹೆಳವರಹುಂಡಿ ಸಿದ್ಧಪ್ಪರವರುಗಳಿದ್ದಾರೆ (10 ಅಕ್ಟೋಬರ್ 2022)



ಅಮೆರಿಕದ ಮೇರಿಲ್ಯಾಂಡ್‌ನ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನಲ್ಲಿ ಪರಮಪೂಜ್ಯ ಜಗದ್ಗುರುಗಳವರನ್ನು ಅಂತಾರಾಷ್ಟ್ರೀಯ ವೃತ್ತಿಪರ ಲೆಕ್ಕ ಪರಿಶೋಧಕರ ಸಂಘದ ಅಧ್ಯಕ್ಷರಾದ ಶ್ರೀ ಅನೂಪ್ ನಟ್ವರ್ ಮೆಹ್ತಾರವರು ಭೇಟಿ ಮಾಡಿದಾಗ ಪೂಜ್ಯರು ಗೌರವಿಸಿ ಆಶೀರ್ವದಿಸಿದರು. ಶ್ರೀ ಲಲಿತ್ ಗೋಹಿಲ್, ಶ್ರೀ ಉಮೇಶ್ ಮೂರ್ತಿ, ಶ್ರೀ ಆರ್. ಮಹೇಶ್, ಶ್ರೀ ಕುಮಾರ್ ರಾಜಶೇಖರ, ಶ್ರೀ ಶಿವಾನಂದ ಮತ್ತು ಶ್ರೀ ಸಂಜಾತ ಸೂಲ್ಕುಂಟೆಯವರುಗಳಿದ್ದಾರೆ (25 ಆಗಸ್ಟ್ 2022)



ಅಮೆರಿಕದ ಮೇರಿಲ್ಯಾಂಡ್‌ನ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ಗೆ ಪರಮಪೂಜ್ಯ ಜಗದ್ಗುರುಗಳವರ ದರ್ಶನಕ್ಕೆ ಖ್ಯಾತ ಗಾಯಕರಾದ ಶ್ರೀ ವಿಜಯ್ ಪ್ರಕಾಶ್‌ರವರು ಆಗಮಿಸಿದ್ದಾಗ ಪೂಜ್ಯರು ಸನ್ಮಾನಿಸಿ ಆಶೀರ್ವದಿಸಿದರು. ಕಾವೇರಿ ಕನ್ನಡ ಕೂಟದ ಪದಾಧಿಕಾರಿಗಳಾದ ಶ್ರೀ ದೊಡ್ಡಣ್ಣ ರಾಜಶೇಖರ್, ಶ್ರೀ ಸುದರ್ಶನ್, ಶ್ರೀ ಶರತ್ ಗುಮಾಸ್ತೆ, ಶ್ರೀಮತಿ ಶೈಲಾ ಗುಮಾಸ್ತೆ, ಶ್ರೀ ಸತೀಶ್, ಶ್ರೀ ಸಂಜಯ್ ರಾವ್, ಶ್ರೀ ಕಾವೇರಿ ಕೃಷ್ಣಮೂರ್ತಿ ಹಾಗೂ ಶ್ರೀ ಬಿಂದುಮಾಧವರಾವ್‌ರವರುಗಳಿದ್ದಾರೆ (24 ಆಗಸ್ಟ್ 2022)




ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಪಂ. ರಾಜೀವ್ ತಾರಾನಾಥ್‌ರವರ 90ನೇ ಹುಟ್ಟುಹಬ್ಬದ ಸಂಭ್ರಮದಲ್ಲಿ 'ಪಂಡಿತ್ ರಾಜೀವ್ ತಾರಾನಾಥ್ ಸರೋದ್ ಸ್ವರಯಾನ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಗಣೇಶ್ ಅಮೀನಗಡ, ಉಸ್ತಾದ್ ಫೈಯಾಜ್ ಖಾನ್, ಸಾಹಿತಿಗಳಾದ ಶ್ರೀ ಚಂದ್ರಶೇಖರ್ ಕಂಬಾರ, ಡಾ. ಮನು ಬಳಿಗಾರ್ ಮೊದಲಾದವರುಗಳಿದ್ದಾರೆ (17 ಅಕ್ಟೋಬರ್ 2022)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಡಾ. ವಸಂತ್ ಬೆಟ್‌ಕೆರೂರ್ ಮತ್ತು ಡಾ. ಮಂಗಳ ಬೆಟ್‌ಕೆರೂರ್‌ರವರು ಸ್ಥಾಪಿಸಿರುವ ದತ್ತಿನಿಧಿಯ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಶ್ರೀಮತಿ ಉಷಾ ಜಯಶಂಕರ್, ಶ್ರೀಮತಿ ಸುಮಾ ಹಿಂಚಿಗೇರಿ, ಶ್ರೀಮತಿ ಸುನೀತ ಬೆಟ್‌ಕೆರೂರ್, ಡಾ. ಸಿ.ಜಿ. ಬೆಟಸೂರಮಠ, ಡಾ. ಜಯದೇವ್ ಬೆಟ್‌ಕೆರೂರ್ ಮತ್ತು ಡಾ. ರಾಜ್ ಬೆಟ್‌ಕೆರೂರ್, ಶ್ರೀಮತಿ ವಿದ್ಯಾ ಬೆಟ್‌ಕೆರೂರ್, ಡಾ. ಅಕ್ಕಮಹಾದೇವಿ ಮತ್ತು ಪುರಸ್ಕೃತ ವಿದ್ಯಾರ್ಥಿಗಳಿದ್ದಾರೆ (19 ಅಕ್ಟೋಬರ್ 2022)




ಬೆಂಗಳೂರು ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ಆಯೋಜಿಸಿದ್ದ ನಗರ ಜಿಲ್ಲಾ 6ನೆಯ ಶರಣ ಸಾಹಿತ್ಯ ಸಮ್ಮೇಳನ ಹಾಗೂ ಕದಳಿ ಮಹಿಳಾ ಸಮಾವೇಶ ಸಮಾರೋಪದಲ್ಲಿ ಸಾನ್ನಿಧ್ಯ ವಹಿಸಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು. ಪ್ರೊ. ಕೆ.ವೈ. ನಾರಾಯಣಸ್ವಾಮಿ ಡಾ. ಎಂ.ಎಸ್. ಆಶಾದೇವಿ, ಪ್ರೊ. ಎಲ್.ಎನ್. ಮುಕುಂದರಾಜ್, ಶ್ರೀ ಕೆ.ವಿ. ನಾಗರಾಜಮೂರ್ತಿಯವರುಗಳಿದ್ದಾರೆ (22 ಅಕ್ಟೋಬರ್ 2022)



ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಡಾ. ಡಿ.ಎ. ಶಂಕರ್‌ರವರ 'ವಾಗರ್ಥ, ಶರಣರ ಸುತ್ತ ಮತ್ತು ಅಜ್ಜ ಪ್ರತ್ಯಕ್ಷ' ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಎಂ. ಚಂದ್ರಶೇಖರ್, ಶ್ರೀ ಡಿ.ಎನ್. ಲೋಕಪ್ಪ, ಡಾ. ಡಿ.ಎ. ಶಂಕರ್, ಶ್ರೀ ಮಡ್ಡಿಕೆರೆ ಗೋಪಾಲ್, ಡಾ. ಬಿ.ವಿ. ವಸಂತಕುಮಾರ್ ಮತ್ತು ಡಾ. ಎನ್.ಎಂ. ತಳವಾರ್‌ರವರುಗಳಿದ್ದಾರೆ (18 ಅಕ್ಟೋಬರ್ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಸಂಸದರು ಹಾಗೂ ಕಾಂಗ್ರೆಸ್ ಮುಖಂಡರಾದ ಶ್ರೀ ರಾಹುಲ್ ಗಾಂಧಿಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದು ಸಮಾಲೋಚಿಸಿದರು. ಶ್ರೀ ಕೆ.ಸಿ. ವೇಣುಗೋಪಾಲ್, ಶ್ರೀ ಸಿದ್ದರಾಮಯ್ಯ, ಶ್ರೀ ಡಿ.ಕೆ. ಶಿವಕುಮಾರ್ ಮತ್ತು ಶ್ರೀ ರಂದೀಪ್ ಸಿಂಗ್ ಸುರ್ಜೇವಾಲ ಮೊದಲಾದವರುಗಳಿದ್ದಾರೆ (2 ಅಕ್ಟೋಬರ್ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ರಾಜ್ಯಸಭಾ ಸದಸ್ಯ ಹಾಗೂ ಮಾಜಿ ಸಚಿವರಾದ ಶ್ರೀ ಮಲ್ಲಿಕಾರ್ಜುನ್ ಖರ್ಗೆಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು. ಶ್ರೀ ಹೆಚ್.ಪಿ. ಮಂಜುನಾಥ್, ಶ್ರೀ ಆರ್. ಧ್ರುವನಾರಾಯಣ್ ಮೊದಲಾದವರಗಳಿದ್ದಾರೆ (5 ಅಕ್ಟೋಬರ್ 2022)

Registered with the Registrar of Newspapers in India Under No. 50622/86
'Prasada' Bi-Monthly, Vol. 37 Issue No. 5, September-October 2022



ಬಿಡಿ ಪ್ರತಿ: ರೂ. 10

e-mail: prasadamagazine@gmail.com ⋆ www.jssonline.org